ಸೋಮವಾರ, ಮಾರ್ಚ್ 10, 2025 | ₹ 7.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾರತ 'ಚಾಂಪಿಯನ್ಸ್'



ದುಬೈನಲ್ಲಿ ಭಾನುವಾರ ನಡೆದ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಜಯಿಸಿದ ಭಾರತ ಕ್ರಿಕೆಟ್ ತಂಡ ಪ್ರಶಸ್ತಿಯೊಂದಿಗೆ ಸಂಭ್ರಮಿಸಿತು —ಪಿಟಿಐ ಚಿತ್ರ

ಚಾಂಪಿಯನ್ಸ್ ಟ್ರೋಫಿ 2025ರ ಮೈಲಿಗಲ್ಲುಗಳು

263 ನ್ಯೂಜಿಲೆಂಡ್‌ನ ರಚಿನ್ ರವೀಂದ್ರ ನಾಲ್ಕು ಪಂದ್ಯಗಳಲ್ಲಿ ಗಳಿಸಿದ ಒಟ್ಟು ರನ್. ಇದು ಈ ಬಾರಿಯ ಚಾಂಪಿಯನ್ಸ್ ಟ್ರೋಫಿಯಲ್ಲಿ ದಾಖಲಾದ ಗರಿಷ್ಠ ಮೊತ್ತ. ಇಂಗ್ಲೆಂಡ್‌ನ ಬೆನ್ ಡಕೆಟ್ (227) ನಂತರದ ಸ್ಥಾನದಲ್ಲಿದ್ದಾರೆ

10 ನ್ಯೂಜಿಲೆಂಡ್‌ನ ಮ್ಯಾಟ್ ಹೆನ್ರಿ ನಾಲ್ಕು ಪಂದ್ಯಗಳಲ್ಲಿ ಗಳಿಸಿದ ಒಟ್ಟು ವಿಕೆಟ್‌ಗಳು. ಗರಿಷ್ಠ ವಿಕೆಟ್ ದಾಖಲೆ ಇದಾಗಿದೆ. ಭಾರತದ ಮೊಹಮ್ಮದ್ ಶಮಿ, ವರುಣ್ ಚಕ್ರವರ್ತಿ ಮತ್ತು ಕಿವೀಸ್‌ನ ಮಿಚೆಲ್ ಸ್ಯಾಂಟನರ್ (ತಲಾ 9) ನಂತರದ ಸ್ಥಾನದಲ್ಲಿದ್ದಾರೆ

42ಕ್ಕೆ5 ನ್ಯೂಜಿಲೆಂಡ್‌ನ ಮ್ಯಾಟ್ ಹೆನ್ರಿ (ಭಾರತ ವಿರುದ್ಧ) ಮತ್ತು ಭಾರತದ ವರುಣ್ ಚಕ್ರವರ್ತಿ (ನ್ಯೂಜಿಲೆಂಡ್ ವಿರುದ್ಧ) ಅವರ ಶ್ರೇಷ್ಠ ಬೌಲಿಂಗ್. ಇದು ಈ ಆವೃತ್ತಿಯಲ್ಲಿ ದಾಖಲಾದ ಶ್ರೇಷ್ಠ ಬೌಲಿಂಗ್ ದಾಖಲೆ.

7 ಭಾರತದ ವಿರಾಟ್ ಕೊಹ್ಲಿ ಮತ್ತು ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಪಡೆದ ಕ್ಯಾಚ್‌ಗಳು. ಈ ಆವೃತ್ತಿಯಲ್ಲಿ ಫೀಲ್ಡರ್ ಪಡೆದ ಗರಿಷ್ಠ ಕ್ಯಾಚ್ ಇದಾಗಿದೆ

ಪ್ರಜಾವಾಣಿ ವಾರ್ತೆ

ದುಬೈ: ಮರಳುಗಾಡಿನ ಅಂಗಳದಲ್ಲಿ ಭಾನುವಾರ ರಾತ್ರಿ ತ್ರಿವರ್ಣ ಧ್ವಜದ ಸಂಭ್ರಮ ಗಗನಮುಖಿ ಯಾಯಿತು. ರೋಹಿತ್ ಶರ್ಮಾ ನಾಯಕತ್ವದ ಭಾರತ ಕ್ರಿಕೆಟ್ ತಂಡಕ್ಕೆ 12 ವರ್ಷಗಳ ನಂತರ ಚಾಂಪಿಯನ್ಸ್ ಟ್ರೋಫಿ ಒಲಿಯಿತು.

ರೋಚಕ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 4 ವಿಕೆಟ್‌ಗಳಿಂದ ಸೋಲಿಸಿದ ಭಾರತ 'ಚಾಂಪಿಯನ್' ಆಯಿತು. ಇದರೊಂದಿಗೆ ಈ ಟೂರ್ನಿಯ ಇತಿಹಾಸದಲ್ಲಿ ಭಾರತವು 3ನೇ ಬಾರಿ ಪ್ರಶಸ್ತಿ ಗೆದ್ದಿತು. 2002ರಲ್ಲಿ ಶ್ರೀಲಂಕಾದೊಂದಿಗೆ ಜಂಟಿಯಾಗಿ ಪ್ರಶಸ್ತಿ ಹಂಚಿಕೊಂಡಿತ್ತು. 2013ರಲ್ಲಿ ಮಹೇಂದ್ರಸಿಂಗ್ ಧೋನಿ ಬಳಗವು ಪ್ರಶಸ್ತಿ ಗೆದ್ದಿತ್ತು. 2017ರಲ್ಲಿಯೂ ಫೈನಲ್ ತಲುಪಿದ್ದ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡವು ಪಾಕಿಸ್ತಾನದ ಎದುರು ಪರಾಭವಗೊಂಡಿತ್ತು. ಇದೀಗ ಪಾಕಿಸ್ತಾನದ ಆತಿಥ್ಯದಲ್ಲಿ ನಡೆದ ಟೂರ್ನಿಯಲ್ಲಿ ಕಿರೀಟ ಧರಿಸಿತು.

ಅಲ್ಲದೇ 25 ವರ್ಷಗಳ ಹಿಂದೆ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ಅನುಭವಿಸಿದ್ದ ಸೋಲಿಗೂ ಸೇಡು ತೀರಿಸಿಕೊಂಡಿತು. 252 ರನ್ ಗುರಿ ಬೆನ್ನಟ್ಟಿದ ಭಾರತ 49 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 254 ರನ್ ಗಳಿಸಿತು.

ಇನ್ನಷ್ಟು ಸುದ್ದಿಗಳು 10

ಭಾರತ ತಂಡಕ್ಕೆ ₹20 ಕೋಟಿ ಬಹುಮಾನ

ಐಸಿಸಿ ಚಾಂಪಿಯನ್ಸ್ ಟ್ರೋಫಿ ವಿಜೇತ ಭಾರತ ತಂಡವು ಸುಮಾರು ₹20 ಕೋಟಿ ಬಹುಮಾನವನ್ನು ತನ್ನದಾಗಿಸಿಕೊಂಡಿತು. ರನ್ನರ್ ಅಪ್ ನ್ಯೂಜಿಲೆಂಡ್ ತಂಡಕ್ಕೆ ₹10 ಕೋಟಿ ಬಹುಮಾನ ಸಂದಿತು.

ಟೂರ್ನಿಯು ಒಟ್ಟು ₹60 ಕೋಟಿ ಬಹುಮಾನ ಮೊತ್ತ ಒಳಗೊಂಡಿತ್ತು. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಈ ಬಾರಿ ನಗದು ಪುರಸ್ಕಾರವನ್ನು ಶೇ 53ರಷ್ಟು ಹೆಚ್ಚಳ ಮಾಡಿತ್ತು.

ನಿವೃತ್ತಿ ಆಗಲ್ಲ: ರೋಹಿತ್

ಏಕದಿನ ಕ್ರಿಕೆಟ್ ಮಾದರಿಯಿಂದ ನಾನು ಈಗಲೇ ನಿವೃತ್ತಿಯಾಗುವುದಿಲ್ಲ. ದಯವಿಟ್ಟು ವದಂತಿಗಳನ್ನು ಹಬ್ಬಿಸಬೇಡಿ. ಭವಿಷ್ಯದ ಯೋಜನೆಗಳೇನೂ ಇಲ್ಲ. ಏನು ನಡೆಯುತ್ತಿದೆಯೋ ಅದು ಹೀಗೆಯೇ ಮುಂದುವರಿಯಲಿ.

ರೋಹಿತ್ ಶರ್ಮಾ, ಭಾರತ ಕ್ರಿಕೆಟ್ ತಂಡದ ನಾಯಕ

ದಶಕವಾದರೂ ಮರಳದ ಸಿಬ್ಬಂದಿ

ಆಹಾರ ಸುರಕ್ಷತಾಧಿಕಾರಿ ಹುದ್ದೆ: ಬಿಬಿಎಂಪಿ, ಪಾಲಿಕೆ, ನಗರಸಭೆಗಳಲ್ಲೇ ಬಾಕಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಆರೋಗ್ಯ ಇಲಾಖೆಯ ನೂರಕ್ಕೂ ಹೆಚ್ಚು ನೌಕರರು ನಿಯೋಜನೆ ಮೇಲೆ ತೆರಳಿ ಒಂದು ದಶಕ ಕಳೆದಿದ್ದರೂ ರಾಜಕೀಯ ಪ್ರಭಾವ ಬಳಸಿಕೊಂಡು ಅನ್ಯ ಇಲಾಖೆ, ಪ್ರಾಧಿಕಾರಗಳಲ್ಲೇ ನೆಲೆಯೂರಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಿರಿಯ–ಕಿರಿಯ ಆರೋಗ್ಯ ಸಹಾಯಕರು, ಮಹಿಳಾ–ಪುರುಷ ಆರೋಗ್ಯ ಸಹಾಯಕರು, ಪ್ರಾಥಮಿಕ ಆರೋಗ್ಯ ಅಧಿಕಾರಿಗಳು, ಶುಶ್ರೂಷಣಾ ಅಧಿಕಾರಿಗಳು ಗ್ರಾಮೀಣ ಹಾಗೂ ನಗರ ಪ್ರದೇಶದ ಜನರ ಪ್ರಾಥಮಿಕ ಆರೋಗ್ಯ ಸೇವೆಯ ಕಾರ್ಯಕ್ಕೆ ನೇಮಕವಾಗಿದ್ದರೂ ಆ ಕೆಲಸಗಳನ್ನು ನಿರ್ವಹಿಸದೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಗಳಿಗೆ ನಿಯೋಜನೆಗೊಂಡು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ 'ಲಾಭದಾಯಕ ಹುದ್ದೆ'ಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಕರ್ನಾಟಕ ನಾಗರಿಕ ಸೇವಾ ನಿಯಮದ ಅನ್ವಯ ಒಂದು ಇಲಾಖೆಯಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರು ಕನಿಷ್ಠ 3 ವರ್ಷ, ಗರಿಷ್ಠ 5 ವರ್ಷ ನಿಯೋಜನೆ ಮೇಲೆ ತೆರಳಬಹುದು. ಅವಧಿ ಮುಗಿದ ತಕ್ಷಣ ಮಾತೃ ಇಲಾಖೆಗೆ ಮರಳಬೇಕಾಗುತ್ತದೆ. ಆದರೆ, ಆರೋಗ್ಯ ಇಲಾಖೆಯ 101 ನೌಕರರು ದಶಕದ ಹಿಂದೆ ಅನ್ಯ ಇಲಾಖೆ, ಪ್ರಾಧಿಕಾರಕ್ಕೆ ನಿಯೋಜನೆ ಮೇಲೆ ತೆರಳಿದ್ದು, ವಾಪಸ್ ಬರುವಂತೆ ಹಲವು ಬಾರಿ ಸುತ್ತೋಲೆ ಹೊರಡಿಸಿದರೂ ಮಾತೃ ಇಲಾಖೆಗೆ ಮರಳಿಲ್ಲ.

ಬಹುತೇಕ ನೌಕರರು ಬೃಹತ್ ಬೆಂಗಳೂರು ನಗರ ಪಾಲಿಕೆ (ಬಿಬಿಎಂಪಿ), ನಗರ ಪಾಲಿಕೆಗಳು, ನಗರಸಭೆ, ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರಗಳಲ್ಲಿ ಆಹಾರ ಸುರಕ್ಷತಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಕೋರ್ಟ್ ಆದೇಶಕ್ಕೂ ಇಲ್ಲ ಮನ್ನಣೆ: ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿ ಕಾರ್ಯಕಾರಿ ಆದೇಶದ ಮೇಲೆ ಸೀಮಿತ ಅವಧಿಗೆ ನಿಯೋಜನೆಗೊಂಡಿದ್ದು, ನಂತರವೂ ಅದೇ ಹುದ್ದೆಯಲ್ಲಿ ಮುಂದುವರಿಯಲು ಹಕ್ಕು ಇರುವುದಿಲ್ಲ. ಆ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ನೇಮಕಾತಿ ಮಾಡಬೇಕು ಎಂದು ಹೈಕೋರ್ಟ್ ಮಾರ್ಚ್ 2022ರಲ್ಲಿ ತೀರ್ಪು ನೀಡಿತ್ತು. ನಿಯೋಜನೆ ಮೇಲೆ ನೇಮಕಗೊಂಡವರಿಗೆ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಯ ಮೇಲೆ ಹಕ್ಕು ಇಲ್ಲ. ಆರೋಗ್ಯ ಇಲಾಖೆಯಿಂದಲೇ ಅವರ ವೇತನ, ಸೌಲಭ್ಯ ಪಡೆಯಬೇಕು ಎಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಸಹ ಆಗಸ್ಟ್ 2023ರಲ್ಲಿ ಆದೇಶ ನೀಡಿತ್ತು.

ಸಿ–ವೃಂದಕ್ಕೆ ಬಿ–ವೃಂದದ ಅಧಿಕಾರ

ಯಾವುದೇ ಇಲಾಖೆಯ ನೌಕರರು ಆಹಾರ ಸುರಕ್ಷತಾ ಅಧಿಕಾರಿಗಳಾಗಿ ಕೆಲಸ ಮಾಡಬೇಕಾದರೆ ಆಹಾರ ತಂತ್ರಜ್ಞಾನ, ಕೃಷಿ ಪದವಿ, ಸೂಕ್ಷ್ಮಾಣು ಶಾಸ್ತ್ರ, ರಸಾಯನ ವಿಜ್ಞಾನ ವಿಷಯಗಳಲ್ಲಿ ಪದವಿ ಪಡೆದಿರಬೇಕು. ಆದರೆ, ನಿಯೋಜನೆಗೊಂಡ ಆರೋಗ್ಯ ಇಲಾಖೆಯ ಬಹುತೇಕ ನೌಕರರು ನಕಲಿ ಪ್ರಮಾಣಪತ್ರ ಸಲ್ಲಿಸಿ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ ಎಂದು ಬಿಬಿಎಂಪಿ ವ್ಯಾಪ್ತಿಯ ವೈದ್ಯರೊಬ್ಬರು ಆರೋಗ್ಯ ಇಲಾಖೆಗೆ ದೂರು ಸಲ್ಲಿಸಿದ್ದಾರೆ.

ಆಹಾರ ಸುರಕ್ಷತಾ ಅಧಿಕಾರಿಗಳ ಹುದ್ದೆಗೆ ನೇಮಕವಾಗುವವರು ಬಿ–ವೃಂದದ ಅಧಿಕಾರಿಯಾಗಿರಬೇಕು. ಈ ಹುದ್ದೆಗೆ ನಿಯೋಜನೆಗೊಂಡ ಆರೋಗ್ಯ ಇಲಾಖೆಯ ಬಹುತೇಕ ನೌಕರರು ಸಿ–ವೃಂದಕ್ಕೆ ಸೇರಿದ ಕಿರಿಯ ಹಾಗೂ ಹಿರಿಯ ಆರೋಗ್ಯ ಸಹಾಯಕರು.

ಆಹಾರ ಸುರಕ್ಷತೆ ಮಂಡಳಿ, ಆಹಾರ ಸುರಕ್ಷತೆ ಪ್ರಾಧಿಕಾರಗಳಲ್ಲಿ ಸಿಬ್ಬಂದಿ ಕೊರತೆಯ ಕಾರಣ 2013ರಲ್ಲಿ ಕಾರ್ಯಕಾರಿ ಆದೇಶದ ಮೇಲೆ ಆರೋಗ್ಯ ಇಲಾಖೆಯ ನೌಕರರನ್ನು ವಿಶೇಷ ಪ್ರಭಾರದ ಮೇಲೆ ಆರು ತಿಂಗಳಿಗೆ ನೇಮಕ ಮಾಡಲಾಗಿತ್ತು. ಅಲ್ಲಿಂದ ಇಲ್ಲಿಯವರೆಗೂ ಮುಂದುರಿಕೆ ಆದೇಶವಿಲ್ಲದೇ, ನಿಯಮಕ್ಕೆ ವಿರುದ್ಧವಾಗಿ ಅದೇ ಹುದ್ದೆಗಳಲ್ಲಿ ಇದ್ದಾರೆ.

ಆರೋಗ್ಯ ಇಲಾಖೆ 2017, 2020, 2021ರಲ್ಲಿ ಸುತ್ತೋಲೆ ಹೊರಡಿಸಿ, ಮಾತೃ ಇಲಾಖೆಗೆ ಮರಳುವಂತೆ ಸೂಚಿಸಿತ್ತು. ಈಗ ಮತ್ತೊಂದು ಸುತ್ತೋಲೆ ಹೊರಡಿಸಲಾಗಿದೆ.

ಅಂಕಿ ಅಂಶಗಳು

101 ಆರೋಗ್ಯ ಇಲಾಖೆಯ ನಿಯೋಜಿತ ಸಿಬ್ಬಂದಿ

22 ಬಿಬಿಎಂಪಿಯಲ್ಲಿನ ಹುದ್ದೆಗಳಿಗೆ ನಿಯೋಜನೆ

7 ಬೆಂಗಳೂರು ವ್ಯಾಪ್ತಿಯ ವಿವಿಧೆಡೆ ಕಾರ್ಯ

72 ಜಿಲ್ಲಾ, ತಾಲ್ಲೂಕು ಕೇಂದ್ರಗಳಿಗೆ ತೆರಳಿದವರು

ಆಹಾರ ಸುರಕ್ಷತಾಧಿಕಾರಿಗಳ ಕೊರತೆಯ ಕಾರಣ ಹಿಂದೆ ನಿಯೋಜನೆಗೆ ಅವಕಾಶ ನೀಡಿರಬಹುದು. ಈಗ ಎಲ್ಲರನ್ನೂ ವಾಪಸ್ ಕರೆಸಿಕೊಳ್ಳಲಾಗುತ್ತಿದೆ

ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

'ಮದುವೆಗೆ ವಿರೋಧಿಸಿ ಮಗನ ಕೊಂದರು'

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಮಗ ಪ್ರೀತಿಸಿದ ಅನ್ಯ ಜಾತಿಯ ಹುಡುಗಿ ಜತೆ ಮದುವೆಗೆ ವಿರೋಧಿಸಿದ್ದ ಪಾಲಕರು, ಕೊನೆಗೆ ಮಗನನ್ನೇ ಕೊಲೆ ಮಾಡಿದ ಘಟನೆ ತಾಲ್ಲೂಕಿನ ಚಿಕ್ಕ ನಂದಿಹಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ಸಂಭವಿಸಿದೆ.


ಮಂಜುನಾಥ

ಮಂಜುನಾಥ ನಾಗಪ್ಪ ಉಳ್ಳಾಗಡ್ಡಿ(25) ಕೊಲೆಯಾದವರು. ಅವರ ತಂದೆ ನಾಗಪ್ಪ ಉಳ್ಳಾಗಡ್ಡಿ(68) ಹಾಗೂ ಹಿರಿಯ ಸಹೋದರ ಗುರುಬಸಪ್ಪ ಉಳ್ಳಾಗಡ್ಡಿ(28) ಆರೋಪಿಗಳು.

'ಅನ್ಯ ಜಾತಿಯ ಹುಡುಗಿಯನ್ನು ಮಂಜುನಾಥ ಪ್ರೀತಿಸುತ್ತಿದ್ದ. ಇದಕ್ಕೆ ಮನೆಯವರ ಒಪ್ಪಿಗೆ ಇರಲಿಲ್ಲ. ಹಾಗಾಗಿ ಪಾಲಕರೊಂದಿಗೆ ವಾಗ್ವಾದ ನಡೆದಿದೆ. ಆಗ ಹಿರಿಯ ಸಹೋದರ ಗುರುಬಸಪ್ಪ ಕಲ್ಲಿನಿಂದ ತಮ್ಮನ ತಲೆಗೆ ಹೊಡೆದಿದ್ದಾನೆ, ತಂದೆಯೂ ಧಾವಿಸಿ ಹೊಡೆದಿದ್ದಾನೆ. ತಲೆಗೆ ತೀವ್ರ ಪೆಟ್ಟು ತಗುಲಿ ಮಂಜುನಾಥ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಅನ್ಯಧರ್ಮದ ಯುವತಿಯನ್ನು ಪ್ರೀತಿಸಿ ಮದುವೆಯಾಗಿ'

ಉಳ್ಳಾಲ (ದಕ್ಷಿಣ ಕನ್ನಡ): 'ಮದುವೆಯಾಗಲು ಹುಡುಗಿ ಸಿಗದ ಹಿಂದೂ ಹುಡುಗರು ಅನ್ಯಧರ್ಮೀಯ ಯುವತಿಯರನ್ನು ಪ್ರೀತಿಸಿ ವಿವಾಹವಾಗಿ' ಎಂದು ಚಕ್ರವರ್ತಿ ಸೂಲಿಬೆಲೆ ಸಲಹೆ ನೀಡಿದರು.

ವಿಶ್ವ ಹಿಂದೂ ಪರಿಷತ್ ವತಿಯಿಂದ ಮಂಗಳೂರಿನ ಕದ್ರಿ ಮಂಜುನಾಥ ಕ್ಷೇತ್ರದಿಂದ ಕುತ್ತಾರಿನ ಕೊರಗಜ್ಜನ ಆದಿಕ್ಷೇತ್ರಕ್ಕೆ ನಡೆದ 'ಕೊರಗಜ್ಜನ ಆದಿ ಕ್ಷೇತ್ರಕ್ಕೆ ನಮ್ಮ ನಡೆ' ಪಾದಯಾತ್ರೆಯ ಸಮಾರೋಪದಲ್ಲಿ ಮಾತನಾಡಿದರು.


'ಮತಾಂತರ, ಲವ್ ಜಿಹಾದ್ ವಿಚಾರಗಳನ್ನು ಬಿಟ್ಟು ಬಿಡಿ. ಮತಾಂತರವಾದವರನ್ನು ಮತ್ತೆ 'ಘರ್ ವಾಪಸಿ' ಮಾಡುವುದು ಹೇಗೆಂದು ನಮ್ಮ ಯುವಕರನ್ನು ತರಬೇತುಗೊಳಿಸಿ' ಎಂದರು.

ಬಜೆಟ್‌ನಲ್ಲಿ ಜೈನ ಸಮಾಜಕ್ಕೆ ಅನ್ಯಾಯ; ಹೋರಾಟದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯ ಬಜೆಟ್‌ನಲ್ಲಿ ಜೈನ ಸಮುದಾಯದ ಯಾವುದೇ ಬೇಡಿಕೆಗಳನ್ನು ಈಡೇರಿಸದೆ ನಿರ್ಲಕ್ಷಿಸಲಾಗಿದೆ. ಶೀಘ್ರದಲ್ಲಿ ಸಮಾಜದವರ ಸಭೆ ನಡೆಸಿ ಸರ್ಕಾರದ ವಿರುದ್ಧ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಇಲ್ಲಿನ ವರೂರು ನವಗ್ರಹತೀರ್ಥ ಕ್ಷೇತ್ರದ ಗುಣಧರನಂಧಿ ಮಹಾರಾಜರು ಎಚ್ಚರಿಸಿದರು.

'ಬಜೆಟ್ ಗಾತ್ರ ನಾಲ್ಕು ಲಕ್ಷ ಕೋಟಿ ರೂಪಾಯಿಗೆ ಏರಿದರೂ ನಮ್ಮ ಸಮಾಜಕ್ಕೆ ನೀಡುವ ಅನುದಾನ ಕಡಿಮೆ ಆಗುತ್ತಾ ಬರುತ್ತಿದೆ. ಈ ಬಜೆಟ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಕೇವಲ ₹100 ಕೋಟಿ ನೀಡಲಾಗಿದೆ. ಇದರಲ್ಲಿ ಜೈನರು, ಕ್ರೈಸ್ತರು, ಸಿಖ್ಖರು ಹಾಗೂ ಬೌದ್ಧರು ಹಂಚಿಕೊಂಡರೆ ₹33 ಕೋಟಿ ಬರುತ್ತದೆ. ಸರ್ಕಾರ ನಡೆಸಲು ಹಣದ ಕೊರತೆ ಇದ್ದರೆ, ನಮಗೆ ಬರುವ ಪಾಲನ್ನು ವಾಪಸ್ ಕೊಡಲು ಜೈನ ಸಮಾಜ ಸಿದ್ಧವಿದೆ' ಎಂದು ಭಾನುವಾರ ಪ್ರತಿಕ್ರಿಯಿಸಿದರು.


ಗುಣಧರನಂದಿ ಮಹಾರಾಜ

'ಜೈನ ಅಭಿವೃದ್ಧಿ ನಿಗಮದ ಸ್ಥಾಪನೆ ಅಗತ್ಯವಾಗಿದ್ದು, ಈ ಬಗ್ಗೆ ಸಮಾಜದ ಮುಖಂಡರು, ಸ್ವಾಮೀಜಿಗಳು ಒತ್ತಾಯಿಸಿದ್ದರು. ನಿಗಮ ಸ್ಥಾಪನೆ ಮಾಡುವುದಾಗಿ ಗೃಹ ಸಚಿವ ಜಿ.ಪರಮೇಶ್ವರ ಸಹ ಭರವಸೆ ನೀಡಿದ್ದರು. ಆದರೂ ಬಜೆಟ್‌ನಲ್ಲಿ ಈ ಬಗ್ಗೆ ಪ್ರಸ್ತಾವ ಮಾಡದೆ ಸಮಾಜಕ್ಕೆ ಅನ್ಯಾಯ ಮಾಡಲಾಗಿದೆ' ಎಂದು ದೂರಿದರು.

'ವರೂರು ನವಗ್ರಹ ತೀರ್ಥ ಕ್ಷೇತ್ರದ ಅಭಿವೃದ್ಧಿಗೆ ₹2 ಕೋಟಿ ನೆರವು ನೀಡುವುದಾಗಿ ಘೋಷಣೆ ಮಾಡಲಾಗಿತ್ತು. ಅದನ್ನು ಈಡೇರಿಸಿಲ್ಲ. ಈ ಹಿಂದೆ ಸಹ ರಾಜ್ಯದ ಪ್ರತಿ ಮಠಕ್ಕೆ ಎರಡೂವರೆ ಕೋಟಿ ರೂಪಾಯಿ ನೀಡುವುದಾಗಿ ಘೋಷಿಸಲಾಗಿತ್ತು. ಈವರೆಗೂ ಯಾವ ಮಠಗಳಿಗೂ ಪೂರ್ಣ ಹಣ ನೀಡಿಲ್ಲ' ಎಂದು ದೂರಿದರು.

ಎಚ್‌ಎಎಲ್‌ಗೆ 'ರಿಯರ್ ಫ್ಯೂಸ್‌ಲೇಜ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್‌ನ ಹಗುರ ಯುದ್ಧ ವಿಮಾನ (ಎಲ್‌ಸಿಎ) 'ಎಂಕೆ 1 ಎ' ಗಾಗಿ ಇದೇ ಮೊದಲ ಬಾರಿಗೆ ಖಾಸಗಿ ಕಂಪನಿಯು 'ರಿಯರ್ ಫ್ಯೂಸ್‌ಲೇಜ್' ಅನ್ನು ತಯಾರಿಸಿದ್ದು, ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರ ಸಮ್ಮುಖದಲ್ಲಿ ಭಾನುವಾರ ಹಸ್ತಾಂತರಿಸಲಾಯಿತು.

ಆಲ್ಫಾ ಟೋಕೋಲ್ ಎಂಜನಿಯರಿಂಗ್ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್ 'ರಿಯರ್ ಫ್ಯೂಸ್‌ಲೇಜ್' ಅನ್ನು ತಯಾರಿಸಿರುವ ಕಂಪನಿ.

ಕಾರ್ಯಕ್ರಮದಲ್ಲಿ ಮಾತನಾಡಿದ ರಾಜನಾಥಸಿಂಗ್ ಅವರು, ಭಾರತದ ರಕ್ಷಣಾ ಉತ್ಪಾದನೆಯ ಐತಿಹಾಸಿಕ ಪ್ರಯಾಣದಲ್ಲಿ ಇದು ಮಹತ್ವದ ಮೈಲಿಗಲ್ಲು. ರಕ್ಷಣಾ ವಲಯದಲ್ಲಿ ಆತ್ಮನಿರ್ಭರತೆಯತ್ತ ಭಾರತದ ಪ್ರಗತಿಗೆ ಮತ್ತು ಸಾರ್ವಜನಿಕ– ಖಾಸಗಿ ಪಾಲುದಾರಿಕೆ ವೃದ್ಧಿಸುವ ನಿಟ್ಟಿನಲ್ಲಿ ಸರ್ಕಾರದ ಬದ್ಧತೆಗೆ ಸಾಕ್ಷಿ ಎಂದು ಹೇಳಿದರು.

ಕಾಂಕ್ರೀಟ್ ಸಜ್ಜಾ ಕುಸಿದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ಪಟ್ಟಣದ ಬಸ್ ನಿಲ್ದಾಣದ ಮುಂಭಾಗದ ಹಳೆಯ ಕಟ್ಟಡದ ಸಜ್ಜಾ ಕುಸಿದು ನಜೀರ್ (38) ಹಾಗೂ ಅಮರನಾಥ್ (42) ಮೃತಪಟ್ಟಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ.

ಭಾನುವಾರ ಮಧ್ಯಾಹ್ನ 1.15ರ ಸುಮಾರಿಗೆ ಕಟ್ಟಡದ ಬಳಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದ ಜ್ಯೋತಿ, ಹೂವಿನ ವ್ಯಾಪಾರ ಮಾಡುತ್ತಿದ್ದ ನೀಲಮ್ಮ, ಚಿಲ್ಲರೆ ಅಂಗಡಿಯ ದೀಪಾ ಹಾಗೂ ಗ್ರಾಹಕರಾದ ಶಿಲ್ಪಾ, ನಜೀರ್ ಮತ್ತು ಅಮರನಾಥ್ (42) ಎಂಬುವವರ ಮೇಲೆ ಕಾಂಕ್ರೀಟ್ ಸಜ್ಜಾ ಬಿದ್ದಿದೆ.

ಅಮರನಾಥ್ ಅವರ ಎದೆಯ ಭಾಗಕ್ಕೆ ಸಜ್ಜಾ ಬಿದ್ದಿದ್ದರಿಂದ ಸ್ಥಳದಲ್ಲಿಯೇ ಮೃತಪಟ್ಟರು. ತೀವ್ರ ಗಾಯಗೊಂಡಿದ್ದ ನಜೀರ್ ಹಾಸನದ ಆಸ್ಪತ್ರೆಯಲ್ಲಿ ಮೃತಪಟ್ಟರು. ಗಾಯಗೊಂಡಿರುವ ಜ್ಯೋತಿ ಹಾಗೂ ಶಿಲ್ಪಾ ಅವರನ್ನು ಹಾಸನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ದೀಪಾ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.


ಬೇಲೂರಿನಲ್ಲಿ ಕಾಂಕ್ರೀಟ್ ಸಜ್ಜಾದ ಅಡಿ ಸಿಲುಕಿದ್ದವರನ್ನು ರಕ್ಷಿಸುವ ಕಾರ್ಯ ನಡೆಯಿತು

'ಮಳಿಗೆಗಳು ದುಃಸ್ಥಿತಿಯಲ್ಲಿವೆ ಎಂದು ಕಟ್ಟಡ ಕೆಡವಲು ಮಾಲೀಕ ದಿವಂಗತ ಸತ್ಯನಾರಾಯಣಗೌಡರ ಸಂಬಂಧಿಕರು ಮುಂದಾಗಿದ್ದರು. ಆದರೆ, ಕೆಲ ಬಾಡಿಗೆದಾರರು ನ್ಯಾಯಾಲಯದ ಮೆಟ್ಟಿಲೇರಿ, ತೆರವು ಮಾಡದಂತೆ ತಡೆಯಾಜ್ಞೆ ತಂದಿದ್ದಾರೆ. ಪ್ರಕರಣ ಈಗಲೂ ನ್ಯಾಯಾಲಯದಲ್ಲಿದೆ. ದಾವೆ ಹೂಡಿರುವ ಬಾಡಿಗೆದಾರರೇ ಘಟನೆಗೆ ನೇರ ಹೊಣೆಯಾಗಿದ್ದು, ಅವರೇ ಇದಕ್ಕೆ ಪರಿಹಾರ ನೀಡಬೇಕು' ಎಂದು ಸತ್ಯನಾರಾಯಣಗೌಡರ ಸಂಬಂಧಿ ರತ್ನಾಕರ್ ಹಾಗೂ ಚಿದು ಒತ್ತಾಯಿಸಿದರು.

ತಿಂಗಳಿಂದ ನೀರಿಲ್ಲದೆ ಬಾಲಕಿಯರು, ಶಿಕ್ಷಕರ ಪರದಾಟ

ಶೌಚಕ್ಕೆ ನೀರಿಲ್ಲ: ಶಾಲೆಗೆ ಪೋಷಕರ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಾಲ್ಲೂಕಿನ ದೊಡ್ಡತೇಕಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಲವು ತಿಂಗಳಿನಿಂದ ಕುಡಿಯಲು ಹಾಗೂ ಶೌಚಕ್ಕೆ ಬಳಸಲು ನೀರು ಇಲ್ಲ.

ಬಿಸಿಯೂಟ ತಯಾರಿಕೆಗಾಗಿ ಅಕ್ಷರ ದಾಸೋಹ ಸಿಬ್ಬಂದಿ ಹೊರಗಿನಿಂದ ಬಿಂದಿಗೆಗಳಲ್ಲಿ ನೀರು ತರಬೇಕಾಗಿದೆ. ಸಮಸ್ಯೆ ಇಂದು ಇಲ್ಲವೇ ನಾಳೆ ಪರಿಹಾರ ಆಗುತ್ತದೆ ಎಂದು ಕಾಯ್ದ ಪೋಷಕರ ಆಕ್ರೋಶ ಶನಿವಾರ ಕಟ್ಟೆಯೊಡೆದಿದೆ.

ವಿದ್ಯಾರ್ಥಿನಿಯರ ತಾಯಂದಿರು ಶಾಲೆಗೆ ಮುತ್ತಿಗೆ ಹಾಕಿ ಎಸ್‌ಡಿಎಂಸಿ ಅಧ್ಯಕ್ಷ, ಮುಖ್ಯಶಿಕ್ಷಕರು ಹಾಗೂ ಪಂಚಾಯಿತಿ ವಿರುದ್ಧ ಹರಿಹಾಯ್ದರು. ಶೌಚಾಲಯದಲ್ಲಿ ನೀರಿಲ್ಲದೆ ತಮ್ಮ ಹೆಣ್ಣು ಮಕ್ಕಳು ನಿತ್ಯ ಅನುಭವಿಸುತ್ತಿರುವ ಕಷ್ಟ, ಮುಜುಗರವನ್ನು ಬಿಡಿಸಿಟ್ಟರು.

ಶಾಲೆಯಲ್ಲಿ ಒಂದರಿಂದ ಏಳನೇ ತರಗತಿವರೆಗೆ 99 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಲ್ಲಿ 56 ಬಾಲಕಿಯರಿದ್ದಾರೆ. ಐವರು ಶಿಕ್ಷಕರ ಪೈಕಿ ಮೂವರು ಶಿಕ್ಷಕಿಯರು ಇದ್ದಾರೆ.

ಬೇರೆ ತಾಲ್ಲೂಕುಗಳಿಂದ ಶಾಲೆಗೆ ಬರುವ ಶಿಕ್ಷಕಿಯರು ಸಹ ಶೌಚಾಲಯಕ್ಕೆ ನೀರು ಇಲ್ಲದ ಕಾರಣ ಶಾಲೆ ಸಮೀಪದ ಸ್ಥಳೀಯರ ಮನೆಗಳನ್ನು ಎಡತಾಕುತ್ತಿದ್ದಾರೆ. ಈ ಸಮಸ್ಯೆ ಬಗ್ಗೆ ಹಲವು ಬಾರಿ ಪಂಚಾಯಿತಿ ಗಮನಕ್ಕೆ ತಂದರೂ ಅಧಿಕಾರಿಗಳು ಮತ್ತು ಸಿಬ್ಬಂದಿ ಗಮನಕ್ಕೆ ಹಾಕಿಕೊಳ್ಳುತ್ತಿಲ್ಲ ಎಂದು ಪೋಷಕರು ತರಾಟೆಗೆ ತೆಗೆದುಕೊಂಡರು.


ಶಿಡ್ಲಘಟ್ಟ ತಾಲ್ಲೂಕಿನ ದೊಡ್ಡತೇಕಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮುತ್ತಿಗೆ ಹಾಕಿರುವ ವಿದ್ಯಾರ್ಥಿನಿಯರ ಪೋಷಕರು

'ಗ್ರಾಮದ ಬೇರೆ ಬೇರೆ ಕಡೆಗಳಿಂದ ಬಿಂದಿಗೆಯಲ್ಲಿ ಮಕ್ಕಳಿಂದ ನೀರು ತರಿಸುತ್ತಿದ್ದೀರಿ. ಏಕೆ ಈ ಕೆಲಸ ಮಾಡಿಸುತ್ತೀರಿ' ಎಂದು ಶಿಕ್ಷಕರ ವಿರುದ್ಧ ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

'ಶಾಲೆಯಲ್ಲಿ ಹಲವಾರು ಸಮಸ್ಯೆಗಳು ಇವೆ. ಜನಪ್ರತಿನಿಧಿಗಳು, ಪಂಚಾಯಿತಿ ಅಧಿಕಾರಿಗಳು, ಶಿಕ್ಷಣ ಇಲಾಖೆ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಎಸ್‌ಡಿಎಂಸಿ ರಚಿಸಿ ಹಲವು ವರ್ಷಗಳೇ ಕಳೆದಿವೆ. ಅಧ್ಯಕ್ಷರ ಮಕ್ಕಳು ಶಾಲೆಯಲ್ಲಿ ಓದುತ್ತಿಲ್ಲ. ಆದರೆ ಹಲವು ವರ್ಷಗಳಿಂದಲೂ ಅವರೇ ಅಧ್ಯಕ್ಷರಾಗಿ ಇದ್ದಾರೆ. ಹೊಸ ಎಸ್‌ಡಿಎಂಸಿ ಆಡಳಿತ ಮಂಡಳಿ ಆಯ್ಕೆ ಮಾಡಿಲ್ಲ. ಈ ಕಾರಣದಿಂದ ಇಷ್ಟೆಲ್ಲಾ ಅಧ್ವಾನ ಆಗಿದೆ' ಎಂದು ಪೋಷಕರು ಅಸಮಾಧಾನ ವ್ಯಕ್ತಪಡಿಸಿದರು.

ಸರಿಪಡಿಸುವ ಭರವಸೆ: ಶಾಲೆಯಲ್ಲಿನ ನೀರಿನ ಸಮಸ್ಯೆಯ ಬಗ್ಗೆ ಗ್ರಾಮ ಪಂಚಾಯಿತಿ ಪಿಡಿಒ ಅವರಿಗೆ ತಿಳಿಸಿದ್ದೇವೆ. ಸದ್ಯದಲ್ಲಿಯೇ ಪೈಪ್‌ಲೈನ್ ಸರಿಪಡಿಸಿ ಕೊಡುವುದಾಗಿ ತಿಳಿಸಿದ್ದಾರೆ. ಎಸ್‌ಡಿಎಂಸಿ ಸಭೆ ಕರೆದು ಸರ್ಕಾರದ ಆದೇಶದಂತೆ ನೂತನ ಸಮಿತಿ ರಚಿಸಲಾಗುವುದು ಎಂದು ಮುಖ್ಯ ಶಿಕ್ಷಕ ಕಾಂತರಾಜು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ರಾಜ್ಯದ ಕೆಲವೆಡೆ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಮಂಗಳವಾರದಿಂದ ಮೂರು ದಿನಗಳು ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಕೋಲಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಶಿವಮೊಗ್ಗ ಮತ್ತು ಕರಾವಳಿಯ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವೆಡೆ ಮಂಗಳವಾರ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನಲ್ಲಿ ಮುಂದಿನ ಐದು ದಿನಗಳ ಅವಧಿಯಲ್ಲಿ ಗರಿಷ್ಠ ತಾಪಮಾನವು 2 ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಚಿನ್ನ ಕಳ್ಳಸಾಗಣೆ: ಸಚಿವರಿಬ್ಬರ 'ಕೈ'?

ನಟಿ ರನ್ಯಾ ರಾವ್ ಪ್ರಕರಣದಲ್ಲಿ ಸಿಬಿಐ ತನಿಖೆ • ಬೆಂಗಳೂರಿನಿಂದ ಬಹು ರಾಜ್ಯಗಳಿಗೆ ವ್ಯಾಪಿಸಿದ ಜಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರನಟ ರನ್ಯಾ ರಾವ್ ಅವರನ್ನು ಬಳಸಿಕೊಂಡು ವಿದೇಶಗಳಿಂದ ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ಜಾಲದ ಜೊತೆ ರಾಜ್ಯದ ಇಬ್ಬರು ಪ್ರಭಾವಿ ಸಚಿವರು ನಂಟು ಹೊಂದಿರುವ ಶಂಕೆ ಇದ್ದು, ಈ ಕುರಿತು ಸಿಬಿಐ ತನಿಖೆ ಆರಂಭಿಸಿದೆ. ಡಿಆರ್‌ಐ, ಕಸ್ಟಮ್ಸ್ ಇಲಾಖೆಗಳು ಕೂಡ ಪ್ರಕರಣದ ತನಿಖೆ ಮುಂದುವರಿಸಿವೆ.



ರನ್ಯಾ ರಾವ್

₹12.36 ಕೋಟಿ ಮೌಲ್ಯದ 14.02 ಕೆ.ಜಿ. ಚಿನ್ನವನ್ನು ದುಬೈನಿಂದ ಕಳ್ಳಸಾಗಣೆ ಮಾಡಿಕೊಂಡು ಬಂದಿದ್ದ ರನ್ಯಾ ರಾವ್ ಅವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾರ್ಚ್ 3ರಂದು ಬಂಧಿಸಿದ್ದರು.

ಮುಖ್ಯಾಂಶಗಳು

- ಬೆಂಗಳೂರು, ಮುಂಬೈ, ದೆಹಲಿಗೆ ವ್ಯಾಪಿಸಿದ ಪ್ರಕರಣದ ತನಿಖೆ
- ಬೃಹತ್ ಕಾರ್ಯಾಚರಣೆಗೆ ಸನ್ನದ್ಧವಾಗುತ್ತಿರುವ ಸಿಬಿಐ



ರನ್ಯಾ ರಾವ್ ಪ್ರಕರಣವನ್ನು ಸಿಬಿಐಗೆ ಕೊಟ್ಟಿದ್ದಾರೆ ಎಂದಷ್ಟೆ ಗೊತ್ತು. ಸರ್ಕಾರದ ಅನುಮತಿ ಏನೂ ಕೇಳಿಲ್ಲ. ಡಿಆರ್‌ಐನವರು ಕೊಟ್ಟಿರಬಹುದು. ಅವರು ತನಿಖೆ ನಡೆಸಲಿ

ಜಿ.ಪರಮೇಶ್ವರ, ಗೃಹ ಸಚಿವ

ನಟಿಯ ವಿಚಾರಣೆ ವೇಳೆ ಪ್ರಭಾವಿ ವ್ಯಕ್ತಿಗಳು ಚಿನ್ನ ಕಳ್ಳಸಾಗಣೆ ಕೃತ್ಯದಲ್ಲಿ ನಂಟು ಹೊಂದಿರುವ ಸುಳಿವು ಲಭಿಸಿದೆ. ಈ ಕುರಿತು ಡಿಆರ್‌ಐ ಅಧಿಕಾರಿಗಳು ರಹಸ್ಯ ವರದಿಯನ್ನು ಸಿಬಿಐಗೆ ಸಲ್ಲಿಸಿದ್ದು, ಅದನ್ನು ಆಧರಿಸಿ ಸಿಬಿಐ ಪ್ರಕರಣ ದಾಖಲಿಸಿದೆ.

9ನೇ ಪುಟ ನೋಡಿ

ಹವಾಲಾ ನಂಟಿನ ಶಂಕೆ

ವಿದೇಶಗಳಿಂದ ಬೆಂಗಳೂರಿಗೆ ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ಜಾಲವು ಹವಾಲಾ ಅಥವಾ ಕ್ರಿಪ್ಟೋ ಕರೆನ್ಸಿ ಬಳಸಿಕೊಂಡು ಪೂರೈಕೆದಾರರಿಗೆ ಹಣ ಪಾವತಿಸುತ್ತಿದ್ದ ಶಂಕೆ ಇದೆ. ದುಬೈ ಮತ್ತು ಬೆಂಗಳೂರಿನ ಮಧ್ಯೆ ಹವಾಲಾ ಪಾವತಿಗೆ ಕೊಂಡಿಯಾಗಿ ಕಾರ್ಯನಿರ್ವಹಿಸಿದವರ ಪತ್ತೆಗೆ ಡಿಆರ್‌ಐ ಮತ್ತು ಸಿಬಿಐ ಕಾರ್ಯಾಚರಣೆಗೆ ಇಳಿದಿವೆ.

ಸಚಿವರಿಗೆ ಕರೆ ಮಾಡಲು ಯತ್ನ?

ಹಲವು ದಿನಗಳಿಂದ ರನ್ಯಾ ರಾವ್ ಅವರ ವಿದೇಶ ಪ್ರವಾಸದ ಮೇಲೆ ನಿಗಾ ಇರಿಸಿದ್ದ ಡಿಆರ್‌ಐ ಅಧಿಕಾರಿಗಳು, ಮಾರ್ಚ್ 3ರಂದು ದುಬೈನಿಂದ ಮರಳುತ್ತಿದ್ದಂತೆಯೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದಿದ್ದರು. ತಪಾಸಣೆಗೆ ಕರೆದೊಯ್ಯಲು ತನಿಖಾ ತಂಡ ಮುಂದಾಗುತ್ತಿದ್ದಂತೆ ಆರೋಪಿಯು ರಾಜ್ಯದ ಸಚಿವರೊಬ್ಬರಿಗೆ ಮೊಬೈಲ್ ಮೂಲಕ ಕರೆಮಾಡಲು ಯತ್ನಿಸಿದ್ದರು ಎಂದು ಮೂಲಗಳು ಹೇಳಿವೆ.

'ಬಂಧನದ ಸುಳಿವು ಪಡೆದ ರನ್ಯಾ ಸಚಿವರೊಬ್ಬರ ಮೊಬೈಲ್ ಸಂಖ್ಯೆಯನ್ನು ಡಯಲ್ ಮಾಡಲು ಯತ್ನಿಸಿದ್ದರು. ತಕ್ಷಣ ಮೊಬೈಲ್ ಕಿತ್ತುಕೊಂಡಿದ್ದ ಡಿಆರ್‌ಐ ಅಧಿಕಾರಿಗಳು, ಅದನ್ನು ಜಪ್ತಿ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

ವ್ಯಾಪಾರಿಗಳಿಂದ ಸುಳಿವು

ರನ್ಯಾರಾವ್ ಅವರು ಚಿನ್ನ ಕಳ್ಳ ಸಾಗಣೆ ಮಾಡುತ್ತಿರುವ ಬಗ್ಗೆ ನಗರದ ಚಿನ್ನಾಭರಣ ಮಳಿಗೆಗಳ ಮಾಲೀಕರೇ ಡಿಆರ್‌ಐ ಅಧಿಕಾರಿಗಳಿಗೆ ಸುಳಿವು ನೀಡಿದ್ದರು. ಚಿನ್ನದ ಬಿಸ್ಕತ್‌ಗಳನ್ನು ದುಬೈನಿಂದ ತಂದು ನಗರದಲ್ಲಿ ಪ್ರತಿಷ್ಠಿತ ಚಿನ್ನದ ವ್ಯಾಪಾರಿಗಳಿಗೆ ನೀಡುತ್ತಿದ್ದರು. ಆದರೆ, ಇತರೆ ವ್ಯಾಪಾರಿಗಳು ತಮಗೂ ಚಿನ್ನ ನೀಡುವಂತೆ ಕೋರಿದ್ದರು. ಇದಕ್ಕೆ ಒಪ್ಪಿರಲಿಲ್ಲ. ಇದರಿಂದ ಅಸಮಾಧಾನಗೊಂಡ ವ್ಯಾಪಾರಿಗಳು ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ನಟಿಯ ಚಲನವಲನಗಳ ಮೇಲೆ ನಿಗಾ ವಹಿಸಿದ್ದರು. ಅಧಿಕಾರಿಗಳು ಮಳಿಗೆಗಳ ಮಾಲೀಕರ ವಿಚಾರಣೆ ನಡೆಸಿ, ಅವರ ಹೇಳಿಕೆ ದಾಖಲಿಸಿಕೊಂಡು ಕಳುಹಿಸಿದ್ದಾರೆ.

ಅತ್ಯಾಚಾರ: 3ನೇ ಆರೋಪಿ ವಶಕ್ಕೆ

ರೆಸಾರ್ಟ್‌ಗಳ ಮಾಲೀಕರಿಗೆ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಸಾಣಾಪುರ ಕೆರೆ ಬಳಿಯ ತುಂಗಭದ್ರಾ ಎಡದಂಡೆ ಕಾಲುವೆ ಪಕ್ಕ ಇಬ್ಬರು ಮಹಿಳೆಯರ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣದ ಬಳಿಕ ಎಚ್ಚೆತ್ತುಕೊಂಡಿರುವ ಪೊಲೀಸರು ಹೋಂ ಸ್ಟೇ ಮಾಲೀಕರ ಜೊತೆ ಸಭೆ ನಡೆಸಿ, ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ.

ಘಟನೆಗೆ ಸಂಬಂಧಿಸಿ ಶನಿವಾರವೇ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಮೂರನೇ ಆರೋಪಿಯನ್ನು ತಮಿಳುನಾಡಿನಲ್ಲಿ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೂರು ದಿನಗಳ ಹಿಂದೆ ನಡೆದ ಘಟನೆಯಲ್ಲಿ ಇಸ್ರೇಲ್‌ನ ಮಹಿಳೆ ಮತ್ತು ಸ್ಥಳೀಯ ಹೋಂ ಸ್ಟೇ ಒಡತಿಯೊಬ್ಬರ ವಿರುದ್ಧ ಅತ್ಯಾಚಾರ ನಡೆದಿತ್ತು. ಒಡಿಶಾದ ಯುವಕನನ್ನು ಹೊಡೆದು ಕಾಲುವೆಯಲ್ಲಿ ನೂಕಿದ್ದರಿಂದ ಆತ ಮೃತಪಟ್ಟಿದ್ದ.

'ಮೂರನೇ ಆರೋಪಿಯನ್ನು ವಶಕ್ಕೆ ಪಡೆಯಲಾಗಿದ್ದು, ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

9ನೇ ಪುಟ ನೋಡಿ

'ಡ್ರಗ್ ಮಾಫಿಯಾ ಹಿಂದೆ ರಾಜಕಾರಣಿಗಳು, ಅಧಿಕಾರಿಗಳು'

ಹೊಸಪೇಟೆ (ವಿಜಯನಗರ): 'ಸಾಣಾಪುರದಲ್ಲಿ ವಿದೇಶಿ ಪ್ರಜೆಯ ಅತ್ಯಾಚಾರದ ಹಿಂದೆ ಡ್ರಗ್ ಮಾಫಿಯಾ ಇದೆ. ಈ ಮಾಫಿಯಾದಲ್ಲಿ ಕೆಲವು ರಾಜಕಾರಣಿಗಳು ಮತ್ತು ಅಧಿಕಾರಿಗಳು ಶಾಮೀಲಾಗಿದ್ದಾರೆ' ಎಂದು ಮುಖ್ಯಮಂತ್ರಿ ಅವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

9ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



'ಪುಣ್ಯಕ್ಷೇತ್ರಗಳ ಬಳಿ ಸೋಪು, ಶ್ಯಾಂಪೂ ಮಾರಾಟ ನಿಷೇಧಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಣ್ಯ ಕ್ಷೇತ್ರಗಳ ನದಿ, ಸರೋವರ, ಕಲ್ಯಾಣಿ, ಸ್ನಾನಘಟ್ಟಗಳ 500 ಮೀಟರ್ ವ್ಯಾಪ್ತಿಯಲ್ಲಿ ಸಮೀಪ ಸೋಪು, ಶ್ಯಾಂಪೂಗಳ ಮಾರಾಟವನ್ನು ನಿಷೇಧಿಸಿ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅವರು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'ಪುಣ್ಯಕ್ಷೇತ್ರಗಳ ಬಳಿ ಇರುವ ಜಲಮೂಲಗಳಲ್ಲಿ ಭಕ್ತರು, ಪ್ರವಾಸಿಗರು ಸ್ನಾನಮಾಡಿ ಉಳಿದ ಶ್ಯಾಂಪೂ ಮತ್ತು ಸೋಪಿನ ಸ್ಯಾಷೆಗಳನ್ನು ದಂಡೆಯಲ್ಲಿ ಎಸೆದು ಹೋಗುತ್ತಿದ್ದಾರೆ. ಅಲ್ಲಿನ



ಪರಿಸರದಲ್ಲಿ ಕಸದ ಪ್ರಮಾಣ ಹೆಚ್ಚುವುದಲ್ಲದೆ, ಈ ರಾಸಾಯನಿಕ ವಸ್ತು ಮತ್ತು ಪ್ಲಾಸ್ಟಿಕ್ ಜಲಮೂಲವನ್ನು ಸೇರುತ್ತಿವೆ. ಇದರಿಂದ ನೀರು ಕಲುಷಿತವಾಗುತ್ತಿದೆ. ಜತೆಗೆ ಜಲಚರಗಳೂ ಸಾಯುತ್ತಿವೆ' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

'ಪುಣ್ಯಕ್ಷೇತ್ರಗಳ ಬಳಿ ಇರುವ ಅಂಗಡಿಗಳಲ್ಲಿ ಒಂದೆರಡು ರೂಪಾಯಿಯ ಶ್ಯಾಂಪೂ ಮತ್ತು ಐದರಿಂದ ಹತ್ತು ರೂಪಾಯಿಯ ಸೋಪಿನ ಪ್ಯಾಕೆಟ್ ಮಾರಾಟ ಮಾಡಲಾಗುತ್ತಿದೆ' ಎಂದರು.

9ನೇ ಪುಟ ನೋಡಿ

ಸಂಸತ್ತಿನ ಬಜೆಟ್ ಅಧಿವೇಶನದ ಮುಂದುವರಿದ ಭಾಗ ಇಂದಿನಿಂದ

'ಎಪಿಕ್' ವಿಷಯ ಪ್ರಸ್ತಾಪಿಸಲು ವಿಪಕ್ಷ ಸಜ್ಜು

ನವದೆಹಲಿ (ಪಿಟಿಐ): ಸಂಸತ್ತಿನ ಬಜೆಟ್ ಅಧಿವೇಶನವು ಸೋಮವಾರದಿಂದ ಪುನರಾರಂಭ ಆಗಲಿದೆ. ಮತದಾರರ ಪಟ್ಟಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪವನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ.

ಅಲ್ಲದೆ, ಮಣಿಪುರದಲ್ಲಿ ಮತ್ತೆ ಹಿಂಸಾಚಾರ ನಡೆದಿರುವುದು, ಅಮೆರಿಕದ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತದ ಕೆಲವು ತೀರ್ಮಾನಗಳನ್ನು ನಿಭಾಯಿಸುವಲ್ಲಿ ಕೇಂದ್ರ ಸರ್ಕಾರ ಇರಿಸಿದ ಹೆಜ್ಜೆಗಳನ್ನು ಕೂಡ ಪ್ರಸ್ತಾಪಿಸಿ, ಸರ್ಕಾರದೊಂದಿಗೆ ಮುಖಾಮುಖಿ



ಯಾಗಲು ವಿರೋಧ ಪಕ್ಷಗಳು ಸಜ್ಜಾಗಿವೆ.

ಬಜೆಟ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದು, ಮಣಿಪುರ ಬಜೆಟ್‌ಗೆ, ವಕ್ಫ್ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಪಡೆದುಕೊಳ್ಳುವುದು ಕೇಂದ್ರ ಸರ್ಕಾರದ ಆದ್ಯತೆಯ ಕಾರ್ಯಗಳಾಗಿರಲಿವೆ. ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ತಂದಿರುವುದಕ್ಕೆ ಸಂಸತ್ತಿನ ಒಪ್ಪಿಗೆ ಪಡೆಯುವುದಕ್ಕೆ ಗೃಹ ಸಚಿವ ಅಮಿತ್ ಶಾ ಅವರು ನಿರ್ಣಯ ಮಂಡಿಸುವ ನಿರೀಕ್ಷೆ ಇದೆ.

ಮತದಾರರ ಗುರುತಿನ ಚೀಟಿಯಲ್ಲಿ ಇರುವ 'ಎಪಿಕ್' ಸಂಖ್ಯೆಗಳು ಒಂದೇ ಆಗಿರುವ ನಿದರ್ಶನಗಳನ್ನು ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವುದಾಗಿ ವಿರೋಧ ಪಕ್ಷಗಳು ಹೇಳಿವೆ. 'ಎಪಿಕ್' ವಿಚಾರವಾಗಿ ಟಿಎಂಸಿ ನಾಯಕರು ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳನ್ನು ಸೋಮವಾರ ಭೇಟಿ ಮಾಡಲಿದ್ದಾರೆ. 'ಎಪಿಕ್' ವಿಚಾರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸುವಂತೆ ಕಾಂಗ್ರೆಸ್, ಡಿಎಂಕೆ, ಶಿವಸೇನಾ (ಯುಬಿಟಿ) ಪಕ್ಷಗಳಿಗೆ ಟಿಎಂಸಿ ಮನವಿ ಮಾಡಿದೆ.

ವಕ್ಫ್ ತಿದ್ದುಪಡಿ ಮಸೂದೆಯು ಮುಸ್ಲಿಂ ಸಮುದಾಯದ ಹಲವು ಸಮಸ್ಯೆಗಳನ್ನು ಪರಿಹರಿಸಲಿರುವ ಕಾರಣಕ್ಕೆ, ಈ ಮಸೂದೆಗೆ ಸಂಸತ್ತಿನ ಒಪ್ಪಿಗೆಯನ್ನು ಶೀಘ್ರ ಪಡೆದುಕೊಳ್ಳಲು ಸರ್ಕಾರ ಬಯಸಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಆದರೆ, ವಕ್ಫ್ ಮಸೂದೆಗೆ ಒಟ್ಟಾಗಿ ವಿರೋಧಿಸಲು ವಿಪಕ್ಷಗಳು ಚರ್ಚಿಸಲಿವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಸಂಚಾರಿ ಆರೋಗ್ಯ ಘಟಕ' ವಾಹನಗಳ ಚಾಲನಾ ಕಾರ್ಯಕ್ರಮ: ಚಾಲನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಉಪಸ್ಥಿತಿ: ಸಂತೋಷ್ ಎಸ್. ಲಾಡ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಸ್ಥಳ: ವಿಧಾನಸೌಧ ಪೂರ್ವದ್ವಾರದ ಬೃಹತ್ ಮೆಟ್ಟಿಲುಗಳ ಮೇಲೆ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ದಿಟ್ಟ ಮಹಿಳಾ ಪ್ರಶಸ್ತಿ ಪ್ರದಾನ: ಅತಿಥಿಗಳು: ಎಸ್.ಆರ್. ಉಮಾಶಂಕರ್, ತುಷಾರ್ ಗಿರಿನಾಥ್, ಸಿ.ಎಸ್. ಷಡಾಕ್ಷರಿ, ವಿವೇಕ್ ಸುಬ್ಬಾರೆಡ್ಡಿ, ಎ.ಅಮೃತ್ ರಾಜ್, ಪ್ರಶಸ್ತಿ ಸ್ವೀಕರಿಸುವವರು: ಭಾರತಿ ವಿಷ್ಣುವರ್ಧನ್, ಜಯಮಾಲಾ, ಸರಿತಾ, ಅಂಬಿಕಾ, ಲಕ್ಷ್ಮಿ ಗೋವಿಂದರಾಜು, ಪೂರ್ಣಿಮಾ ರಾಮ್‌ಕುಮಾರ್, ಆಯೋಜನೆ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಡಾ. ರಾಜ್‌ಕುಮಾರ್ ಗಾಜಿನ ಮನೆ, ಬಿಬಿಎಂಪಿ ಕೇಂದ್ರ ಕಚೇರಿ, ಬೆಳಿಗ್ಗೆ 10

ಮಹಿಳಾ ದಿನಾಚರಣೆ, ಮಹಿಳಾ ನಾಟಕ ತರಬೇತಿ ಶಿಬಿರದ ಮುಕ್ತಾಯ ಸಮಾರಂಭ: ಉದ್ಘಾಟನೆ: ರಾಣಿ ಸತೀಶ್, ಅತಿಥಿಗಳು: ಉಷಾದೇವಿ ಸಿ., ಧರಣಿದೇವಿ ಮಾಲಗತ್ತಿ, ಎಸ್. ಸತೀಶ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, 'ಹಸಿರು ಮರುಭೂಮಿ' ನಾಟಕ ಪ್ರದರ್ಶನ: ನಿರ್ದೇಶನ: ಶ್ವೇತಾ ಶ್ರೀನಿವಾಸ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ದೊಡ್ಡರಂಗೇಗೌಡರ ಜನ್ಮ ದಿನೋತ್ಸವದ ಅಂಗವಾಗಿ ಚೈತ್ರ ಪೂರ್ವ ಸಂಭ್ರಮ ರಾಷ್ಟ್ರಕವಿ ಕುವೆಂಪು (ಕಂಚಿನ ಪ್ರತಿಮೆ) ಪ್ರಶಸ್ತಿ ಪ್ರದಾನ: ನಂಜಾವಧೂತ ಸ್ವಾಮೀಜಿ, ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ಉಪಸ್ಥಿತಿ: ಎಚ್.ಎಂ. ರೇವಣ್ಣ, ಪ್ರಶಸ್ತಿ ಸ್ವೀಕರಿಸುವವರು: ದೊಡ್ಡರಂಗೇಗೌಡ, ವಿ. ಗೋಪಾಲಗೌಡ, ಜಯಮಾಲಾ, ಕೆ.ಎಂ. ನಾಗರಾಜ್, ಡಾ.ಕೆ.ಎಸ್. ಕಿಶೋರ್, ಆಯೋಜನೆ: ರಂಗಶ್ರೀ ಕಲಾಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5


ದೊಡ್ಡರಂಗೇಗೌಡ

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

20 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ, ಗಮನಸೆಳೆದ 96 ವರ್ಷ ವಯಸ್ಸಿನ ಸ್ಪರ್ಧಿ

ಪೊಲೀಸ್ ಓಟಕ್ಕೆ ಉತ್ತಮ ಸ್ಪಂದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪೊಲೀಸ್ ಓಟ(ಕೆಎಸ್‌ಪಿ ರನ್)ಕ್ಕೆ ಉತ್ತಮ ಸ್ಪಂದನ ದೊರೆತಿದ್ದು, 20 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಎಂಬ ಘೋಷವಾಕ್ಯದಡಿ ರಾಜ್ಯದ ಜನರ ಸುರಕ್ಷತೆಗಾಗಿ ಶ್ರಮಿಸುತ್ತಿರುವ ಪೊಲೀಸರಿಗೆ ಗೌರವ ಸೂಚಿಸಲು ಹಮ್ಮಿಕೊಂಡಿದ್ದ ಸ್ಪರ್ಧೆಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ವಿಧಾನಸೌಧದ ಬಳಿ ಹಸಿರು ನಿಶಾನೆ ತೋರಿದರು.

'ಹಸಿರು ಬೆಂಗಳೂರು', 'ಡ್ರಗ್ಸ್ ಮುಕ್ತ ಕರ್ನಾಟಕ', 'ಸೈಬರ್ ಅಪರಾಧ' ಕುರಿತು ಸ್ಪರ್ಧಿಗಳು ಫಲಕಗಳನ್ನು ಪ್ರದರ್ಶಿಸಿದರು.

ಪೊಲೀಸರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಿಬ್ಬಂದಿ, ವೃತ್ತಿಪರ ಓಟಗಾರರು, ಹಿರಿಯ ನಾಗರಿಕರು ಓಟದಲ್ಲಿ ಪಾಲ್ಗೊಂಡಿದ್ದರು. 5 ಕಿ.ಮೀ. ಓಟದಲ್ಲಿ 96 ವರ್ಷ ವಯಸ್ಸಿನ ದತ್ತಾತ್ರೇಯ ಅವರು ಭಾಗವಹಿಸಿ ಜನರ ಗಮನಸೆಳೆದರು.

ಬೆಳಿಗ್ಗೆ 6.30ಕ್ಕೆ 5 ಕಿ.ಮೀ. ಹಾಗೂ 7.30ಕ್ಕೆ 10 ಕಿ.ಮೀ. ಓಟ ಆರಂಭಗೊಂಡಿತು. ಎರಡೂ ಓಟಗಳು ವಿಧಾನಸೌಧದಿಂದ ಆರಂಭವಾಗಿ, ಕಬ್ಬನ್ ಪಾರ್ಕ್‌ನಲ್ಲಿ ಸಂಚರಿಸಿ, ವಿಧಾನ ಸೌಧದಲ್ಲಿ ಮುಕ್ತಾಯಗೊಂಡವು. ಪೊಲೀಸ್, ಎಸ್‌ಬಿಐ ಹಾಗೂ ಮುಕ್ತ ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು.

ವಿಜೇತರ ವಿವರ: 10 ಕಿ.ಮೀ ಓಟ (ಪೊಲೀಸ್ ವಿಭಾಗ): ಗುರುಪ್ರಸಾದ್ (31ನಿಮಿಷ, 5 ಸೆಕೆಂಡು), ಎನ್.ಎಲ್.ತೇಜಾವಾಯಿ (38 ನಿಮಿಷ, 17 ಸೆಕೆಂಡು). (ಮುಕ್ತ ವಿಭಾಗ): ಲೋಕೇಶ್ ಚೌಧರಿ (31 ನಿಮಿಷ, 8 ಸೆಕೆಂಡು), ಲಿಲ್ಲಿ ದಾಸ್ (34 ನಿಮಿಷ, 57 ಸೆಕೆಂಡು) (ಎಸ್‌ಬಿಐ ವಿಭಾಗ): ಸಂಜೀವ್ ವಾಲಾಡ್ (41 ನಿಮಿಷ, 29 ಸೆಕೆಂಡು), ರಶ್ಮಿ ಕೆ. ಥಕ್ಕರ್ (1 ಗಂಟೆ, 10 ನಿಮಿಷ, 28 ಸೆಕೆಂಡು)

5 ಕಿ.ಮೀ. ಓಟ (ಪೊಲೀಸ್ ವಿಭಾಗ): ಅರ್ಜುನ್ (15 ನಿಮಿಷ, 44ಸೆಕೆಂಡು), ಎನ್.ಕಾವೇರಿ (26 ನಿಮಿಷ, 14 ಸೆಕೆಂಡು), ಮುಕ್ತ ವಿಭಾಗ: ನಬೀಲ್ ಸಾಹಿ (14 ನಿಮಿಷ, 19 ಸೆಕೆಂಡು), ಕೆ.ಎಂ.ಚಾಂದ (16 ನಿಮಿಷ, 27 ಸೆಕೆಂಡು)

ಗುರುಪ್ರಸಾದ್ ಮತ್ತು ತೇಜವಾಯಿ ಅವರಿಗೆ 'ಡಿಜಿ ಮತ್ತು ಐಜಿಪಿ ಕರ್ನಾಟಕ ಕಪ್' ಹಾಗೂ ತಲಾ ₹50 ಸಾವಿರ ನಗದು ನೀಡಿ ಗೌರವಿಸಲಾಯಿತು.

10 ಕಿ.ಮೀ. ಓಟದ ವಿಜೇತರಿಗೆ ಮೊದಲ ಬಹುಮಾನ ₹1 ಲಕ್ಷ ನಗದು, ಎರಡನೇ ಬಹುಮಾನ ₹50 ಸಾವಿರ ನಗದು ಹಾಗೂ ತೃತೀಯ ಬಹುಮಾನ ₹30 ಸಾವಿರ ನಗದು ನೀಡಲಾಯಿತು.


ಪೊಲೀಸ್ ಇಲಾಖೆ ಹಮ್ಮಿಕೊಂಡಿದ್ದ ಓಟದಲ್ಲಿ ಪಾಲ್ಗೊಂಡಿದ್ದ ಸ್ಪರ್ಧಿಗಳು – ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

5 ಕಿ.ಮೀ. ಓಟದ ವಿಜೇತರಿಗೆ ಪ್ರಥಮ ಬಹುಮಾನ ₹40 ಸಾವಿರ ನಗದು, ದ್ವಿತೀಯ ₹20 ಸಾವಿರ ನಗದು, ತೃತೀಯ ₹10 ಸಾವಿರ ನಗದು ಹಾಗೂ ನಾಲ್ಕನೇ ಬಹುಮಾನ ₹5 ಸಾವಿರ ನಗದು ನೀಡಲಾಯಿತು.

ಪ್ರತಿಯೊಬ್ಬ ಸ್ಪರ್ಧಿಗೂ ಟೀ ಶರ್ಟ್ ನೀಡಲಾಯಿತು. ಮಣಿಪಾಲ್ ಆಸ್ಪತ್ರೆ ವೈದ್ಯಕೀಯ ಸಿಬ್ಬಂದಿ ಸ್ಪರ್ಧಿಗಳ ಆರೋಗ್ಯ ತಪಾಸಣೆ ಮಾಡಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್, ಸಿಐಡಿ ವಿಭಾಗದ ಡಿಜಿಪಿ ಎಂ.ಎ.ಸಲೀಂ, ಎಸ್‌ಬಿಐ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್, ಎನ್‌ಐಬಿಯ ನಾಗರಾಜ ಅಡಿಗ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ ರಾವ್ ಹಾಜರಿದ್ದರು

ವೆಂಕಟೇಶ್ ಕುಮಾರ್‌ಗೆ 'ಗುರುಗಂಧರ್ವ ಪುರಸ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುರಾವ್ ದೇಶಪಾಂಡೆ ಹಾಗೂ ಭೀಮಸೇನ್ ಜೋಶಿ ಅವರ ಸ್ಮರಣಾರ್ಥ ಗಾಯನಾಚಾರ್ಯ ಗುರು ರಾವ್ ದೇಶಪಾಂಡೆ ಸಂಗೀತ ಸಭಾ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಹೋರಾತ್ರಿ ಸಂಗೀತೋತ್ಸವದಲ್ಲಿ ಹಿಂದೂಸ್ತಾನಿ ಗಾಯಕ ವೆಂಕಟೇಶ್ ಕುಮಾರ್ ಅವರಿಗೆ 'ಗುರುಗಂಧರ್ವ ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಿ, ಗೌರವಿಸಲಾಯಿತು.

ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ 'ಪದ್ಮ ವಿಭೂಷಣ' ಪ್ರಶಸ್ತಿಗೆ ಇತ್ತೀಚೆಗೆ ಭಾಜನರಾದ ಎಲ್.ಸುಬ್ರಮಣ್ಯಂ ಅವರನ್ನೂ ಇದೇ ವೇಳೆ ಸನ್ಮಾನಿಸಲಾಯಿತು. ರಮಣಶ್ರೀ ಹೋಟೆಲ್ ಸಮೂಹದ ಮುಖ್ಯಸ್ಥ ಎಸ್. ಷಡಕ್ಷರಿ ಮುಖ್ಯ ಅತಿಥಿಯಾಗಿದ್ದರು.


ಗಾಯಕ ವೆಂಕಟೇಶ್ ಕುಮಾರ್ ಅವರಿಗೆ 'ಗುರುಗಂಧರ್ವ ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಲಾಯಿತು. ಎಸ್‌.ಷಡಕ್ಷರಿ, ಎಲ್‌.ಸುಬ್ರಮಣ್ಯಂ ಉಪಸ್ಥಿತರಿದ್ದರು

ಪ್ರಶಸ್ತಿ ಪುರಸ್ಕೃತ ವೆಂಕಟೇಶ್ ಕುಮಾರ್ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸಿದರು. ಬಳಿಕ ವಿನಾಯಕ ತೊರವಿ ಅವರ ಗಾಯನ, ಅನುಪಮಾ ಭಾಗವತ್ ಅವರ ಸಿತಾರ್ ವಾದನ, ಓಜಸ್ ಅಧಿಯ ಅವರ ತಬಲಾ ಸ್ವತಂತ್ರ ವಾದನ ಹಾಗೂ ಅನಿರುದ್ಧ ಐತಾಳ್ ಅವರ ಗಾಯನವು ಸಂಗೀತ ಆಸಕ್ತರಿಗೆ ರಸದೌತಣ ಉಣಬಡಿಸಿತು.

ಸಹ ವಾದನದಲ್ಲಿ ರವೀಂದ್ರ ಯಾವಗಲ್, ರವೀಂದ್ರ ಕಟೋಟಿ, ವ್ಯಾಸಮೂರ್ತಿ ಕಟ್ಟಿ, ರಾಜೇಂದ್ರ ನಾಕೋಡ್ ಹಾಗೂ ಸುಧಾಂಶು ಘರ್ಪುರೆ ಕಲಾವಿದರಿಗೆ ಸಾಥ್ ನೀಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವೆಂಕಟೇಶ್ ಕುಮಾರ್, 'ಸಂಗೀತ ಸಿದ್ಧಿಯಿಂದ ಪ್ರಸಿದ್ಧಿ ತಾನಾಗಿ ಬರುತ್ತದೆ. ಆದರೆ, ಇಂದು ಹೆಚ್ಚಿನವರು ಪ್ರಸಿದ್ಧಿಯ ಹಿಂದೆ ಹೋಗುತ್ತಾರೆ' ಎಂದರು.

40 ವರ್ಷಗಳಿಂದ ಅಹೋರಾತ್ರಿ ಸಂಗೀತೋತ್ಸವ ನಡೆಸುತ್ತಿರುವುದನ್ನು ಎಲ್. ಸುಬ್ರಮಣ್ಯಂ ಶ್ಲಾಘಿಸಿದರು.

ನಿಧನ ವಾರ್ತೆ

ಗಂಗಮ್ಮ



ನೆಲಮಂಗಲ: ಪಟ್ಟಣದ ಜಯನಗರ ನಿವಾಸಿ ಗಂಗಮ್ಮ(78) ಅವರು ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ಬೆಳಿಗ್ಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರಿಗೆ ಒಬ್ಬರು ಪುತ್ರಿ ಹಾಗೂ ಮೂವರು ಪುತ್ರರಿದ್ದಾರೆ.

ನೆಲಮಂಗಲ ಪಟ್ಟಣದ ರೇಣುಕಾನಗರದಲ್ಲಿ ಸಂಜೆ ಅಂತ್ಯಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದೇಶದಲ್ಲಿ ಉದ್ಯೋಗದ ಆಮಿಷ: ಲಕ್ಷಾಂತರ ರೂಪಾಯಿ ವಂಚನೆ ಆರೋಪ

ನಾಲ್ವರ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶದಲ್ಲಿ ಉದ್ಯೋಗ ಕೊಡಿಸುವುದಾಗಿ ಯುವಕರಿಂದ ಲಕ್ಷಾಂತರ ರೂಪಾಯಿ ವಸೂಲಿ ಮಾಡಿ ವಂಚನೆ ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಶಿವಾಜಿನಗರದ ಡಿ.ಎಂ. ಕನ್ಸಲ್ಟೆಂಟ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಚೇತನ್ ಸೇರಿ ಐವರ ವಿರುದ್ಧ ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವ್ಯವಸ್ಥಾಪಕ ನಿರ್ದೇಶಕ ಚೇತನ್, ವ್ಯವಸ್ಥಾಪಕ ಶರತ್, ರೋಡ್ರಿಕ್ಸ್ ನವೀನ್, ಅಂಜಲಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ದುಬೈನಲ್ಲಿ ಡಿ.ಎಂ. ಕನ್ಸಲ್ಟೆಂಟ್‌ನ ಕೇಂದ್ರ ಕಚೇರಿ ಇದ್ದು, ದೆಹಲಿ, ಹೈದರಾಬಾದ್, ಬೆಂಗಳೂರಿನಲ್ಲಿ ಕಂಪನಿಯ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಪೋಲೆಂಡ್ ಸೇರಿದಂತೆ ವಿವಿಧ ದೇಶಗಳಲ್ಲಿ ಚಾಲಕ, ಹೌಸ್ ಕೀಪಿಂಗ್ ಕೆಲಸ ಕೊಡಿಸುವ ಭರವಸೆ ನೀಡಿ ಹಲವರಿಂದ ಲಕ್ಷಾಂತರ ರೂಪಾಯಿ ಹಣ ವಸೂಲು ಮಾಡಿದ್ದಾರೆ. ಆರು ತಿಂಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಎರಡು ವರ್ಷ ಕಳೆದರೂ ಕೆಲಸ ಕೊಡಿಸಿಲ್ಲ. ಹಣವನ್ನೂ ವಾಪಸ್ ನೀಡಿಲ್ಲ' ಎಂದು ಅಭ್ಯರ್ಥಿಗಳು ದೂರಿನಲ್ಲಿ ಆರೋಪಿಸಿದ್ದಾರೆ.

'ಇದೇ ರೀತಿ 20 ಮಂದಿಯಿಂದ ಹಣ ಪಡೆದು ವಂಚನೆ ಮಾಡಿದ್ದಾರೆ. ಕೆಲವರಿಂದ ₹3 ಲಕ್ಷದಿಂದ ₹4 ಲಕ್ಷ ಪಡೆದಿದ್ದಾರೆ. ಉದ್ಯೋಗ ಕೊಡಿಸುವ ಸಂಬಂಧ ಒಪ್ಪಂದ ಪತ್ರಕ್ಕೂ ಸಹಿ ಮಾಡಿದ್ದಾರೆ. ಈ ಬಗ್ಗೆ ಪ್ರಶ್ನಿಸಿದರೆ ಕಂಪನಿ ಸಿಬ್ಬಂದಿ ಸರಿಯಾದ ಉತ್ತರ ನೀಡುತ್ತಿಲ್ಲ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಅಪರಾಧ ಸುದ್ದಿ

'ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ವ್ಯವಸ್ಥಾಪಕ ಶರತ್ ಅವರನ್ನು ಕರೆಸಿ ವಿಚಾರಣೆ ಮಾಡಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ದುಬೈನಲ್ಲಿರುವ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್ ಕಳುಹಿಸಲಾಗಿದೆ. ಪೋಲೆಂಡ್ ಸೇರಿದಂತೆ ಹಲವು ದೇಶಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿಕೊಂಡು, ಹಣ ಪಾವತಿಸಿಕೊಳ್ಳಲಾಗಿದೆ. ಅಂದಾಜು ₹40 ಲಕ್ಷ ವಂಚನೆ ಮಾಡಲಾಗಿದೆ ಎಂದು ಐದು ಮಂದಿ ದೂರು ನೀಡಿದ್ದಾರೆ ' ಎಂದು ಪೊಲೀಸರು ತಿಳಿಸಿದರು.

ರೌಡಿಶೀಟರ್ ಕೊಲೆ: ಐವರು ಆರೋಪಿಗಳ ಬಂಧನ

ಜೈಲಿನಲ್ಲಿದ್ದೇ ಅಣ್ಣನ ಹತ್ಯೆಗೆ ಪ್ರತೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಮುಖ್ಯರಸ್ತೆಯ ಕೊಡಗಿ ತಿರುಮಲಪುರದ ಬಾರ್‌ನಲ್ಲಿ ನಡೆದಿದ್ದ ರೌಡಿಶೀಟರ್ ಜಯರಾಮು ಕೊಲೆ ಪ್ರಕರಣ ಸಂಬಂಧ ಮತ್ತೊಬ್ಬ ಆರೋಪಿಯನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು, ಇದರೊಂದಿಗೆ ಬಂಧಿತರ ಸಂಖ್ಯೆ ಐದಕ್ಕೇರಿದೆ.

ಯಲಹಂಕದ ಮುನಿರಾಜು (24), ರಾಜೇಶ್ (21), ಯತೀಶ್ ಗೌಡ (26), ವಿನಯ್ ಕುಮಾರ್ (25) ಅವರನ್ನು ಶನಿವಾರ ಬಂಧಿಸಲಾಗಿತ್ತು. ತಲೆಮರೆಸಿಕೊಂಡಿದ್ದ ಮತ್ತೊಬ್ಬ ಆರೋಪಿ ಉದಯ್ ಎಂಬಾತನನ್ನು ಭಾನುವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'2016ರಲ್ಲಿ ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಿರಣ್ ಎಂಬಾತನ ಕೊಲೆಯಲ್ಲಿ ಜಯರಾಮ್ ಪ್ರಮುಖ ಆರೋಪಿಯಾಗಿದ್ದ. ಯುವತಿಯೊಬ್ಬಳ ವಿಚಾರಕ್ಕೆ ನಡೆದ ಜಗಳ ಇದಾಗಿತ್ತು. ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸಿ ಹೊರಬಂದಿದ್ದ ಜಯರಾಮ್, ಬಳಿಕ ಹೆಸರಘಟ್ಟ ಸಮೀಪದ ಹುರಳಿ ಚಿಕ್ಕನಾಯಕನಹಳ್ಳಿಯಲ್ಲಿ ಕೋಳಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಜಯರಾಮ್ ವಿರುದ್ಧ ಸೇಡು ತೀರಿಸಿಕೊಳ್ಳಲು ಕಿರಣ್ ಸಹೋದರ ಮನೋಜ್ ಯೋಜನೆ ರೂಪಿಸುತ್ತಿದ್ದ. ಆದರೆ, 2023ರಲ್ಲಿ ಸಿಸಿಬಿ ಪೊಲೀಸರು ಗೂಂಡಾ ಕಾಯ್ದೆಯಡಿ ಮನೋಜ್‌ನನ್ನು ಬಂಧಿಸಿದ್ದರು. ಜೈಲಿನಲ್ಲಿದ್ದುಕೊಂಡೇ ಜಯರಾಮ್‌ನ ಕೊಲೆಗೆ ಸಂಚು ರೂಪಿಸಿದ್ದ ಮನೋಜ್, ಇತರೆ ಆರೋಪಿಗಳಾದ ಮುನಿರಾಜು ತಂಡದವರ ಜತೆಗೆ ನಿರಂತರ ಸಂಪರ್ಕದಲ್ಲಿದ್ದ' ಎಂದು ಹೇಳಿದರು.

ತಲ್ವಾರ್ ಹಿಡಿದಿದ್ದ ಸವಾರರ ಬಂಧನ

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ಹೋಗುವಾಗ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದು ಭಯ ಸೃಷ್ಟಿಸಿದ್ದ ಕಳ್ಳ ಸೇರಿ ಇಬ್ಬರನ್ನು ಶಿವಾಜಿನಗರ ಪೊಲೀಸರು ಬಂಧಿಸಿದ್ದಾರೆ.

ವಸಂತನಗರದ ಜಲ್ಲಾ ಸಿದ್ದಿಕಿ (36) ಮತ್ತು ಸಂತೋಷ್ (26) ಬಂಧಿತರು. ಈ ಇಬ್ಬರು ಶಿವಾಜಿನಗರದ ಬಂಬೂ ಬಜಾರ್ ರಸ್ತೆಯಲ್ಲಿ ಕೈಯಲ್ಲಿ ತಲ್ವಾರ್ ಹಿಡಿದು ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಿದ್ದರು. ಈ ದೃಶ್ಯವನ್ನು ಸಾರ್ವಜನಿಕರೊಬ್ಬರು ವಿಡಿಯೊ ಮಾಡಿ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು.

'ವೃತ್ತಿಪರ ಕಳ್ಳ ಜಲ್ಲಾ ಸಿದ್ದಿಕಿ ವಿರುದ್ಧ ದರೋಡೆ, ಸುಲಿಗೆ, ಮನೆ ಕಳ್ಳತನ ಸೇರಿ ನಗರದ ವಿವಿಧ ಠಾಣೆಗಳಲ್ಲಿ 30 ಪ್ರಕರಣಗಳು ದಾಖಲಾಗಿವೆ. ಜಾಮೀನಿನ ಮೇಲೆ ಹೊರಬಂದ ಬಳಿಕವೂ ಮತ್ತೆ ಚಾಳಿ ಮುಂದುವರಿಸಿದ್ದ. ವಾಹನ ಪತ್ತೆ ಮಾಡಿ, ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಲಾರಿಗೆ ಕಾರು ಡಿಕ್ಕಿ: ಐವರು ಸಾವು

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ ತಾಲ್ಲೂಕು ತಮಟಕಲ್ಲು ಬಳಿ ನಡೆದ ಅಪಘಾತದಲ್ಲಿ ಇನ್ನೊವಾ ಕಾರು ನಜ್ಜುಗುಜ್ಜಾಗಿದೆ

ಚಿತ್ರದುರ್ಗ: ತಾಲ್ಲೂಕಿನ ತಮಟಕಲ್ಲು ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಭಾನುವಾರ, ನಿಂತಿದ್ದ ಲಾರಿಗೆ ಇನ್ನೊವಾ ಕಾರೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರಿನ ವಿದ್ಯಾರಣ್ಯಪುರದ ನಿವಾಸಿ ಎನ್.ಎಸ್.ರುದ್ರಸ್ವಾಮಿ (69), ಚಂದ್ರಹಾಸ (67), ಬಿಎಂಟಿಸಿ ನಿವೃತ್ತ ನೌಕರ ಶಾಂತಮೂರ್ತಿ (70), ಶ್ರೀನಿವಾಸ (69) ಹಾಗೂ ಮಲ್ಲಿಕಾರ್ಜುನ (70) ಮೃತಪಟ್ಟವರು. ಚಿದಂಬರಾಚಾರ್ (69) ಗಂಭೀರವಾಗಿ ಗಾಯಗೊಂಡಿದ್ದು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಎಲ್ಲರೂ ನಿವೃತ್ತ ನೌಕರರಾಗಿದ್ದು, ಉತ್ತರ ಕರ್ನಾಟಕ ಭಾಗದ ಧಾರ್ಮಿಕ ಸ್ಥಳಗಳಿಗೆ ಪ್ರವಾಸಕ್ಕೆ ತೆರಳಿದ್ದರು. ಸವದತ್ತಿ ರೇಣುಕಾ ಯಲ್ಲಮ್ಮ ದೇವಾಲಯದಿಂದ ವಾಪಸಾಗುತ್ತಿದ್ದರು.

ಬೆಂಗಳೂರು ಕಡೆಗೆ ಹೋಗಬೇಕಿದ್ದ ತಮಿಳುನಾಡಿನ ಲಾರಿ, ತಮಟಕಲ್ಲು ಬಳಿ ರಸ್ತೆ ಬದಿಯಲ್ಲಿ ನಿಂತಿತ್ತು. ಲಾರಿಯನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿ ಚಾಲಕ ಮೂತ್ರ ವಿಸರ್ಜನೆಗೆಂದು ತೆರಳಿದ್ದರು. ಈ ವೇಳೆ ಹಿಂದಿನಿಂದ ವೇಗವಾಗಿ ಬಂದ ಇನ್ನೊವಾ ಕಾರು ಡಿಕ್ಕಿ ಹೊಡೆದಿದೆ. ಚಂದ್ರಹಾಸ ಅವರು ಕಾರು ಚಾಲನೆ ಮಾಡುತ್ತಿದ್ದರು. ಡಿಕ್ಕಿಯ ರಭಸಕ್ಕೆ ಕಾರಿನ ಅರ್ಧಭಾಗ ನಜ್ಜುಗುಜ್ಜಾಗಿದೆ. ಕಾರಿನ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ.

ಹೆದ್ದಾರಿಯಲ್ಲಿ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಮೃತದೇಹಗಳನ್ನು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ ನಂತರ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಯಿತು. ಅಪಘಾತ ಸ್ಥಳಕ್ಕೆ ಜಿಲ್ಲಾ ಎಸ್ಪಿ ರಂಜಿತ್ ಕುಮಾರ್ ಬಂಡಾರು, ಡಿವೈಎಸ್‌ಪಿ ದಿನಕರ್ ಭೇಟಿ ನೀಡಿ ಪರಿಶೀಲಿಸಿದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರಿಗೆ ಬೆಂಕಿ: ಇಬ್ಬರ ಸಜೀವ ದಹನ

ಚಿಂತಾಮಣಿ (ಚಿಕ್ಕಬಳ್ಳಾಪುರ): ಚಿಂತಾಮಣಿ–ಮದನಪಲ್ಲಿ ರಸ್ತೆಯ ಗೋಪಲ್ಲಿ ಗೇಟ್ ಬಳಿ ಭಾನುವಾರ ಸಂಭವಿಸಿದ ಅಪಘಾತದಲ್ಲಿ ರಸ್ತೆಯಲ್ಲಿಯೇ ಕಾರೊಂದು ಹೊತ್ತಿ ಉರಿದಿದೆ. ಕಾರಿನಲ್ಲಿದ್ದ ಇಬ್ಬರು ಸಜೀವ ದಹನವಾಗಿದ್ದು, ಮೂವರನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಬೆಂಗಳೂರಿನ ಮಹದೇವಪುರದಲ್ಲಿ ವಾಸವಿರುವ ಆಂಧ್ರಪ್ರದೇಶದ ಕಡಪದ ಧನಂಜಯ ರೆಡ್ಡಿ (31) ಮತ್ತು ಕಲಾವತಿ (50) ಬೆಂಕಿಯಲ್ಲಿ ಬೆಂದು ಹೋಗಿದ್ದಾರೆ. ಮಹಾಲಕ್ಷ್ಮಿ (60), ಶೋಭಾ (28) ಮತ್ತು ಮೂರು ವರ್ಷದ ಮನ್ವಿತ್ ಅವರಿಗೆ ಸುಟ್ಟ ಗಾಯಗಳಾಗಿದ್ದು ಬೆಂಗಳೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಡಪದಲ್ಲಿ ಸಂಬಂಧಿಕರೊಬ್ಬರ ಅಂತ್ಯಸಂಸ್ಕಾರ ಮುಗಿಸಿಕೊಂಡು ಬೆಂಗಳೂರಿಗೆ ವಾಪಸ್ ಆಗುತ್ತಿದ್ದಾಗ ಬೆಂಗಳೂರಿನಿಂದ ತಿರುಪತಿಗೆ ಹೊರಟಿದ್ದ ಖಾಸಗಿ ಬಸ್ ಡಿಕ್ಕಿ ಹೊಡೆಯಿತು. ಮತ್ತೊಂದು ವಾಹನ ಹಿಂದಿಕ್ಕುವ ಭರದಲ್ಲಿ ಬಸ್ ಚಾಲಕ ನಿಯಂತ್ರಣ ಕಳೆದುಕೊಂಡಿದ್ದೇ ಅಪಘಾತಕ್ಕೆ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಅಪಘಾತದ ರಭಸಕ್ಕೆ ಎರಡೂ ವಾಹನಗಳು ರಸ್ತೆ ಬದಿಗೆ ಮಗುಚಿ ಬಿದ್ದಿದ್ದವು. ಈ ವೇಳೆ ಕಾರಿಗೆ ಬೆಂಕಿ ಹೊತ್ತಿಕೊಂಡಿತು. ಸ್ಥಳೀಯರು ಕಾರಿನಲ್ಲಿದ್ದ ಕೆಲವರನ್ನು ರಕ್ಷಿಸಿದರು.



ಸೂಲಗಿತ್ತಿ ಜಾನಕಿ ಪೂಜಾರಿ ಅವರನ್ನು ಬಿಲ್ಲವ ಅಸೋಸಿಯೇಶನ್ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು – ಪ್ರಜಾವಾಣಿ ಚಿತ್ರ

ರಾಜಕೀಯದಲ್ಲಿ ಮಹಿಳೆಗೆ ಸಿಗದ ಆದ್ಯತೆ

ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಬೇಸರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಧಾನಸಭೆಯ 224 ಸದಸ್ಯರಲ್ಲಿ ಕೇವಲ ಒಂಬತ್ತು ಶಾಸಕಿಯರು
- ಬಿಲ್ಲವ ಸಂಘದ ಕ್ರೀಡಾ ಕೂಟಕ್ಕೆ ₹10 ಲಕ್ಷದ ಬೇಡಿಕೆ

ಬೆಂಗಳೂರು: ವಿಧಾನಸಭೆಯ 224 ಸದಸ್ಯರಲ್ಲಿ ಕೇವಲ ಒಂಬತ್ತು ಮಹಿಳೆಯರಿದ್ದಾರೆ. ಆದರೂ ಮಹಿಳಾ ಪ್ರಾತಿನಿಧ್ಯ ಹೆಚ್ಚಿಸುವ ಮಹಿಳಾ ಮೀಸಲಾತಿ ಜಾರಿಯಾಗುತ್ತಿಲ್ಲ ಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ಬಿಲ್ಲವ ಅಸೋಸಿಯೇಶನ್‌ನ ಸುವರ್ಣ ಮಹೋತ್ಸವ ವರ್ಷದ ಪ್ರಯುಕ್ತ ಭಾನುವಾರ ನಡೆದ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಮಹಿಳೆಯರು ಮತ್ತು ಪುರುಷರ ನಡುವೆ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆ ಸೃಷ್ಟಿಯಾದರೆ ಮಾತ್ರ ಶೋಷಣೆ, ದೌರ್ಜನ್ಯಮುಕ್ತ ಸಮಾಜವನ್ನು ಕಟ್ಟಬಹುದು ಎಂದರು.

ಗ್ಯಾರಂಟಿ ಯೋಜನೆಗಳ ರಾಜ್ಯಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಮಾತನಾಡಿ, 'ಸಂಘದ ಕ್ರೀಡಾಕೂಟಕ್ಕೆ ₹10 ಲಕ್ಷ ಅನುದಾನಕ್ಕೆ ಬೇಡಿಕೆ ಇಟ್ಟಿದ್ದು, ಸರ್ಕಾರದಿಂದ ಬಿಡುಗಡೆ ಮಾಡಿಸಲು ಪ್ರಯತ್ನಿಸಲಾಗುವುದು. ಸಂಘದ ಸುವರ್ಣ ಮಹೋತ್ಸವ ಆಚರಣೆಗೆ ಬೇಕಾದ ಪ್ರೋತ್ಸಾಹ ನೀಡಲಾಗುವುದು ಎಂದು ಭರವಸೆ ನೀಡಿದರು.

ಬಿಲ್ಲವ ಅಸೋಸಿಯೇಶನ್ ಅಧ್ಯಕ್ಷ ವೇದಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕಿ ಬಿ.ಎಲ್. ಸುಜಾತಾ ರಾಥೋಡ್, ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಹರಿಣಿ ಎಸ್.ಕೆ., ಸಹ ಅಧ್ಯಕ್ಷೆ ಶಶಿ ಗಣೇಶ್, ಮಾಜಿ ಅಧ್ಯಕ್ಷರಾದ ಶಾರದಾ ಕೃಷ್ಣ, ಭಾರತಿ ಎಲ್. ಕೋಟ್ಯಾನ್, ರತ್ನಾ ಜಯರಾಂ, ಜಲಜಾ ಶೇಖರ್ ಭಾಗವಹಿಸಿದ್ದರು. ಸಾಧಕ ಮಹಿಳೆಯರಾದ ಅನಿತಾ ಪೂಜಾರಿ, ಅಮಿತಾ ಆನಂದ್, ವಿದ್ಯಾಶ್ರೀ ಅಂಚನ್, ಜಾನಕಿ ಪೂಜಾರಿ ಅವರನ್ನು ಗೌರವಿಸಲಾಯಿತು. ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು ನಡೆದವು.

'ಅಪರ್ಣಾಗೆ ಸಂಜೀವಿನಿಯಾಗಿದ್ದ ವೇದಿಕೆ, ಮೈಕ್'

ಬಿಐಸಿ ಹಮ್ಮಿಕೊಂಡಿದ್ದ 'ಇತಿ ನಿಮ್ಮ ಅಪರ್ಣಾ' ಕಾರ್ಯಕ್ರಮದಲ್ಲಿ ನಾಗರಾಜ್ ವಸ್ತಾರೆ ಮನದಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪರ್ಣಾಳಿಗೆ ವೇದಿಕೆ ಮತ್ತು ಮೈಕ್ ಸಂಜೀವಿನಿಯಾಗಿತ್ತು. ಆದ್ದರಿಂದಲೇ ಆಕೆಗೆ ಕ್ಯಾನ್ಸರ್ ಇರುವುದು ತಿಳಿದ ಬಳಿಕವೂ ಕಾರ್ಯಕ್ರಮಗಳಿಗೆ ತೆರಳದಂತೆ ನಿರ್ಬಂಧಿಸಿರಲಿಲ್ಲ. ಆಕೆ ಮೈಕ್ ಹಿಡಿದು ಮಾತಿಗಿಳಿದರೆ ಎಲ್ಲವನ್ನೂ ಮರೆಯುತ್ತಿದ್ದಳು...'

ಹೀಗೆ ನಿರೂಪಕಿ ಅಪರ್ಣಾ ಅವರ ಕೊನೆಯ ದಿನಗಳನ್ನು ಸ್ಮರಿಸಿಕೊಂಡವರು ವಾಸ್ತುಶಿಲ್ಪಿಯೂ ಆಗಿರುವ ಅವರ ಪತಿ ನಾಗರಾಜ್ ವಸ್ತಾರೆ.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) ದೊಮ್ಮಲೂರಿನಲ್ಲಿರುವ ತನ್ನ ಕೇಂದ್ರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಇತಿ ನಿಮ್ಮ ಅಪರ್ಣಾ' ಕಾರ್ಯಕ್ರಮದಲ್ಲಿ ಪತ್ನಿಯ ಬಗ್ಗೆ ಮನದಾಳ ಹಂಚಿಕೊಂಡರು.

'ಆಕೆಗೆ ಕ್ಯಾನ್ಸರ್ ಇದೆ ಎನ್ನುವುದು ತಿಳಿಯುತ್ತಿದಂತೆ ನಾನು ಕುಸಿದುಹೋಗಿದ್ದೆ. ಆದರೆ, ಆಕೆ ಅದನ್ನೂ ನಗುತ್ತಲೇ ಸ್ವೀಕರಿಸಿದ್ದಳು. ತಾನು ಕ್ಯಾನ್ಸರ್ ಪೀಡಿತೆಯೆಂದು ಒಂದು ದಿನವೂ ತಲೆ ಕೆಡಿಸಿಕೊಂಡಿರಲಿಲ್ಲ. ದುಃಖ ಒಳ ಉಡುಪಿನಂತೆ. ಅದು ಖಾಸಗಿಯಾಗಿಯೇ ಇರಬೇಕು. ಆಕೆ ಎಂದೂ ಹೊರಗಡೆ ದುಃಖವನ್ನು ತೋರಿಸಿಕೊಂಡಿರಲಿಲ್ಲ. ಜೀವನದ ಕೊನೆಯ ವರೆಗೂ ನಗುವನ್ನೇ ತೊಟ್ಟಿದ್ದಳು.



ಕಾರ್ಯಕ್ರಮದಲ್ಲಿ ಭಾರತಿ ಹೆಗಡೆ, ನಾಗರಾಜ್ ವಸ್ತಾರೆ, ಯಶವಂತ ಸರದೇಶಪಾಂಡೆ ಮತ್ತು ಶಂಕರ್ ಪ್ರಕಾಶ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕ್ಯಾನ್ಸರ್ ಎದುರಿಸುತ್ತಲೇ ಕಾರ್ಯಕ್ರಮಗಳಿಗೆ ತೆರಳಿದ ಅಪರ್ಣಾ, ದೇಹಕ್ಕೆ ದಣಿವಾದರೂ ಅದನ್ನು ಹೊರಗಡೆ ಹಂಚಿಕೊಂಡಿರಲಿಲ್ಲ' ಎಂದರು.

ಅಪರ್ಣಾ ಅವರು ಆರೋಗ್ಯ ಕಡೆಗಣಿಸಿದರೇ ಎಂಬ ಪ್ರೇಕ್ಷಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, 'ಯಾವುದೇ ಸುಳಿವು ನೀಡದೆ ಕ್ಯಾನ್ಸರ್ ಆಕೆಯ ದೇಹ ಪ್ರವೇಶಿಸಿತ್ತು. ಅದು ಗೊತ್ತಾಗುವ ವೇಳೆಗೆ ಪರಿಸ್ಥಿತಿ ಕೈಮೀರಿತ್ತು. ವೈದ್ಯರು ಆಕೆಗೆ ಆರು ತಿಂಗಳ ಗಡುವು ನೀಡಿದರೂ, ಆತ್ಮಸ್ಥೈರ್ಯದ ಬಲದಿಂದ ಆಕೆ ಎರಡು ವರ್ಷ ರೋಗದ ವಿರುದ್ಧ ಹೋರಾಡಿದಳು. ಎಂದೂ ಆರೋಗ್ಯವನ್ನು ಕಡೆಗಣಿಸಿರಲಿಲ್ಲ. ಚೆನ್ನಾಗಿ ತನ್ನನ್ನು ಆರೈಕೆ ಮಾಡಿಕೊಳ್ಳುತ್ತಿದ್ದಳು' ಎಂದು ಹೇಳಿದರು.

ತಂಡವಾಗಿ ಕೆಲಸ: ನಿರೂಪಕ ಶಂಕರ್ ಪ್ರಕಾಶ್, 'ನಾನು ಮತ್ತು ಅಪರ್ಣಾ 25 ವರ್ಷಗಳಿಂದ ನಿರೂಪಕರಾಗಿ ಒಟ್ಟಿಗೆ ಕೆಲಸ ಮಾಡಿದ್ದೇವೆ. ಶೇಕಡ 100ರಷ್ಟು ವೃತ್ತಿಧರ್ಮವನ್ನು ಪರಿಪಾಲನೆ ಮಾಡುವ ಜತೆಗೆ ತಂಡವಾಗಿ ಕೆಲಸ ಮಾಡುತ್ತಿದ್ದೆವು. ನಿರೂಪಕರಾದವರು ಪ್ರಸ್ತುತ ವಿಷಯಗಳು ಹಾಗೂ ಬೆಳವಣಿಗೆಗಳ ಬಗ್ಗೆ ತಿಳಿದಿರಬೇಕಾಗುತ್ತದೆ. ಇದೇ ಸಿದ್ಧತೆಯಾಗಿರುತ್ತದೆ' ಎಂದು ಅಭಿಪ್ರಾಯಪಟ್ಟರು.

ಲೇಖಕಿ ಭಾರತಿ ಹೆಗಡೆ ಅವರು ಈ ಚರ್ಚಾಗೋಷ್ಠಿಯನ್ನು ನಿರ್ವಹಿಸುವ ಜತೆಗೆ ಅಪರ್ಣಾ ಅವರ ಜತೆಗಿನ ಒಡನಾಟ ಸ್ಮರಿಸಿಕೊಂಡರು.

'ಕಣ್ಣುಗಳ ಮೂಲಕವೇ ಅಭಿನಯ'

'ಅಪರ್ಣಾ ಅವರಿಗೆ ಸರಳತೆ ದೊಡ್ಡ ಆಸ್ತಿಯಾಗಿತ್ತು. ಕ್ಲಿಷ್ಟವಾದ ವಿಷಯವನ್ನೂ ಸುಲಭವಾಗಿ ತಿಳಿಸುವ ಸಾಮರ್ಥ್ಯ ಹೊಂದಿದ್ದರು. ಉತ್ತಮ ವಾಗ್ಮಿ ಅಷ್ಟೇ ಆಗಿರದೆ, ಒಳ್ಳೆಯ ಕೇಳುಗರೂ ಆಗಿದ್ದರು. ಅವರಿಗೆ ಭಾಷೆಯ ಮೇಲೆ ಹಿಡಿತವಿತ್ತು. ಉತ್ತಮ ಕಲಾವಿದೆಯೂ ಆಗಿದ್ದ ಅವರು, ಕಣ್ಣುಗಳ ಮೂಲಕವೇ ಅದ್ಭುತವಾಗಿ ಅಭಿನಯಿಸುತ್ತಿದ್ದರು. ಅಪರ್ಣಾ ಅವರ ಹಿಂದಿನ ಶಕ್ತಿ ಪತಿ ನಾಗರಾಜ್ ಆಗಿದ್ದರು' ಎಂದು ರಂಗ ನಿರ್ದೇಶಕ ಹಾಗೂ ಕಲಾವಿದ ಯಶವಂತ ಸರದೇಶಪಾಂಡೆ ಹೇಳಿದರು.

ಶಾಸಕ ವಿನಯ ಕುಲಕರ್ಣಿ ಕಾರು ಚಾಲಕನ ವಿಚಾರಣೆ



ವಿನಯ ಕುಲಕರ್ಣಿ

ಬೆಂಗಳೂರು: ಸಾರ್ವಜನಿಕರಿಗೆ ಹಣ, ಚಿನ್ನ ವಂಚಿಸಿದ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡ ಪ್ರಕರಣ ಸಂಬಂಧ ಮಾಜಿ ಸಚಿವ ವಿನಯ ಕುಲಕರ್ಣಿ ಬಳಸುತ್ತಿದ್ದ ಬೆಂಜ್ ಕಾರು ಚಾಲಕನನ್ನು ಪಶ್ಚಿಮ ವಿಭಾಗದ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಮತ್ತೊಂದೆಡೆ ಪ್ರಕರಣ ಬಹುತೇಕ ಪೂರ್ಣಗೊಳಿಸಿರುವ ಪೊಲೀಸರು ಸದ್ಯದಲ್ಲಿಯೇ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಿದ್ದಾರೆ.

ಐಶ್ವರ್ಯಗೌಡಗೆ ಸೇರಿದ ಬೆಂಜ್ ಕಾರು ವಿನಯ್ ಕುಲಕರ್ಣಿ ಅವರ ಮನೆಯಲ್ಲಿ ಪತ್ತೆಯಾಗಿತ್ತು. ಈ ಬೆನ್ನಲ್ಲೇ ಕಾರನ್ನು ಪೊಲೀಸರಿಗೆ ಒಪ್ಪಿಸುವಂತೆ ಸೂಚಿಸಲಾಗಿತ್ತು.

'ಈ ಸಂಬಂಧ ಇತ್ತೀಚೆಗೆ ಕಾರನ್ನು ಆರ್.ಆರ್.ನಗರ ಠಾಣೆಗೆ ವ್ಯಕ್ತಿಯೊಬ್ಬ ತಂದು ಬಿಟ್ಟಿದ್ದ. ಬಳಿಕ ಆತನ ವಿಚಾರಣೆ ನಡೆಸಿದಾಗ, ಚಾಲಕ ವಿರೇಶ್ ದಳವಾಯಿ ಸೂಚನೆ ಮೇರೆಗೆ ತಂದಿದ್ದೇನೆ ಎಂದು ಹೇಳಿಕೆ ನೀಡಿದ್ದ. ಹಾಗಾಗಿ ವಿರೇಶ್ ದಳವಾಯಿಗೆ ನೋಟಿಸ್ ನೀಡಲಾಗಿತ್ತು. ಅದರಂತೆ ಕೆಲ ದಿನಗಳ ಹಿಂದೆ ವಿಚಾರಣೆಗೆ ಹಾಜರಾಗಿದ್ದು, ಸಾಹೇಬರು (ವಿನಯ ಕುಲಕರ್ಣಿ) ಅವರು ಇನ್ಮುಂದೆ ಈ ಕಾರು ಚಾಲನೆ ಮಾಡುವಂತೆ ಸೂಚಿಸಿದರು. ಹೀಗಾಗಿ ಆ ಕಾರು ಚಾಲನೆ ಮಾಡುತ್ತಿದ್ದೇನೆ ಎಂದು ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ಚಿತ್ರಾವಳಿ



ನಂದಲಾಲ ಸೇವಾ ಸಮಿತಿ ಟ್ರಸ್ಟ್ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾಗೂ ಟ್ರಸ್ಟ್ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಮಾಲತಿ ಹೊಳ್ಳ, ಪನಿಯನ್ ಬುಡಕಟ್ಟು ಸಮುದಾಯದ ಸಬಲೀಕರಣದ ನೇತೃತ್ವದ ವಹಿಸಿರುವ ಎಸ್.ಆರ್. ದಿವ್ಯಾ, ಯುವ ವಿಜ್ಞಾನಿ ಸಿಂಧೂರಾ ರಾಜಾ ಅವರಿಗೆ ನಂದದೀಪಂ ಪ್ರಶಸ್ತಿ ಹಾಗೂ ನಗದು ಬಹುಮಾನ ನೀಡಿ ಗೌರವಿಸಲಾಯಿತು



'ಈ ಹೊತ್ತಿಗೆ' ಕಾವ್ಯ ಪ್ರಶಸ್ತಿ ಪಡೆದ ಪರಿಮಳದ ಬಾಕಿ ಮೊತ್ತ' ಕವನ ಸಂಕಲನ, ಕಥಾ ಪ್ರಶಸ್ತಿ ಪಡೆದ 'ಕತೆ ಜಾರಿಯಲ್ಲಿದೆ' ಕಥಾ ಸಂಕಲನಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಕಥೆಗಾರ್ತಿ ಪೂರ್ಣಿಮಾ ಭಟ್ಟ ಸಣ್ಣಕೇರಿ, ಕವಿ ಡಾ. ಲಕ್ಷ್ಮಣ ವಿ.ಎ., ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, 'ಸುಧಾ' ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ಚಿತ್ರ ನಿರ್ದೇಶಕ ಪ್ರವೀಣ್ ಕುಮಾರ್ ಜಿ. ಭಾಗವಹಿಸಿದ್ದರು



ನೌಕರರ ಆರೋಗ್ಯಕರ ಕೆಲಸಸಮತೋಲನ ಜೀವನದ ಹಕ್ಕಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಒಕ್ಕೂಟದ (ಕೆಐಟಿಯು) ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು

'ಸಂಸದ ತೇಜಸ್ವಿ ಸೂರ್ಯ ಹೇಳಿಕೆ ಹಿಂಪಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸದ ತೇಜಸ್ವಿ ಸೂರ್ಯ ಅವರು 'ಹೂಗುಚ್ಛಗಳು ನ್ಯಾಷನಲ್ ವೇಸ್ಟ್' ಎಂಬ ಹೇಳಿಕೆ ನೀಡಿರುವುದು ಸರಿಯಲ್ಲ. ಅವರು ತಮ್ಮ ಹೇಳಿಕೆಯನ್ನು ಕೂಡಲೇ ಹಿಂಪಡೆಯಬೇಕು' ಎಂದು ದಕ್ಷಿಣ ಭಾರತ ಹೂ ಬೆಳೆಗಾರರ ಸಂಘದ ಅಧ್ಯಕ್ಷ ಟಿ.ಎಂ. ಅರವಿಂದ್ ಒತ್ತಾಯಿಸಿದ್ದಾರೆ.



ತೇಜಸ್ವಿ ಸೂರ್ಯ

'ತೇಜಸ್ವಿ ಸೂರ್ಯ ಅವರು ತಮ್ಮ ಮದುವೆಯ ಅರತಕ್ಷತೆಗೆ ಫೇಸ್‌ಬುಕ್ ಲೈವ್ ಮೂಲಕ ಸಾರ್ವಜನಿಕರನ್ನು ಆಹ್ವಾನಿಸುವ ಸಂದರ್ಭದಲ್ಲಿ ಹೂಗುಚ್ಛಗಳು ನ್ಯಾಷನಲ್ ವೇಸ್ಟ್, ಅವುಗಳನ್ನು ನೀಡುವುದು ಬೇಡವೆಂದು ಮನವಿ ಮಾಡಿದ್ದರು. ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿ ಇಂತಹ ಹೇಳಿಕೆ ನೀಡುವುದು ಸರಿಯಲ್ಲ' ಎಂದು ಅರವಿಂದ್ ಪತ್ರಿಕಾ ಹೇಳಿಕೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಹೂವುಗಳಿಗೆ ಹಿಂದೂ ಸಂಸ್ಕೃತಿಯಲ್ಲಿ ಬಹಳ ಮಹತ್ವದ ಸ್ಥಾನವಿದೆ. ದೇವರ ಪೂಜೆಗೆ ಹೂವುಗಳನ್ನು ಅರ್ಪಿಸುವುದು ಹಾಗೂ ಶುಭ ಸಂದರ್ಭಗಳಲ್ಲಿ ನೈಸರ್ಗಿಕ ಹೂವುಗಳನ್ನು ನೀಡುವುದು ಶ್ರೇಷ್ಠ ಎಂಬ ನಂಬಿಕೆ ಇದೆ. ತಾವು ಉಡುಗೊರೆಯನ್ನು ಬೇಡ ಎಂದು ಹೇಳುವುದು ಸರಿ. ಆದರೆ, ಹೂಗುಚ್ಛಗಳನ್ನು 'ನ್ಯಾಷನಲ್ ವೇಸ್ಟ್' ಎನ್ನುವ ಪದ ಪ್ರಯೋಗದಿಂದ ಲಕ್ಷಾಂತರ ರೈತರ ಶ್ರಮದ ಫಲಕ್ಕೆ ಧಕ್ಕೆಯಾಗುತ್ತದೆ' ಎಂದು ತಿಳಿಸಿದ್ದಾರೆ.

ಮಯೂರ, ಸುಧಾ ಓದಿರಿ

3 ಕೆ.ಜಿ ಗಾಂಜಾ ವಶ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಪಟ್ಟಣದ ಹೊರವಲಯ ರಾಣಿ ಕ್ರಾಸ್ ಸಮೀಪ ಶನಿವಾರ ಮಧ್ಯಾಹ್ನ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಯುವಕರನ್ನು ದೇವನಹಳ್ಳಿ ಟೌನ್ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಜಯನಗರದ ಮೊಹಮ್ಮದ್ ಜಾಯಿದ್, ಮೊಹಮ್ಮದ್ ಫೈಜಲ್, ಸೈಯದ್ ಇಸ್ಮಾಯಿಲ್ ಪಾಷಾ ಬಂಧಿತರು. ಆರೋಪಿತರನ್ನು ದೇವನಹಳ್ಳಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿ, ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

ರಾಣಿ ಕ್ರಾಸ್ ಸಮೀಪದ ಖಾಸಗಿ ಬಡಾವಣೆಯಲ್ಲಿ ಗಾಂಜಾ ಸೊಪ್ಪು ಕಳ್ಳ ಸಾಗಣೆ ಹಾಗೂ ಮಾರಾಟ ಮಾಡುತ್ತಿರುವ ಮಾಹಿತಿ ಮೇರೆಗೆ ಪೊಲೀಸ್ ಸಿಬ್ಬಂದಿ ದಾಳಿ ನಡೆಸಿದರು.

ಆರೋಪಿಗಳ ಬಳಿ ಇದ್ದ ಬ್ಯಾಗ್ ಪರಿಶೀಲನೆ ಮಾಡಿದಾಗ 3.20 ಕೆ.ಜಿ. ಗಾಂಜಾ ಸೊಪ್ಪು, ತೂಕದ ಯಂತ್ರ, ಗಾಂಜಾ ತುಂಬಲು ಬಳಸುವ ಸಣ್ಣ ಪ್ಲಾಸ್ಟಿಕ್ ಕವರ್ ದೊರೆತಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ವಶಕ್ಕೆ ಪಡೆಯಲಾದ ಗಾಂಜಾ ಮೌಲ್ಯ ₹1.30 ಲಕ್ಷ ಎಂದು ಅಂದಾಜಿಸಲಾಗಿದೆ. ಬಿಟಿಎಂ ಬಡಾವಣೆಯ ಮೊಹಮ್ಮದ್ ಜಾಯಿದ್ ಎಂಬಾತನಿಂದ ಗಾಂಜಾ ಖರೀದಿ ಮಾಡಿರುವುದಾಗಿ ವಿಚಾರಣೆ ವೇಳೆ ತಿಳಿದುಬಂದಿದೆ.

30 ಕೆ.ಜಿ. ಗಾಂಜಾ ವಶ- ಬಂಧನ



ಮಡಿಕೇರಿ: ವಿರಾಜಪೇಟೆಯ ನಿಸರ್ಗ ಬಡಾವಣೆಯ ಕಿರುಮಕ್ಕಿ ಜಂಕ್ಷನ್ ಸಮೀಪ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಇಲಿಯಾಸ್ (47) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

30 ಕೆ.ಜಿ 550 ಗ್ರಾಂ ತೂಕದ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಯು ಮೈಸೂರಿನ ಸತ್ಯನಗರದ ನಿವಾಸಿ.ಸಿಪಿಐ ಅನೂಪ್ ಮಾದಪ್ಪ ನೇತೃತ್ವದ ತಂಡವು ಕಾರ್ಯಾಚರಣೆ ನಡೆಸಿದೆ.

ಎಸಿಪಿ ನವೀನ್ ಕುಮಾರ್, ಪಿಎಸ್‌ಐ ಬಾಲಕೃಷ್ಣ, ಸಿಬ್ಬಂದಿ ವೆಂಕಟೇಶ್ ಮರಿಗೌಡರ್, ನಾಗೇಶ್ ಪಾಟೀಲ, ನಾಗರಾಜ್ ಸಜ್ಜನ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಎಂಬಸ್ಸಿ ಪಬ್ಲಿಕ್ ಶಾಲೆ: ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯ ತಾಣ



ಸವಿತ ವೆಂಕಟೇಶ್

ಮಕ್ಕಳ ಸರ್ವತೋಮುಖ ಅಭಿವೃದ್ಧಿಯೇ ಶಿಕ್ಷಣವೆಂದು ಮಹಾತ್ಮಾ ಗಾಂಧೀಜಿ ಯವರು ಪ್ರತಿಪಾದಿಸಿದ್ದಾರೆ. ದೇಶದ ಭವಿಷ್ಯ ತರಗತಿಯ ನಾಲ್ಕು ಗೋಡೆಗಳ ಮಧ್ಯದಲ್ಲಿ ರೂಪುಗೊಳ್ಳುತ್ತದೆ ಎಂದು 1964 ರ ಕೊಠಾರಿ ಶಿಕ್ಷಣ ಆಯೋಗ ತಿಳಿಸುತ್ತದೆ. ಇದಕ್ಕೆ ಪ್ರತಿಬಿಂಬದಂತೆ 2002 ರಲ್ಲಿ ಪೋಷಕರ ಸಹಕಾರ ಶಿಕ್ಷಕರ ಶ್ರಮದಿಂದ ಎಂಬಸ್ಸಿ ಪಬ್ಲಿಕ್ ಶಾಲೆ ಐ.ಸಿ.ಎಸ್.ಇ ಪಠ್ಯಕ್ರಮದಲ್ಲಿ ಬೆಂಗಳೂರಿನ ಮಾಗಡಿ ರಸ್ತೆಯ ಚಿಕ್ಕಗೊಲ್ಲರಹಟ್ಟಿಯಲ್ಲಿ ಪ್ರಾರಂಭವಾಗಿ ಮೌಲ್ಯಾದಾರಿತ ಶಿಕ್ಷಣವನ್ನು ನೀಡುತ್ತಾ ವಿದ್ಯಾರ್ಥಿಗಳ ಅಭಿವೃದ್ಧಿಗೆ ಒಂದು ಉತ್ತಮ ಕಲಿಕಾ ಕೇಂದ್ರವಾಗಿ ಸೇವೆಯನ್ನು ಸಲ್ಲಿಸುತ್ತಿದೆ.

ಪಠ್ಯ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಈಜು, ಸ್ಕೇಟಿಂಗ್, ಬಾಸ್ಕೆಟ್‌ಬಾಲ್, ಫೆನ್ಸಿಂಗ್, ಥ್ರೋ ಬಾಲ್, ವಾಲಿ ಬಾಲ್, ಫುಟ್‌ಬಾಲ್, ಕ್ರಿಕೆಟ್, ಕರಾಟೆ, ಆರ್ಚರಿ, ಸಂಗೀತ, ನೃತ್ಯ, ರೊಬೋಟಿಕ್, ಕಲೆ ಇತ್ಯಾದಿಗಳಿಗೆ ಉತ್ತಮ ತರಬೇತಿದಾರರನ್ನು ಹೊಂದಿದ್ದು ಮಕ್ಕಳಿಗೆ ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಸಂವೇದನಾತ್ಮಕ ಬೆಳವಣಿಗೆಗೆ ಶ್ರಮಿಸಲಾಗುತ್ತಿದೆ.

ವಿದ್ಯಾರ್ಥಿಗಳಲ್ಲಿ ಜ್ಞಾನ ತಿಳಿವಳಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಕೌಶಲ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ಎಂಬಸ್ಸಿ ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಸಾಧನೆ ಮಾಡಿದ್ದಾರೆ. ಅನೇಕ ವಿದ್ಯಾರ್ಥಿಗಳು ಭಾರತೀಯ ಸೇನಾ ಪಡೆಯಲ್ಲಿ ಸ್ಥಾನ ಪಡೆದು ದೇಶ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಈ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳು ವಿದೇಶದಲ್ಲಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲಾ ಆಡಳಿತ ಮಂಡಳಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಸವಿತ ವೆಂಕಟೇಶ್ ಮತ್ತು ಶೈಕ್ಷಣಿಕ ಸಲಹೆಗಾರರಾದ ಶ್ರೀ ಬಿ. ವೆಂಕಟೇಶ್ ಮತ್ತು ಯುವ ನಿರ್ದೇಶಕರಾದ ಶ್ರೀ ವಿ. ಅಭಿಷೇಕ್ ಅವರು ಶಾಲೆಯ ಬಗ್ಗೆ ಉತ್ತಮ ದೃಷ್ಟಿಕೋನ ಹೊಂದಿದ್ದು ಇಂದಿನ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ನಮ್ಮ ಮಕ್ಕಳಲ್ಲಿ ಬೆಳೆಸುವ ಹಾಗೂ ಅತ್ಯುತ್ತಮವಾದ ಶಿಕ್ಷಣವನ್ನು, ಉತ್ತಮ ಸೌಲಭ್ಯಗಳೊಂದಿಗೆ ನೀಡಲು ಯಾವುದೇ ನಿರೀಕ್ಷೆ ಇಲ್ಲದೆ ಶ್ರಮಿಸುತ್ತಿದ್ದಾರೆ. ಶಾಲೆಯ ಪ್ರಯೋಗಾಲಯಗಳು, ವಿಶಾಲವಾದ ಆಟದ ಮೈದಾನ, ಗ್ರಂಥಾಲಯ ಒಳಗೊಂಡಂತೆ ಶಾಲೆಯನ್ನು ನವೀಕರಿಸಿದ್ದು ವಿಶೇಷವಾಗಿ ಚಿಕ್ಕ ಮಕ್ಕಳಿಗೆ ಆಟಿಕ ರೈಲು, ಆಟಿಕ ಕೊಠಡಿ ಕೂಡ ಶಾಲೆಗೆ ಒದಗಿಸುವ ಮೂಲಕ ಕಲಿಕೆಗೆ ಆನಂದದಾಯಕ ವಾತಾವರಣ ಏರ್ಪಡಿಸಲಾಗಿದೆ.

ಪ್ರಸ್ತುತ ಈ ಶಾಲೆಯಲ್ಲಿ ಪೂರ್ವ ಪ್ರಾಥಮಿಕದಿಂದ ಹತ್ತನೇ ತರಗತಿಯವರೆಗೆ ಐ.ಸಿ.ಎಸ್.ಇ. ಪಠ್ಯಕ್ರಮದಲ್ಲಿ ಬೋಧನೆ ನೀಡಲಾಗುತ್ತಿದ್ದು 2025-26ನೇ ಸಾಲಿಗೆ ಡೇ ಕೇರ್ ಹಾಗೂ ಪದವಿ ಪೂರ್ವ ಕಾಲೇಜು (11 ಮತ್ತು 12ನೇ ತರಗತಿಗಳು) ಪ್ರಾರಂಭಿಸಲಾಗುತ್ತಿದೆ. ಪ್ರತಿ ವರ್ಷ ಹತ್ತನೇ ತರಗತಿಯಲ್ಲಿ ಒಟ್ಟಾರೆ ಹಾಗೂ ವಿಷಯವಾರು 100 ಕ್ಕೆ 100 ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಅನೀಷ್ ಗೋವಿಂದ್ ಚಾರಿಟಬಲ್ ಟ್ರಸ್ಟ್.ನಿಂದ ಐದು ಗ್ರಾಂ ಚಿನ್ನದ ನಾಣ್ಯವನ್ನು ನೀಡುವುದರ ಮೂಲಕ ವಿದ್ಯಾರ್ಥಿ ಹಾಗೂ ತಂದೆ ತಾಯಿಯರನ್ನು ಸನ್ಮಾನಿಸಲಾಗುತ್ತಿದೆ.

ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಜೆ.ಇ.ಇ ಮತ್ತು ನೀಟ್ ತರಬೇತಿಯನ್ನು ಕೂಡ ನೀಡುವುದರೊಂದಿಗೆ ಪ್ರತಿ ವರ್ಷ ಕನಿಷ್ಠ ಹತ್ತು ವಿದ್ಯಾರ್ಥಿಗಳು ಎಂಬಸ್ಸಿ ಶಾಲೆಯಿಂದ ಐ.ಐ.ಟಿ ಪ್ರವೇಶ ಪಡೆಯಲು ಮತ್ತು ನೀಟ್ ಮೂಲಕ ಉತ್ತಮ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆಯಲು ಅನುಕೂಲವಾಗುವಂತೆ ನುರಿತ ತಜ್ಞರಿಂದ ತರಬೇತಿಯನ್ನು ನೀಡಲಾಗುವುದು.

ಎಂಬಸ್ಸಿ ಪಬ್ಲಿಕ್ ಶಾಲೆ 02 ಎಕರೆ 20 ಗುಂಟೆ ವಿಶಾಲವಾದ ಜಾಗ ಹೊಂದಿದ್ದು ಎರಡು ಬ್ಲಾಕ್ ದೊಡ್ಡ ಕಟ್ಟಡಗಳಿದ್ದು ವಿದ್ಯಾರ್ಥಿಗಳು ಈ ಶಾಲೆಗೆ ಸುಂಕದಕಟ್ಟೆ, ಮಾಗಡಿ ರಸ್ತೆಯ ಸುತ್ತಮುತ್ತಲಿನ ಅಲ್ಲದೇ ಜ್ಞಾನಭಾರತಿ, ವಿಜಯನಗರ, ಬಸವೇಶ್ವರನಗರ, ರಾಜಾಜಿನಗರ, ಚಂದ್ರಾಲೇಔಟ್, ನಾಗರಬಾವಿ, ಅತ್ತಿಗುಪ್ಪೆ, ಮೈಸೂರು ರಸ್ತೆ, ಕೆಂಗೇರಿ, ತಾವರೆಕೆರೆ ಹಾಗೂ ಜಿಂದಾಲ್ ಕಡೆಯಿಂದ ಈ ಕಲಿಕಾ ಕೇಂದ್ರಕ್ಕೆ ಬರುತ್ತಿದ್ದಾರೆ. ಈ ಮಕ್ಕಳಿಗಾಗಿ ಶಾಲಾ ವಾಹನ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ.

"ಶಿಕ್ಷಣ ಅತ್ಯಂತ ಶಕ್ತಿಯುತ ಆಯುಧವಾಗಿದ್ದು, ಇದು ವಿಶ್ವವನ್ನೇ ಬದಲಿಸುವ ಸಾಮರ್ಥ್ಯ ಹೊಂದಿದೆ" ಎಂದು ನೆಲ್ಸನ್ ಮಂಡೆಲ ರವರು ಹೇಳಿರುವಂತೆ ಎಂಬಸ್ಸಿ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳಿಗೆ ವೈಯಕ್ತಿಕ ಗಮನ ನೀಡಲಾಗುತ್ತಿದ್ದು, ಪ್ರತಿ ತರಗತಿಗಳಲ್ಲಿ 25 ರಿಂದ 30 ವಿದ್ಯಾರ್ಥಿಗಳನ್ನು ಮಾತ್ರ ಹೊಂದಿದ್ದು, ವೈಯಕ್ತಿಕ ಗಮನ ನೀಡುವುದರ ಮೂಲಕ ಗುಣಮಟ್ಟದ ಶಿಕ್ಷಣವನ್ನು ನೀಡುವುದರ ಜೊತೆಗೆ ವಿದ್ಯಾರ್ಥಿಗಳ ಜ್ಞಾನವಿಕಾಸಕ್ಕೆ ಹೆಚ್ಚು ಒತ್ತನ್ನು ನೀಡಲಾಗುತ್ತದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್



ಎಂಬಸ್ಸಿ ಪಬ್ಲಿಕ್ ಶಾಲೆ ನೋಟ

ಸಂಪರ್ಕಿಸಿ: ನಂ.60, ಚಿಕ್ಕಗೊಲ್ಲರಹಟ್ಟಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-21

ಫೋನ್: 8951390661, 9945856996, 9606876347

info@embassypublicschool.edu.in
www.embassypublicschool.edu.in

ಫಲಕ ಪ್ರದರ್ಶಿಸಿದ ಗ್ರೀನ್‌ಪೀಸ್ ಇಂಡಿಯಾ ಸದಸ್ಯರು • ದರ ಇಳಿಸಲು ಆಗ್ರಹ

ದರ ಏರಿಕೆ ಖಂಡಿಸಿ ಮೆಟ್ರೊದಲ್ಲೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆ ವಿರೋಧಿಸಿ ಗ್ರೀನ್ ಪೀಸ್ ಇಂಡಿಯಾ ಸಂಘಟನೆಯ ಕಾರ್ಯಕರ್ತರು ಭಾನುವಾರ ಮೆಟ್ರೊ ರೈಲಿನ ಒಳಗೆ ಪ್ರತಿಭಟನೆ ನಡೆಸಿದರು.

ಜ್ಞಾನಭಾರತಿ ಮೆಟ್ರೊ ನಿಲ್ದಾಣದಲ್ಲಿ ಹತ್ತಿದ ಕಾರ್ಯಕರ್ತರು ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಇಳಿಯುವ ಮುನ್ನ 'ಬೆಲೆ ಏರಿಕೆಯಿಂದ ಅಸಮಾನತೆ ಏರಿಕೆ' ಫಲಕ ಪ್ರದರ್ಶಿಸಿ ಮೌನ ಪ್ರತಿಭಟನೆ ನಡೆಸಿದರು. ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದಿಂದ ಹೊರಬಂದ ಬಳಿಕ 'ಮೆಟ್ರೊ ಪರಿಷ್ಕೃತ ದರವನ್ನು ಹಿಂಪಡೆಯಿರಿ' ಎಂದು ಆಗ್ರಹದ ಫಲಕ ಪ್ರದರ್ಶಿಸಿದರು.

'ನಮ್ಮ ಮೆಟ್ರೊ ಪ್ರಯಾಣದರ ಏರಿಕೆಯಾದ ಮೇಲೆ ಪ್ರಯಾಣಿಕರ ಸಂಖ್ಯೆ ಶೇ 13ರಷ್ಟು ಕಡಿಮೆಯಾಗಿದೆ.



ಗ್ರೀನ್‌ಪೀಸ್ ಇಂಡಿಯಾ ಸದಸ್ಯರು 'ನಮ್ಮ ಮೆಟ್ರೊ' ಎಂ.ಜಿ. ರಸ್ತೆ ನಿಲ್ದಾಣದ ಎದುರು ಪ್ರತಿಭಟನೆ ನಡೆಸಿದರು

ಪ್ರಯಾಣಿಕರ ಮೇಲೆ ಹೊರೆ ಬಿದ್ದಿದೆ ಎಂಬುದಕ್ಕೆ ಇದು ಸಾಕ್ಷಿ' ಎಂದು ಗ್ರೀನ್ ಪೀಸ್ ಇಂಡಿಯಾ ಪದಾಧಿಕಾರಿಗಳು ತಿಳಿಸಿದ್ದಾರೆ.

'ದರ ಏರಿಕೆಯಾದ ಮೇಲೆ ಗ್ರೀನ್‌ಪೀಸ್ ಇಂಡಿಯಾ ಸಮೀಕ್ಷೆ ನಡೆಸಿತ್ತು. ಈಗಿನ ದರವು ಒಂದು ಹೊತ್ತಿನ ಊಟಕ್ಕೆ ವ್ಯಯಿಸುವ ಖರ್ಚಿಗೆ ಸಮನಾಗಿದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಶೇ 72.9ರಷ್ಟು ಜನರು ಅಭಿಪ್ರಾಯ ನೀಡಿದ್ದರು. ಕಡಿಮೆ ಸಂಬಳಕ್ಕೆ ಕೆಲಸ ಮಾಡುವವರು, ವಿದ್ಯಾರ್ಥಿಗಳು ಸೇರಿದಂತೆ ಅನೇಕರಿಗೆ ಬೆಲೆ ಏರಿಕೆ ಜೇಬು ಖಾಲಿ ಮಾಡಿಸಿದೆ' ಎಂದು ಆರೋಪಿಸಿದ್ದಾರೆ.



ಪ್ರಯಾಣದರ ಏರಿಕೆಯನ್ನು ಖಂಡಿಸಿ ಗ್ರೀನ್‌ಪೀಸ್ ಇಂಡಿಯಾ ಸದಸ್ಯರು 'ನಮ್ಮ ಮೆಟ್ರೊ' ರೈಲಿನ ಒಳಗೇ ಭಾನುವಾರ ಪ್ರತಿಭಟನೆ ನಡೆಸಿದರು

ಸಮೀಕ್ಷೆಯಲ್ಲಿ ಭಾಗವಹಿಸಿದವರಲ್ಲಿ ಶೇ 40.4ರಷ್ಟು ಜನರು ಮೆಟ್ರೊವನ್ನು ಪ್ರಾಥಮಿಕ ಸಾರಿಗೆ ವಿಧಾನವಾಗಿ ಬಳಸುತ್ತಾರೆ. ಶೇ 73.4ರಷ್ಟು ಜನರು ಸಾರಿಗೆಗಾಗಿ ದಿನಕ್ಕೆ ₹50 ರಿಂದ ₹150 ಖರ್ಚು ಮಾಡುತ್ತಾರೆ. ಅನಿವಾರ್ಯ ಇಲ್ಲದ ಸಮಯದಲ್ಲಿ ಶೇ 75.4ರಷ್ಟು ಜನರು ಮೆಟ್ರೊ ಬಿಟ್ಟು ಬೇರೆ ಸಾರಿಗೆಗಳಲ್ಲಿ ಪ್ರಯಾಣಿಸುತ್ತಿದ್ದಾರೆ ಎಂದು ಗ್ರೀನ್‌ಪೀಸ್ ಇಂಡಿಯಾ ಪ್ರಕಟಣೆಯಲ್ಲಿ ತಿಳಿಸಿದೆ.

'ವೀರಶೈವ ಧರ್ಮ: ಗೊಂದಲ ಮೂಡಿಸುವ ಹೇಳಿಕೆ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀರಶೈವ ಧರ್ಮದ ಪ್ರಾಚೀನತೆ ಬಗ್ಗೆ ನೂರಾರು ಶಾಸನಗಳಲ್ಲಿ ಹಾಗೂ ಹಲವಾರು ಶರಣರ ವಚನಗಳಲ್ಲಿ ಉಲ್ಲೇಖಗೊಂಡಿದ್ದು, ಈ ಬಗ್ಗೆ ಸಮಾಜದಲ್ಲಿ ಗೊಂದಲ ಮೂಡಿಸುವ ಹೇಳಿಕೆ ನೀಡುತ್ತಿರುವುದು ಖಂಡನೀಯ' ಎಂದು ವೀರಶೈವ ಪೀಠಾಧಿಪತಿಗಳು ಹೇಳಿದ್ದಾರೆ.

ಉಜ್ಜಯಿನಿ ಪೀಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹಾಗೂ ಮಲ್ಲಿಕಾರ್ಜುನ ವಿಶ್ವಾರಾಧ್ಯ ಸ್ವಾಮೀಜಿ ಈ ಕುರಿತು ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು, 'ವೀರಶೈವ-ಲಿಂಗಾಯತ ಪ್ರತ್ಯೇಕಗೊಳಿಸುವ ಹೇಳಿಕೆಗಳ ಹಿಂದೆ ಪೂರ್ವಗ್ರಹಪೀಡಿತ ಯೋಚನೆ ಇದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕ್ರಿಸ್ತಪೂರ್ವದಿಂದ 19ನೇ ಶತಮಾನದವರೆಗಿನ ನೂರಾರು ಶಾಸನಗಳಲ್ಲಿ ವೀರಶೈವದ ಪ್ರಸ್ತಾಪವಿದೆ. ಸಂಸ್ಕೃತ, ಕನ್ನಡ, ತಮಿಳು, ತೆಲುಗು ಭಾಷೆಯ ಸಾಹಿತ್ಯ ಮತ್ತು ಶಾಸನಗಳು ವೀರಶೈವದ ಪ್ರಾಚೀನತೆಯನ್ನು ಸಾಬೀತುಪಡಿಸಿವೆ. ಕರ್ನಾಟಕ ಸರ್ಕಾರ ಪ್ರಕಟಿಸಿರುವ ಎಂ.ಎಂ. ಕಲಬುರ್ಗಿ ಪ್ರಧಾನ ಸಂಪಾದಕತ್ವದ 'ವಚನ ಸಂಪುಟ'ಗಳಲ್ಲಿ ಬಸವಣ್ಣನವರೂ ಸೇರಿ 30 ಶರಣರು ತಮ್ಮ 142 ವಚನಗಳಲ್ಲಿ 221 ಬಾರಿ ವೀರಶೈವ ಪದಪ್ರಯೋಗ ಮಾಡಿರುವುದನ್ನು ಉಲ್ಲೇಖಿಸಲಾಗಿದೆ' ಎಂದು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಬಸವಣ್ಣನವರೇ ತಮ್ಮ ವಚನದಲ್ಲಿ ತಾವು ನಿಜ ವೀರಶೈವ ಎಂದು ಹೇಳಿಕೊಂಡಿದ್ದಾರೆ. ಈಗ ಕೇವಲ ಮೀಸಲಾತಿಗಾಗಿ ವೀರಶೈವ ಧರ್ಮದ ಸನಾತನ ಘನತೆಗೆ ಧಕ್ಕೆ ತರುವ ಕೆಲಸವನ್ನು ಯಾರೂ ಮಾಡಬಾರದು ಎಂದು ಉಜ್ಜಯಿನಿ, ಶ್ರೀಶೈಲ ಹಾಗೂ ಕಾಶಿ ಪೀಠದ ಶ್ರೀಗಳು ಸಲಹೆ ನೀಡಿದ್ದಾರೆ.

'ಕನ್ನಡ ಭೂಮಿ ಸಂಶೋಧನೆಯ ಕನ್ನೆ ನೆಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಕನ್ನಡ ಸಾರಸ್ವತ ಭೂಮಿಯು ಬಂಜೆಯಲ್ಲ. ಅದು ಕಣ್ಣು ಹಾಯಿಸಿದಷ್ಟೂ ಸಂಶೋಧನೆಯ ಸಾಧ್ಯತೆಗಳತ್ತ ದಾರಿ ತೋರುವ ಕನ್ನೆ ನೆಲವಾಗಿದೆ' ಎಂದು ಸಂಶೋಧಕ ಪ್ರೊ. ಹಂಪ ನಾಗರಾಜಯ್ಯ ಅಭಿಪ್ರಾಯಪಟ್ಟರು.

ಕ್ರಿಸ್ತು ಜಯಂತಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ಸಂಶೋಧನೆಯ ಹೊಸ ಸಾಧ್ಯತೆಗಳು' ಕುರಿತ ರಾಷ್ಟ್ರಮಟ್ಟದ 'ಸಂಶೋಧನಾ ಕಾರ್ಯಾಗಾರ'ವನ್ನು ವರ್ಚ್ಯುಯಲ್ ಆಗಿ ಉದ್ಘಾಟಿಸಿ ಅವರು ಮಾತನಾಡಿದರು.

'ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಇಂದು ದೊಡ್ಡ ವಿದ್ವಾಂಸರ ಬರಗಾಲ ಬಂದಿದೆ ಎಂದುಕೊಳ್ಳಬಾರದು. ಇಂದಿನ ಯುವ ಸಮುದಾಯವು ಸೃಜನಶೀಲ ಕ್ಷೇತ್ರದಲ್ಲಿ ಮಾಡುವಷ್ಟು ಕೆಲಸವನ್ನು ಸಂಶೋಧನಾ ಕ್ಷೇತ್ರದಲ್ಲೂ ಮಾಡಲು ಸಾಧ್ಯವಿದೆ. ಈಗಿನ ಹೊಸ ತಲೆಮಾರಿನ ಸಂಶೋಧಕರೇ ದೊಡ್ಡ ವಿದ್ವಾಂಸರಾಗಿ ರೂಪುಗೊಳ್ಳಬೇಕು' ಎಂದರು.

ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಜೋಶಿ ಮ್ಯಾಥ್ಯೂ ಮಾತನಾಡಿ, 'ಸಂಶೋಧನೆ ಎಂಬುದು ನಿರಂತರ ಹುಡುಕಾಟದ ಮೂಲಕ ಮೂಡುವ ಲೋಕದ ಬೆಳಗು' ಎಂದರು.

ಒಂದು ವರ್ಷದಲ್ಲಿ 50 ಸಾವಿರಕ್ಕೂ ಅಧಿಕ ಮಂದಿ ಪ್ರಯಾಣ • ₹2.55 ಕೋಟಿ ವರಮಾನ

'ಈಶ' ಪ್ಯಾಕೇಜ್‌ಗೆ ವರ್ಷ: ಬಿಎಂಟಿಸಿಗೆ ಹರ್ಷ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಈಶ ಫೌಂಡೇಶನ್ ಪ್ರವಾಸಿ ಪ್ಯಾಕೇಜ್‌ಗೆ ವರ್ಷ ತುಂಬಿದ್ದು, ಬಿಎಂಟಿಸಿ ₹2.55 ಕೋಟಿ ವರಮಾನ ಗಳಿಸಿದೆ.

ಚಿಕ್ಕಬಳ್ಳಾಪುರ ಮತ್ತು ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚಿರುವುದನ್ನು ಕಂಡು ಬಿಎಂಟಿಸಿ 2024ರ ಮಾರ್ಚ್ 8ರಂದು 'ಈಶ ಫೌಂಡೇಶನ್' ಹೆಸರಿನಡಿ ಪ್ರವಾಸಿ ಪ್ಯಾಕೇಜ್ ಆರಂಭಿಸಿತ್ತು. ರಜಾದಿನಗಳು ಮತ್ತು ವಾರಾಂತ್ಯದ ದಿನಗಳಲ್ಲಿ ಹವಾನಿಯಂತ್ರಿತ ಬಸ್‌ಗಳಲ್ಲಿ ಪ್ರವಾಸಿಗರನ್ನು ಕರೆದೊಯ್ಯುವ ಯೋಜನೆ ಇದು.

ಬೆಳಿಗ್ಗೆ 11ರಿಂದ 12ರ ಒಳಗೆ ಬಸ್‌ಗಳು ಮೆಜೆಸ್ಟಿಕ್‌ನಿಂದ ಹೊರಡುತ್ತವೆ. ಭೋಗ ನಂದೀಶ್ವರ ದೇವಸ್ಥಾನ, ಕಣಿವೆ ಬಸವಣ್ಣ ದೇವಸ್ಥಾನ, ಸರ್.ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ಮತ್ತು ಸಮಾಧಿ, ರಂಗಸ್ಥಳ ರಂಗನಾಥ ಸ್ವಾಮಿ ದೇವಸ್ಥಾನ ಮತ್ತು ಈಶ ಫೌಂಡೇಷನ್‌ಗೆ ಭೇಟಿ ನೀಡಿ ರಾತ್ರಿ 9.30ಕ್ಕೆ ಮೆಜೆಸ್ಟಿಕ್‌ಗೆ ವಾಪಸ್ ಆಗುತ್ತವೆ.

ಒಂದು ವರ್ಷದಲ್ಲಿ 1271 ಟ್ರಿಪ್‌ಗಳಾಗಿದ್ದು, 50 ಸಾವಿರಕ್ಕೂ ಅಧಿಕ ಪ್ರವಾಸಿಗರು ಈ ಪ್ಯಾಕೇಜ್‌ನಲ್ಲಿ ಓಡಾಡಿದ್ದಾರೆ. ಮಾರ್ಚ್‌ನಲ್ಲಿ 49 ಟ್ರಿಪ್‌ಗಳಾಗಿದ್ದರೆ, ಜೂನ್‌ನಲ್ಲಿ ಅತಿ ಹೆಚ್ಚು 176 ಟ್ರಿಪ್‌ಗಳಾಗಿದ್ದು, 29,515 ಜನರು ಪ್ರಯಾಣಿಸಿದ್ದರು.

'ಈಶ ಫೌಂಡೇಶನ್ ಪ್ರವಾಸ ಪ್ಯಾಕೇಜ್ ಚೆನ್ನಾಗಿದೆ.


ಈಶ ಫೌಂಡೇಶನ್ ಪ್ಯಾಕೇಜ್‌ನಲ್ಲಿ ಸಂಚರಿಸುತ್ತಿರುವ ಬಿಎಂಟಿಸಿ ಬಸ್

ಆದರೆ, ಶಿವರಾತ್ರಿ ಅಥವಾ ಬೇರೆ ಹಬ್ಬಗಳ ಸಮಯದಲ್ಲಿ ವಿಪರೀತ ಜನಸಂದಣಿ ಇರುತ್ತದೆ. ಪ್ರವಾಸವನ್ನು ಆನಂದಿಸಲು ಹೋಗುವುದಿದ್ದರೆ ಹಬ್ಬದ ದಿನಗಳನ್ನು ಬಿಟ್ಟು ಬೇರೆ ದಿನಗಳಲ್ಲಿ ಹೋಗುವುದು ಉತ್ತಮ' ಎಂದು ಪ್ರವಾಸಿಗರಾದ ಪ್ರಶಾಂತ್ ಸಲಹೆ ನೀಡಿದರು.

'ನಾನು ಕಳೆದ ವರ್ಷ ಶಿವರಾತ್ರಿ ಸಮಯದಲ್ಲಿ ಹೋಗಿದ್ದಾಗ, ರಾತ್ರಿ 9.30ಕ್ಕೆ ಮೆಜೆಸ್ಟಿಕ್‌ಗೆ ವಾಪಸ್ಸಾಗಬೇಕಿದ್ದ ಬಸ್ ವಾಹನ ದಟ್ಟಣೆಯಿಂದಾಗಿ ಮರುದಿನ ಮುಂಜಾನೆ 5ಕ್ಕೆ ತಲುಪಿತ್ತು. ಪ್ರವಾಸದ ಖುಷಿ ಸಿಕ್ಕಿರಲಿಲ್ಲ. ಹಬ್ಬವಲ್ಲದ ದಿನದಲ್ಲಿ ಒಮ್ಮೆ ಹೋಗಿದ್ದೆ. ಅದರ ಖುಷಿಯೇ ಬೇರೆ' ಎಂದರು.

'ಈ ಪ್ಯಾಕೇಜ್‌ನಲ್ಲಿ ತಿಂಗಳಿಗೆ ಗರಿಷ್ಠ 20 ಸಾವಿರದಷ್ಟು ಜನರು ಪ್ರಯಾಣಿಸುತ್ತಿದ್ದಾರೆ. ಹಬ್ಬಗಳಿರುವ ತಿಂಗಳಲ್ಲಿ ಪ್ರಯಾಣಿಕರ ಸಂಖ್ಯೆ ಸಹಜವಾಗಿ ಅಧಿಕ. ವಿವರಗಳಿಗೆ ಬಿಎಂಟಿಸಿಯ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಪ್ರಯಾಣ ದರ ₹550 ಆಗಿದ್ದು, www.ksrtc.in ಮೂಲಕ ಟಿಕೆಟ್ ಬುಕ್ ಮಾಡಬಹುದು. ಕೆಂಪೇಗೌಡ ಬಸ್ ನಿಲ್ದಾಣದಲ್ಲಿಯೂ ಟಿಕೆಟ್ ಪಡೆಯಬಹುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ಬೆಂಗಳೂರು ದರ್ಶಿನಿ'ಗೆ ಬೇಕಿದೆ ಪ್ರಚಾರ

ನಗರದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗುವ ಬಿಎಂಟಿಸಿಯ ಯೋಜನೆ 'ಬೆಂಗಳೂರು ದರ್ಶಿನಿ' ಅಷ್ಟಾಗಿ ಪ್ರಚಾರಗೊಳ್ಳದೇ ಇರುವುದರಿಂದ ಪ್ರವಾಸಿಗರ ಸಂಖ್ಯೆ ಕಡಿಮೆ ಇದೆ. ಯೋಜನೆಗೆ ಪ್ರಚಾರ ನೀಡಿ ಪ್ರವಾಸಿಗರನ್ನು ಸೆಳೆಯಲಾಗುವುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಂಟಿಸಿ 2015ರಲ್ಲಿ ಈ ಯೋಜನೆಯನ್ನು ಆರಂಭಿಸಿತ್ತು. ಕೆಂಪೇಗೌಡ ಬಸ್ ನಿಲ್ದಾಣದಿಂದ ಬೆಳಿಗ್ಗೆ ಹೊರಟು ಸಂಜೆ ವಾಪಸ್ ಆಗುವ ಈ ಯೋಜನೆಗೆ ಜನರಿಂದ ಉತ್ತಮ ಸ್ಪಂದನ ದೊರಕಿತ್ತು. ಕೋವಿಡ್ ಕಾರಣದಿಂದ ಒಂದೂವರೆ ವರ್ಷ ಬೆಂಗಳೂರು ದರ್ಶಿನಿ ಸ್ಥಗಿತವಾಗಿತ್ತು. ಆನಂತರ ಆರಂಭಗೊಂಡರೂ ಅಷ್ಟಾಗಿ ಪ್ರಚಾರವಾಗಿಲ್ಲ. ದರ್ಶಿನಿಯಲ್ಲಿ ಪ್ರಯಾಣಿಸುವವರ ಸಂಖ್ಯೆ ಸಾವಿರದ ಗಡಿಯಲ್ಲೇ ಇದೆ.

ಈಶ ಫೌಂಡೇಶನ್ ಪ್ಯಾಕೇಜ್‌ನಲ್ಲಿ ಜನ ಇಷ್ಟಪಟ್ಟು ಪ್ರವಾಸ ಮಾಡುತ್ತಿದ್ದಾರೆ. ಬೆಂಗಳೂರು ದರ್ಶಿನಿಯನ್ನೂ ಜನರ ಇಷ್ಟದ ಪ್ರವಾಸಿ ಪ್ಯಾಕೇಜ್ ಆಗಿ ಪರಿವರ್ತಿಸಲಾಗುವುದು

ಜಿ.ಟಿ. ಪ್ರಭಾಕರ ರೆಡ್ಡಿ
ಮುಖ್ಯ ಸಂಚಾರ ವ್ಯವಸ್ಥಾಪಕ, ಬಿಎಂಟಿಸಿ

ಕೆಎಸ್‌ಆರ್‌ಟಿಸಿ ವತಿಯಿಂದ ಮೈಸೂರಿನಲ್ಲಿ ನಡೆಯುತ್ತಿರುವ ದರ್ಶಿನಿ ಟ್ರಿಪ್‌ಗಳಿಗೆ ಉತ್ತಮ ಸ್ಪಂದನ ಇದೆ. ಮೈಸೂರು ಐತಿಹಾಸಿಕ ಜಿಲ್ಲೆ. ಬೆಂಗಳೂರು ಪಕ್ಕಾ ವ್ಯಾವಹಾರಿಕ ಕೇಂದ್ರ. ಹಾಗಾಗಿ ಮೈಸೂರಿನಲ್ಲಿ ದರ್ಶಿನಿ ಟ್ರಿಪ್‌ನಲ್ಲಿ ಪ್ರಯಾಣಿಸುವ ಪ್ರವಾಸಿಗರಷ್ಟು ಇಲ್ಲಿ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಆದರೆ, ಪ್ರಚಾರದ ಮೂಲಕ ಈಗಿರುವುದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚಿಸಲು ಸಾಧ್ಯವಿದೆ' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.



ವಿಜಯ ಮ್ಯೂಸಿಕ್ ಸ್ಕೂಲ್ ಭಾನುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ 26ನೇ ವರ್ಷದ ಸಪ್ತಸ್ವರ ಸಂಗೀತೋತ್ಸವ ಕಾರ್ಯಕ್ರಮವನ್ನು ಎಂ.ಆರ್. ಗ್ರೂಪ್ಸ್‌ನ ಅಧ್ಯಕ್ಷ ಮಹಾಲಿಂಗೇಗೌಡ, ಸಂಗೀತ ನಿರ್ದೇಶಕರಾದ ಪ್ರಸನ್ನ, ಹರೀಶ್, ಮಹದೇವಪುರ ಬಿಬಿಎಂಪಿ ವಲಯದ ಆಯುಕ್ತ ಕೆ.ಎನ್.ರಮೇಶ್, ಜಿಗಣಿ ರಾಜಶೇಖರ್, ವಿಜಯ ಮ್ಯೂಸಿಕ್ ಸ್ಕೂಲ್‌ನ ಅಧ್ಯಕ್ಷೆ ಜಯಲಕ್ಷ್ಮಿ ನಾಗೇಂದ್ರ ಅವರು ಉದ್ಘಾಟಿಸಿದರು

ಬನ್ನೇರುಘಟ್ಟದಲ್ಲಿ ಕರಡಿ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕರಡಿಯೊಂದು ಶನಿವಾರ ರಾತ್ರಿ ಮೃತಪಟ್ಟಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಫೆ.28ರಂದು ತುಮಕೂರು ಅರಣ್ಯ ವ್ಯಾಪ್ತಿಯ ಮೈದಾಳು ಬಳಿ ಉರುಳಿಗೆ ಸಿಲುಕಿದ್ದ ಎರಡು ವರ್ಷದ ಕರಡಿಯನ್ನು ಇಲ್ಲಿಗೆ ಸ್ಥಳಾಂತರಿಸಲಾಗಿತ್ತು. ಅಂದಿನಿಂದ ಕರಡಿಗೆ ಜೈವಿಕ ಉದ್ಯಾನದ ವೈದ್ಯರು ಚಿಕಿತ್ಸೆ ನೀಡುತ್ತಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಕರಡಿ ಮೃತಪಟ್ಟಿದೆ.

'ಹೊರೆ ಇಳಿಸಿದ ಸಹಕಾರಿ ಬ್ಯಾಂಕ್'

ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ರವಿಕುಮಾರ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಕಾರಿ ಬ್ಯಾಂಕ್ ಮತ್ತು ಸಹಕಾರಿ ಸಂಘಗಳು ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಸರ್ಕಾರದ ಮೇಲಿನ ಆರ್ಥಿಕ ಹೊರೆ ಇಳಿಸಿವೆ' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅಭಿಮತ ವ್ಯಕ್ತಪಡಿಸಿದರು.

ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಜ್ರ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಸಹಕಾರಿ ಬ್ಯಾಂಕ್ ಮತ್ತು ಸಹಕಾರಿ ಸಂಘಗಳು ಇರದಿದ್ದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮೇಲೆ ಆರ್ಥಿಕ ಹೊರೆ ಹೆಚ್ಚುತ್ತಿತ್ತು. ಜನರ ಜೀವನಮಟ್ಟ ಸುಧಾರಣೆಗೆ ಬ್ಯಾಂಕ್‌ಗಳು ನೆರವಾಗುತ್ತಿವೆ. ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಕೂಡ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಸಮಾರಂಭದಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು 'ತ್ಯಾಗರಾಜ ವಜ್ರಶ್ರೀ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಎನ್.ರವಿಕುಮಾರ್, ಸತೀಶ್ ಮರಾಠೆ, ಕೃಷ್ಣ ಡಿ. ಹಾಗೂ ಎಂ.ಆರ್. ವೆಂಕಟೇಶ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್, 'ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸರಿಸಮಾನವಾಗಿ ಕೆಲಸ ಮಾಡಲಾಗುತ್ತಿದೆ' ಎಂದರು.

ಸಹಕಾರಿ ಬ್ಯಾಂಕ್‌ಗಳು ಸಂಕಷ್ಟಕ್ಕೆ ಸಿಲುಕಿದಾಗ ಬಲಪಡಿಸಲು ಪ್ರತ್ಯೇಕ ಸಂಘ ಸ್ಥಾಪನೆ, ಠೇವಣಿ ವಿಮಾ ಮಿತಿ ₹10 ಲಕ್ಷಕ್ಕೆ ಏರಿಕೆ ಸೇರಿ ಸಹಕಾರಿ ಬ್ಯಾಂಕ್‌ಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದ ವೆಂಕಟೇಶ್, ಮನವಿಪತ್ರವನ್ನು ಆರ್‌ಬಿಐ ಕೇಂದ್ರ ಮಂಡಳಿಯ ನಿರ್ದೇಶಕ ಸತೀಶ್ ಮರಾಠೆ ಅವರಿಗೆ ಹಸ್ತಾಂತರಿಸಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

'ದೇವಸಂದ್ರ: ಕಸ ತೆರವುಗೊಳಿಸಿ'


ದೇವಸಂದ್ರದ ಖಾಲಿ ನಿವೇಶನದಲ್ಲಿರುವ ಕಸದ ರಾಶಿ

ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ದೇವಸಂದ್ರದ ಜೆ.ಸಿ. ಬಡಾವಣೆಯಲ್ಲಿ ನಿತ್ಯ ಕಸ ಸಂಗ್ರಹಿಸುವ ವಾಹನ ಬರುತ್ತದೆ. ಆದರೆ, ಸ್ಥಳೀಯ ನಿವಾಸಿಗಳು ಘನತ್ಯಾಜ್ಯ ಸಾಗಣೆ ವಾಹನಕ್ಕೆ ಕಸ ಹಾಕದೇ, ಖಾಲಿ ನಿವೇಶನವೊಂದರಲ್ಲಿ ಎಸೆಯುತ್ತಿದ್ದಾರೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಇಲ್ಲಿನ ಚರಂಡಿಯಲ್ಲಿ ಹೂಳು ತುಂಬಿ ತ್ಯಾಜ್ಯ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ಖಾಲಿ ನಿವೇಶನದಲ್ಲಿರುವ ಕಸದ ವಿಲೇವಾರಿಗೆ ಕೂಡಲೇ ಕ್ರಮ ಕೈಗೊಳ್ಳಬೇಕು.

ಕಿರಣ್ ಕುಮಾರ್, ಕೆ.ಆರ್. ಪುರ

'ಖಾಲಿ ನಿವೇಶನದಲ್ಲಿನ ಕಸ ವಿಲೇವಾರಿ ಮಾಡಿ'

ಜೆ.ಸಿ. ನಗರದ (ಮುನಿರೆಡ್ಡಿ ಪಾಳ್ಯ) ರಾಜಪ್ಪ ಬ್ಲಾಕ್‌ನ ಒಂದನೇ ಕ್ರಾಸ್‌ನಲ್ಲಿರುವ ಖಾಲಿ ನಿವೇಶನವೊಂದರಲ್ಲಿ ಕಸ, ಉಪಯೋಗಕ್ಕೆ ಬಾರದ ವಸ್ತುಗಳನ್ನು ಹಾಕಲಾಗಿದೆ. ಇದು ಇಲಿ, ಹೆಗ್ಗಣಗಳು ಹಾಗೂ ಹಾವುಗಳಿಗೆ ಆಶ್ರಯ ತಾಣವಾಗಿದೆ. ನಿವೇಶನದ ಮಾಲೀಕರು ಹಾಗೂ ಬಿಬಿಎಂಪಿಗೆ ದೂರು ನೀಡಿದರೂ ಇಲ್ಲಿರುವ ಕಸ ವಿಲೇವಾರಿ ಮಾಡುತ್ತಿಲ್ಲ.

ಅಶ್ವತ್ಥ ನಾರಾಯಣ, ಜೆ.ಸಿ. ನಗರ

'ನೀರಿನ ದರ ಹೆಚ್ಚಳ'

ಬೆಂಗಳೂರು ನಗರದ ಎಲ್ಲ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ₹5ಕ್ಕೆ 20 ಲೀಟರ್ ನೀರು ಬರುತ್ತದೆ. ಆದರೆ, ರಾಜಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 108ನೇ ವಾರ್ಡ್‌ಗೆ ಸೇರಿದ ಶ್ರೀರಾಮ ಮಂದಿರದ ಮುಂಭಾಗದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ಹಗಲು ದರೋಡೆ ಮಾಡಲಾಗುತ್ತಿದೆ. ಇಲ್ಲಿ 20 ಲೀಟರ್ ಶುದ್ಧ ಕುಡಿಯುವ ನೀರಿಗೆ ₹10 ದರ ನಿಗದಿಪಡಿಸಲಾಗಿದೆ. ಇದೇ ವಾರ್ಡ್‌ನ ನಾಲ್ಕನೇ ಬ್ಲಾಕ್‌ನ ಮಸೀದಿ ಪಕ್ಕದಲ್ಲಿರುವ ಮತ್ತೊಂದು ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ಇದೇ ಮೊತ್ತ ನಿಗದಿಪಡಿಸಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಆರ್. ದೇವರಾಜ್, ರಾಜಾಜಿನಗರ


ರಾಜಾಜಿನಗರದ ಶ್ರೀರಾಮ ಮಂದಿರದ ಮುಂಭಾಗದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ

ಭಾರತೀಯ ಸಶಸ್ತ್ರ ಪಡೆಗಳಲ್ಲಿ ಅಗ್ನಿವೀರ್ ಹುದ್ದೆಗೆ ಸೇರಿಕೊಳ್ಳಿ



ಆಯ್ಕೆ ಮಾನದಂಡಗಳು

ಶೈಕ್ಷಣಿಕ ವಿದ್ಯಾರ್ಹತೆ

ಸೇನೆ

ಅಗ್ನಿವೀರ್ (ಜನರಲ್ ಡ್ಯೂಟಿ) (ಎಲ್ಲಾ ಶಸ್ತ್ರಗಳು) ಮತ್ತು ಅಗ್ನಿವೀರ್ (ಜನರಲ್ ಡ್ಯೂಟಿ) (ಮಹಿಳಾ ಮಿಲಿಟರಿ ಪೊಲೀಸ್)– 10ನೇ ತರಗತಿ / ಮೆಟ್ರಿಕ್ ಉತ್ತೀರ್ಣರಾಗಿರಬೇಕು ಜೊತೆಗೆ ಪ್ರಾಥಮಿಕ ವಿಷಯಗಳಲ್ಲಿ ಸರಾಸರಿ 45% ಅಂಕಗಳನ್ನು ಮತ್ತು ಅವೆಲ್ಲ ಐದು ವಿಷಯಗಳಲ್ಲಿ ತಲಾ ಕನಿಷ್ಠ 33% ಅಂಕಗಳನ್ನು ಗಳಿಸಿರಬೇಕು. ಗ್ರೇಡಿಂಗ್ ಪದ್ಧತಿ ಅನುಸರಿಸುವ ಮಂಡಳಿಗಳು ನೀಡಿರುವ ಗ್ರೇಡ್‌ಗಳನ್ನು, ಮೇಲಿನಂತೆಗಿನ ಶೇಕಡವಾರುಗಳಿಗೆ ಅನುಗುಣವಾಗಿ ಪರಿಗಣಿಸಲಾಗುತ್ತದೆ.

ಸೂಚನೆ: ಲಘು ಮೋಟಾರು ವಾಹನ (ಎಲ್‌ಎಂವಿ) ಚಾಲನಾ ಪರವಾಣಿಗೆ ಹೊಂದಿರುವ ಅಭ್ಯರ್ಥಿಗಳಿಗೆ, ಚಾಲಕ ಹುದ್ದೆಯ ಅವಶ್ಯಕತೆಗಳಿಗೆ ಬೇಕಿರುವ ಆದ್ಯತೆ ನೀಡಲಾಗುತ್ತದೆ.

ಅಗ್ನಿವೀರ್ (ತಾಂತ್ರಿಕ) (ಎಲ್ಲಾ ಶಸ್ತ್ರಗಳು) – ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಇಂಗ್ಲಿಷ್ ವಿಷಯಗಳೊಂದಿಗಿನ ವಿಜ್ಞಾನ ವಿಭಾಗದಲ್ಲಿ 10+2 / ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಜೊತೆಗೆ ಸರಾಸರಿ 50% ಅಂಕಗಳನ್ನು ಮತ್ತು ಪ್ರತಿ ವಿಷಯದಲ್ಲಿ 40% ಅಂಕಗಳನ್ನು ಗಳಿಸಿರಬೇಕು.

ಅಥವಾ

ಎನ್‌ಎಸ್‌ಕ್ಯುಎಫ್ ಲೆವೆಲ್ 4 ಅಥವಾ ಮೇಲ್ಪಟ್ಟ ಅಗತ್ಯ ಕ್ಷೇತ್ರಗಳಲ್ಲಿ ಕನಿಷ್ಠ ಒಂದು ವರ್ಷದ ಎನ್‌ಐಒಎಸ್ ಮತ್ತು ಐಟಿಐ ಕೋರ್ಸ್ ಸೇರ್ಪಡೆಗಾಗಿ, ಯಾವುದೇ ಅಂಗೀಕೃತ ರಾಜ್ಯ ಶಿಕ್ಷಣ ಮಂಡಳಿ ಅಥವಾ ಕೇಂದ್ರ ಶಿಕ್ಷಣ ಮಂಡಳಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಇಂಗ್ಲಿಷ್ ವಿಷಯಗಳೊಂದಿಗಿನ ವಿಜ್ಞಾನ ವಿಭಾಗದಲ್ಲಿ 10+2 / ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಅಥವಾ

10ನೇ ತರಗತಿ / ಮೆಟ್ರಿಕ್ ಉತ್ತೀರ್ಣರಾಗಿರಬೇಕು ಜೊತೆಗೆ ಸರಾಸರಿ 50% ಅಂಕಗಳನ್ನು ಮತ್ತು ಇಂಗ್ಲಿಷ್, ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಕನಿಷ್ಠ 40% ಅಂಕಗಳನ್ನು ಪಡೆದಿರಬೇಕು ಜೊತೆಗೆ ಐಟಿಐ'ನಿಂದ 02 ವರ್ಷಗಳ ತಾಂತ್ರಿಕ ತರಬೇತಿ ಪಡೆದಿರಬೇಕು ಅಥವಾ ಭಾರತೀಯ ಸೇನಾ ನೇಮಕಾತಿ ಅಧಿಸೂಚನೆಯಲ್ಲಿ ಘೋಷಿಸಿರುವಂತಹ ನಿಗದಿತ ವಿಭಾಗಗಳಲ್ಲಿ (ಮೆಕ್ಯಾನಿಕ್ ಮೋಟಾರ್ ವೆಹಿಕಲ್, ಮೆಕ್ಯಾನಿಕ್ ಡೀಸೆಲ್, ಎಲೆಕ್ಟ್ರಾನಿಕ್ ಮೆಕ್ಯಾನಿಕ್, ಟೆಕ್ನಿಷಿಯನ್ ಪವರ್ ಎಲೆಕ್ಟ್ರಾನಿಕ್ ಸಿಸ್ಟಮ್, ಎಲೆಕ್ಟ್ರಿಷಿಯನ್, ಫಿಟ್ಟರ್, ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್, ಡ್ರಾಫ್ಟ್ಸ್‌ಮನ್ (ಎಲ್ಲಾ ವಿಧಗಳು), ಸರ್ವೇಯರ್, ಜಿಯೊ ಇನ್ಫಾರ್ಮಾಟಿಕ್ಸ್ ಅಸಿಸ್ಟಂಟ್, ಇನ್ಫಾರ್ಮೇಶನ್ ಅಂಡ್ ಕಮ್ಯುನಿಕೇಶನ್ ಟೆಕ್ನಾಲಜಿ ಸಿಸ್ಟಮ್ ಮೇಂಟೆನೆನ್ಸ್, ಇನ್ಫಾರ್ಮೇಶನ್ ಟೆಕ್ನಾಲಜಿ, ಮೆಕ್ಯಾನಿಕ್ ಕಂ ಆಪರೇಟರ್ ಎಲೆಕ್ಟ್ರಿಕ್ ಕಮ್ಯುನಿಕೇಶನ್ ಸಿಸ್ಟಮ್, ವೆಸ್ಸೆಲ್ ನ್ಯಾವಿಗೇಟರ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಆಟೋಮೊಬೈಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್/ ಕಂಪ್ಯೂಟರ್ ಇಂಜಿನಿಯರಿಂಗ್, ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ) ಪಾಲಿಟೆಕ್ನಿಗಳೂ ಸೇರಿದಂತೆ ಅಂಗೀಕೃತ ಶೈಕ್ಷಣಿಕ ಸಂಸ್ಥೆಗಳಲ್ಲಿ ಎರಡು/ ಮೂರು ವರ್ಷಗಳ ಡಿಪ್ಲೋಮ ಪೂರೈಸಿರಬೇಕು.

ಅಗ್ನಿವೀರ್ (ಕ್ಲರ್ಕ್/ಸ್ಟೋರ್ ಕೀಪರ್ ಟೆಕ್ನಿಕಲ್) – ಯಾವುದೇ ವಿಭಾಗದಲ್ಲಿ (ಕಲಾ, ವಾಣಿಜ್ಯ, ವಿಜ್ಞಾನ) 10+2 / ಇಂಟರ್‌ಮೀಡಿಯೇಟ್ ಪರೀಕ್ಷೆ ಉತ್ತೀರ್ಣರಾಗಿರಬೇಕು ಜೊತೆಗೆ ಸರಾಸರಿ 60% ಅಂಕಗಳನ್ನು ಮತ್ತು ಪ್ರತಿ ವಿಷಯದಲ್ಲಿ ಕನಿಷ್ಠ 50% ಅಂಕಗಳನ್ನು ಗಳಿಸಿರಬೇಕು. ಕಡ್ಡಾಯವಾಗಿ 12ನೇ ತರಗತಿಯಲ್ಲಿನ ಇಂಗ್ಲಿಷ್ ಮತ್ತು ಗಣಿತ/ ಅಕೌಂಟ್ಸ್/ ಬುಕ್ ಕೀಪಿಂಗ್ ವಿಷಯಗಳಲ್ಲಿ 50% ಅಂಕಗಳನ್ನು ಗಳಿಸಿರಬೇಕು.

ಅಗ್ನಿವೀರ್ ಟ್ರೇಡ್ಸ್‌ಮನ್ 10ನೇ ತರಗತಿ ಉತ್ತೀರ್ಣ – ಸರಳವಾಗಿ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು (ಸರಾಸರಿ ಶೇಕಡವಾರು ನಿಬಂಧನೆ ಇರುವುದಿಲ್ಲ, ಆದರೆ ಐದು ಪ್ರಾಥಮಿಕ ವಿಷಯಗಳಲ್ಲಿ 33% ಅಂಕಗಳನ್ನು ಗಳಿಸಿರುವುದು ಕಡ್ಡಾಯ).

ಅಗ್ನಿವೀರ್ ಟ್ರೇಡ್ಸ್‌ಮನ್ 8ನೇ ತರಗತಿ ಉತ್ತೀರ್ಣ – ಸರಳವಾಗಿ 8ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು (ಸರಾಸರಿ ಶೇಕಡವಾರು ನಿಬಂಧನೆ ಇರುವುದಿಲ್ಲ, ಆದರೆ ಐದು ಪ್ರಾಥಮಿಕ ವಿಷಯಗಳಲ್ಲಿ 33% ಅಂಕಗಳನ್ನು ಗಳಿಸಿರುವುದು ಕಡ್ಡಾಯ).

ನೌಕಾಪಡೆ

ಅಗ್ನಿವೀರ್ (ಸೀನಿಯರ್ ಸೆಕೆಂಡರಿ ರಿಕ್ರ್ಯೂಟ್) – ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಿಂದ ಮಾನ್ಯತೆ ಪಡೆದಿರುವ ಶಾಲಾ ಶಿಕ್ಷಣ ಮಂಡಳಿಗಳಲ್ಲಿ ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರ ವಿಷಯಗಳೊಂದಿಗಿನ 10+2 ಪರೀಕ್ಷೆಯಲ್ಲಿ ಕನಿಷ್ಠ 50% ಸರಾಸರಿ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅಥವಾ

ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿ ಪ್ರದೇಶಗಳಿಂದ ಮಾನ್ಯತೆ ಪಡೆದಿರುವ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಮೂರು ವರ್ಷಗಳ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸ್‌ನಲ್ಲಿ (ಮೆಕ್ಯಾನಿಲ್, ಎಲೆಕ್ಟ್ರಿಕಲ್, ಆಟೋಮೊಬೈಲ್ಸ್, ಕಂಪ್ಯೂಟರ್ ಸೈನ್ಸ್, ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ, ಇನ್ಫಾರ್ಮೇಶನ್ ಟೆಕ್ನಾಲಜಿ) ಸರಾಸರಿ 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅಥವಾ

ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿ ಪ್ರದೇಶಗಳಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಮಂಡಳಿಗಳಲ್ಲಿನ, ನಾನ್–ವೊಕೇಶನಲ್ ವಿಷಯಗಳಾದ ಭೌತಶಾಸ್ತ್ರ ಮತ್ತು ಗಣಿಶಾಸ್ತ್ರ ವಿಷಯಗಳೊಂದಿಗಿನ ಎರಡು ವರ್ಷಗಳ ವೊಕೇಶನಲ್ ಕೋರ್ಸ್‌ನಲ್ಲಿ ಸರಾಸರಿ 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅಗ್ನಿವೀರ್ (ಮ್ಯಾಟ್ರಿಕ್ ರಿಕ್ರ್ಯೂಟ್) – ಯಾವುದೇ ಸರ್ಕಾರಿ ಮಾನ್ಯತೆ ಪಡೆದಿರುವ ಶಾಲೆ ಅಥವಾ ಮಂಡಳಿಯ ಮೆಟ್ರಿಕ್ಯುಲೇಶನ್ / 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಉತ್ತೀರ್ಣ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅಗ್ನಿವೀರ್ (ಮ್ಯಾಟ್ರಿಕ್ ರಿಕ್ರ್ಯೂಟ್ ಮ್ಯೂಜಿಷಿಯನ್) – ಯಾವುದೇ ಸರ್ಕಾರಿ ಮಾನ್ಯತೆ ಪಡೆದಿರುವ ಶಾಲೆ ಅಥವಾ ಮಂಡಳಿಯ ಮೆಟ್ರಿಕ್ಯುಲೇಶನ್ / 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಉತ್ತೀರ್ಣ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ವಾಯುಪಡೆ

ವಿಜ್ಞಾನ ವಿಷಯಗಳು –ಅಭ್ಯರ್ಥಿಗಳು ಕಡ್ಡಾಯವಾಗಿ ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಾನ್ಯತೆ ಪಡೆದಿರುವ ಶಿಕ್ಷಣ ಮಂಡಳಿಯಲ್ಲಿ ಗಣಿತಶಾಸ್ತ್ರ, ಭೌತಶಾಸ್ತ್ರ ಮತ್ತು ಇಂಗ್ಲಿಷ್ ವಿಷಯಗಳೊಂದಿಗಿನ ಇಂಟರ್‌ಮೀಡಿಯೇಟ್ / 10+2 / ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ 50% ಸರಾಸರಿ ಅಂಕಗಳೊಂದಿಗೆ ಮತ್ತು ಇಂಗ್ಲಿಷ್‌ನಲ್ಲಿ 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅಥವಾ

ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಾನ್ಯತೆ ಪಡೆದಿರುವ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಮೂರು ವರ್ಷಗಳ ಇಂಜಿನಿಯರಿಂಗ ಡಿಪ್ಲೋಮಾ ಕೋರ್ಸ್‌ನಲ್ಲಿ (ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಆಟೋಮೊಬೈಲ್, ಕಂಪ್ಯೂಟರ್ ಸೈನ್ಸ್, ಇನ್‌ಸ್ಟ್ರುಮೆಂಟಲ್ ಟೆಕ್ನಾಲಜಿ, ಇನ್ಫಾರ್ಮೇಶನ್ ಟೆಕ್ನಾಲಜಿ) ಕನಿಷ್ಠ 50% ಸರಾಸರಿ ಅಂಕಗಳೊಂದಿಗೆ ಮತ್ತು ಡಿಪ್ಲೋಮಾ ಕೋರ್ಸ್‌ನಲ್ಲಿ (ಡಿಪ್ಲೋಮಾ ಕೋರ್ಸ್‌ನಲ್ಲಿ ಇಂಗ್ಲಿಷ್ ಒಂದು ವಿಷಯವಾಗಿ ಇಲ್ಲದಿದ್ದ ಸಂದರ್ಭದಲ್ಲಿ, ಇಂಟರ್‌ಮೀಡಿಯೇಟ್ ಅಥವಾ ಮೆಟ್ರಿಕ್ಯುಲೇಶನ್‌ನಲ್ಲಿ), ಇಂಗ್ಲಿಷ್‌ನಲ್ಲಿ 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅಥವಾ

ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿ ಪ್ರದೇಶಗಳಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಮಂಡಳಿಗಳಲ್ಲಿನ, ನಾನ್–ವೊಕೇಶನಲ್ ವಿಷಯಗಳಾದ ಭೌತಶಾಸ್ತ್ರ ಮತ್ತು ಗಣಿಶಾಸ್ತ್ರ ವಿಷಯಗಳೊಂದಿಗಿನ ಎರಡು ವರ್ಷಗಳ ವೊಕೇಶನಲ್ ಕೋರ್ಸ್‌ನಲ್ಲಿ ಸರಾಸರಿ 50% ಅಂಕಗಳೊಂದಿಗೆ ಮತ್ತು ಇಂಗ್ಲಿಷ್‌ನಲ್ಲಿ 50% ಅಂಕಗಳೊಂದಿಗೆ (ಅಥವಾ ವೊಕೇಶನಲ್ ಕೋರ್ಸ್‌ನಲ್ಲಿ ಇಂಗ್ಲಿಷ್ ಒಂದು ವಿಷಯವಾಗ ಇಲ್ಲದಿದ್ದ ಸಂದರ್ಭದಲ್ಲಿ, ಇಂಟರ್‌ಮೀಡಿಯೇಟ್ ಅಥವಾ ಮೆಟ್ರಿಕ್ಯುಲೇಶನ್‌ನಲ್ಲಿ) ಉತ್ತೀರ್ಣರಾಗಿರಬೇಕು.

ವಿಜ್ಞಾನೇತರ ವಿಷಯಗಳು – ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿ ಪ್ರದೇಶಗಳಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಮಂಡಳಿಗಳಲ್ಲಿನ ಯಾವುದೇ ವಿಭಾಗಗಳಲ್ಲಿ / ವಿಷಯಗಳಲ್ಲಿ ಇಂಟರ್‌ಮೀಡಿಯೇಟ್ / 10+2 / ತತ್ಸಮಾನ ಪರೀಕ್ಷೆಯಲ್ಲಿ ಸರಾಸರಿ 50% ಅಂಕಗಳೊಂದಿಗೆ ಮತ್ತು ಇಂಗ್ಲಿಷ್‌ನಲ್ಲಿ 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅಥವಾ

ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿ ಪ್ರದೇಶಗಳಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಮಂಡಳಿಗಳಲ್ಲಿನ ಎರಡು ವರ್ಷಗಳ ವೊಕೇಶನಲ್ ಕೋರ್ಸ್‌ನಲ್ಲಿ ಕನಿಷ್ಠ 50% ಸರಾಸರಿ ಅಂಕಗಳೊಂದಿಗೆ ಮತ್ತು ವೊಕೇಶನಲ್ ಕೋರ್ಸ್‌ನಲ್ಲಿ ಇಂಗ್ಲಿಷ್‌ನಲ್ಲಿ 50% ಅಂಕಗಳೊಂದಿಗೆ (ಅಥವಾ ವೊಕೇಶನಲ್ ಕೋರ್ಸ್‌ನಲ್ಲಿ ಇಂಗ್ಲಿಷ್ ಒಂದು ವಿಷಯವಾಗಿ ಇಲ್ಲದಿದ್ದ ಸಂದರ್ಭದಲ್ಲಿ, ಇಂಟರ್‌ಮೀಡಿಯೇಟ್ ಅಥವಾ ಮೆಟ್ರಿಕ್ಯುಲೇಶನ್‌ನಲ್ಲಿ) ಉತ್ತೀರ್ಣರಾಗಿರಬೇಕು.

ಸೂಚನೆ–1. ವಿಜ್ಞಾನ ವಿಷಯಗಳ ಪರೀಕ್ಷೆಗೆ ಅರ್ಹವಾಗುವ ಅಭ್ಯರ್ಥಿಗಳು (ಇಂಟರ್‌ಮೀಡಿಯೇಟ್, 10+2, ಮೂರು ವರ್ಷಗಳ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸ್ ಅಥವಾ ನಾನ್ ವೊಕೇಶನಲ್ ವಿಷಯಗಳಾದ ಭೌತಶಾಸ್ತ್ರ ಮತ್ತು ಗಣಿತದಂತಹ ವಿಷಯಗಳೊಂದಿಗಿನ ಎರಡು ವರ್ಷಗಳ ವೊಕೇಶನಲ್ ಕೋರ್ಸ್ ಸೇರಿದಂತೆ) ವಿಜ್ಞಾನೇತರ ವಿಷಯಗಳಿಗೆ ಕೂಡ ಅರ್ಹರಾಗಿರುತ್ತಾರೆ ಮತ್ತು ಇಂತಹವರಿಗೆ ಆನ್‌ಲೈನ್ ನೋಂದಣಿ ನಮೂನೆ ಭರ್ತಿ ಮಾಡುವ ಸಮಯದಲ್ಲಿಯೇ, ವಿಜ್ಞಾನ ವಿಷಯಗಳು ಮತ್ತು ವಿಜ್ಞಾನೇತರ ವಿಷಯಗಳು, ಎರಡರಲ್ಲೂ ಹಾಜರಾಗುವ ಆಯ್ಕೆಯನ್ನು ನೀಡಲಾಗುತ್ತದೆ.

ಸೂಚನೆ–2. ನೋಂದಣಿ ದಿನಾಂಕದವರೆಗೆ ಮಾತ್ರ, ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಮಂಡಳಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

ಸೂಚನೆ–3. 10+2, ಇಂಟರ್‌ಮೀಡಿಯೇಟ್, ತತ್ಸಮಾನ ಪರೀಕ್ಷೆ, ಮೂರು ವರ್ಷಗಳ ಡಿಪ್ಲೋಮಾ ಕೋರ್ಸ್, ಎರಡು ವರ್ಷಗಳ ವೊಕೇಶನಲ್ ಕೋರ್ಸ್‌ನ ಅಂಕಪಟ್ಟಿಯಲ್ಲಿ ನಮೂದಾಗಿರುವ ಶೇಕಡವಾರು ಅಂಕಗಳಲ್ಲಿನ, ದಶಮಾಂಶ ಬಿಂದುವಿಗೆ ಮುಂಚೆ ಇರುವ ದತ್ತಾಂಶವನ್ನು ಮಾತ್ರ ಅಥವಾ ಸಂಬಂಧಿತ ಶಿಕ್ಷಣ ಮಂಡಳಿಗಳ, ಪಾಲಿಟೆಕ್ನಿಕ್ ಸಂಸ್ಥೆಗಳ ನಿಯಮಗಳನ್ವಯದ ಲೆಕ್ಕಾಚಾರ ಮೇರೆಗಿನ ದತ್ತಾಂಶವನ್ನು ಮಾತ್ರ ನಿಖರವಾದ ಸರಾಸರಿ ಶೇಕಡವಾರು ಎಂದು ಪರಿಗಣಿಸಲಾಗುತ್ತದೆ. (ಉದಾಹರಣೆಗೆ 49.99% ದತ್ತಾಂಶವನ್ನು ನಿಖರವಾಗಿ 49% ಎಂದು ಪರಿಗಣಿಸಲಾಗುತ್ತದೆಯೆ ಹೊರತು, ಸಮಗ್ರವಾಗಿ 50% ಎಂದು ಪರಿಗಣಿಸಲಾಗುವುದಿಲ್ಲ)

ಅಗ್ನಿವೀರವಾಯು (ಮ್ಯೂಜಿಷಿಯನ್) – ಯಾವುದೇ ಸರ್ಕಾರಿ ಮಾನ್ಯತೆ ಪಡೆದಿರುವ ಶಾಲೆ ಅಂಥವಾ ಮಂಡಳಿಯ, ಮೆಟ್ರಿಕ್ಯುಲೇಶನ್ / 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಉತ್ತೀರ್ಣ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಲಿಂಗ

- **ಸೇನೆ:** ಪುರುಷ ಮತ್ತು ಮಹಿಳೆ (ಮಿಲಿಟರಿ ಪೊಲೀಸ್ ಹುದ್ದೆಗೆ ಮಾತ್ರ)
- **ನೌಕಾಪಡೆ:** ಪುರುಷ ಮತ್ತು ಮಹಿಳೆ
- **ವಾಯುಪಡೆ:** ಪುರುಷ ಮತ್ತು ಮಹಿಳೆ

ಎತ್ತರ

ಸೇನೆ

ಕ್ರ.ಸಂ.	ಪ್ರದೇಶಗಳು	ಕನಿಷ್ಠ ಎತ್ತರ (ಸೆಂ.ಮೀ.ಗಳಲ್ಲಿ)
1	ಮಹಿಳೆ (ಸಾಮಾನ್ಯ)	162
	ಘರವಾಲಿ, ಗೂರ್ಖಾ, ಲಡಾಕಿ, ಅಂಗೀಕೃತ ಬುಡಕಟ್ಟು ಪ್ರದೇಶಗಳ ಆದಿವಾಸಿಗಳು, ಈಶಾನ್ಯ ವಲಯ (ಸಿಕ್ಕಿಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಣಿಪುರ, ತ್ರಿಪುರ, ಮಿಜೋರಾಮ್, ಮೇಘಾಲಯ, ಅಸ್ಸಾಂ)	158
2	ಪುರುಷ **ಪಶ್ಚಿಮ ಹಿಮಾಲಯ** – ಜಮ್ಮು & ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬ್ ಪರ್ವತಗಳು (ಹಿಮಾಚಲ ಪ್ರದೇಶ ಮತ್ತು ಪಂಬಾಬ್ ನಡುವಿನ ಗಡಿ ಮತ್ತು ಅಂತರ್‌ರಾಜ್ಯ ದಕ್ಷಿಣ ಹಾಗೂ ಪಶ್ಚಿಮ ಪ್ರದೇಶಗಳು ಮತ್ತು ಮುಕೇರಿಯನ್ ಹೊಶಿಯಾರ್‌ಪುರ್, ಗಢ್ ಶಂಕರ್ ಮತ್ತು ರೊಪಾರ್, ಗಢ್ವಾಲ್ ಮತ್ತು ಕುಮಾವೊ (ಯುಕೆ) ರಸ್ತೆಯ ಉತ್ತರ ಮತ್ತು ಪೂರ್ವ ಪ್ರದೇಶಗಳು)	163
	ಪೂರ್ವ ಹಿಮಾಲಯ – ಸಿಕ್ಕಿಮ್, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಣಿಪುರ, ತ್ರಿಪುರ, ಮಿಜೋರಾಮ್, ಮೇಘಾಲಯ, ಅಸ್ಸಾಮ್ ಹಾಗೂ ಪಶ್ಚಿಮ ಬಂಗಾಳದ ಪರ್ವತ ಪ್ರದೇಶ (ಡಾರ್ಜಿಲಿಂಗ್ ಜಿಲ್ಲೆ)	160
	ಪಶ್ಚಿಮ ಬಯಲು ಪ್ರದೇಶಗಳು – ಪಂಜಾಬ್, ಹರ್ಯಾಣ, ಚಂಡೀಗಢ್, ದೆಹಲಿ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಪಶ್ಚಿಮ (ಮೀರಠ್ ಮತ್ತು ಆಗ್ರಾ ವಿಭಾಗ)	170
	ಪೂರ್ವ ಬಯಲು ಪ್ರದೇಶಗಳು – ಉತ್ತರ ಪ್ರದೇಶದ ಪೂರ್ವ, ಬಿಹಾರ್, ಪಶ್ಚಿಮ ಬಂಗಾಳ, ಜಾರ್ಖಂಡ್ ಮತ್ತು ಒಡಿಶಾ	169
	ಮಧ್ಯ ಬಯಲು ಪ್ರದೇಶಗಳು–ಮಧ್ಯ ಪ್ರದೇಶ, ಚತ್ತೀಸ್‌ಗಢ್, ಗುಜರಾತ್, ಮಹಾರಾಷ್ಟ್ರ, ದಾದರ್, ನಗರ್, ಹವೇಲಿ, ದಮನ್ & ಡಿಯು	168
	ದಕ್ಷಿಣ ಬಯಲು ಪ್ರದೇಶಗಳು – ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳನಾಡು, ಕೇರಳ, ಗೋವಾ ಮತ್ತು ಪುದುಚೆರಿ	166
	ಕ್ಲರ್ಕ್ / ಎಸ್‌ಕೆಟಿ	162

ಎತ್ತರದ ಮಾನದಂಡದಲ್ಲಿ ಸಡಿಲಿಕೆಯುಳ್ಳ ಪ್ರದೇಶಗಳು	ಪುರುಷರ ಕನಿಷ್ಠ ಎತ್ತರ (ಸೆಂ.ಮೀಗಳಲ್ಲಿ)
ಲಡಾಕಿ	157
ಗೂರ್ಖಾ (ನೇಪಾಳಿಗರು ಮತ್ತು ಭಾರತೀಯರು)	157
ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ಮಿನಿಕೊಯ್ ಸೇರಿದಂತೆ ಲಕ್ಷದ್ವೀಪ ಸಮೂಹ	
(i) ರಹವಾಸಿಗಳು	165
(ii) ಸ್ಥಾನಿಕರು	155
ಅಂಗೀಕೃತ ಬುಡಕಟ್ಟು ಪ್ರದೇಶಗಳ ಆದಿವಾಸಿಗಳು	162

ನೌಕಾಪಡೆ

ಕನಿಷ್ಠ ಎತ್ತರ ಮಾನದಂಡ 157 ಸೆಂ.ಮೀ. ಅದಾಗ್ಯೂ, ಕೆಳಕಂಡ ಪ್ರದೇಶಗಳ ಡೊಮಿಸೈಲ್ ಹೊಂದಿರುವ ಅಭ್ಯರ್ಥಿಗಳಿಗೆ ಮತ್ತು ಪ್ರತಿಭಾವಂತ ಕ್ರೀಡಾಪಟು ಅಭ್ಯರ್ಥಿಗಳಿಗೆ ಎತ್ತರದ ಮಾನದಂಡದಲ್ಲಿ ಸಡಿಲಿಕೆಯ ಅವಕಾಶವಿರುತ್ತದೆ:

ಕ್ರ.ಸಂ.	ಪ್ರವರ್ಗ	ಕನಿಷ್ಠ ಎತ್ತರ
(a)	ಲಡಾಕ್‌ನ ಬುಡಕಟ್ಟು	155 cms
(b)	ಅಂ&ನಿ ದ್ವೀಪಗಳು, ಲಕ್ಷದ್ವೀಪ ಮತ್ತು ಮಿನಿಕೊಯ್ (ಸ್ಥಾನಿಕರು)	155 cms
(c)	ಗೂಖಾ, ನೇಪಾಳಿ, ಅಸ್ಸಾಮಿ, ಗಢ್ವಾಲಿ, ಕುಮಾವೊ ಮತ್ತು ಉತ್ತರಾಖಂಡ್	152 cms
(d)	ಭೂತಾನ್, ಸಿಕ್ಕಿಮ್ ಮತ್ತು ಈಶಾನ್ಯ ವಲಯ	152 cms

ವಾಯುಪಡೆ

ಅಗ್ನಿವೀರವಾಯು ಪುರುಷ 152 ಸೆಂ.ಮೀ., ಅಗ್ನಿವೀರವಾಯು (ಮ್ಯೂಜಿಷಿಯನ್ ಪುರುಷ) 162 ಸೆಂ.ಮೀ.

152 ಸೆಂ.ಮೀ. ಮಹಿಳೆಯರಿಗೆ [ಎಜಿವಿ/ಎಜಿವಿ (ಮ್ಯೂಜಿಷಿಯನ್)]. ಈಶಾನ್ಯ ಮತ್ತು ಉತ್ತರಾಖಂಡದ ಪರ್ವತ ಪ್ರದೇಶಗಳ ಅಭ್ಯರ್ಥಿಗಳಿಗೆ, ಕನಿಷ್ಠತಮ 147 ಸೆಂ.ಮೀ. ಎತ್ತರವನ್ನು ಪರಿಗಣಿಸಲಾಗುತ್ತದೆ. ಲಕ್ಷದ್ವೀಪ ಅಭ್ಯರ್ಥಿಗಳ ಸಂದರ್ಭದಲ್ಲಿ ಕನಿಷ್ಠ ಎತ್ತರ 150 ಸೆಂ.ಮೀ. ಆಗಿರುತ್ತದೆ.

ಸೂಚನೆ:– ಈಶಾನ್ಯ, ಉತ್ತರಾಖಂಡದ ಪರ್ವತ ಪ್ರದೇಶಗಳ, ಲಕ್ಷದ್ವೀಪ ರಹವಾಸಿಗಳೆಂದು ಎತ್ತರ ಮಾನದಂಡದಲ್ಲಿ ಸಡಿಲಿಕೆ ಅವಕಾಶ ಪಡೆಯುವ "ಮಹಿಳಾ ಅಭ್ಯರ್ಥಿಗಳು", ಹಂತ 2 ಪರೀಕ್ಷಾ ಸಮಯದಲ್ಲಿ ತಮ್ಮ ರಹವಾಸಿ ಸ್ಥಿತಿಗತಿಯನ್ನು ಸಾಬೀತು ಪಡಿಸಬಲ್ಲ ತಮ್ಮ ಡೊಮಿಸೈಲ್ ಪ್ರಮಾಣಪತ್ರವನ್ನು ಹಾಜರುಪಡಿಸತಕ್ಕದ್ದು. ಅಲ್ಲದೆ, ಉತ್ತರಾಖಂಡದ ಪರ್ವತ ಪ್ರದೇಶಗಳ ಅಭ್ಯರ್ಥಿಗಳು, ಕಡ್ಡಾಯವಾಗಿ ತಮ್ಮ ಡೊಮಿಸೈಲ್ ಪ್ರಮಾಣಪತ್ರದಲ್ಲಿ ನಿಖರವಾಗಿ ತಮ್ಮ ರಹವಾಸಿ ಪರ್ವತ ಪ್ರದೇಶದ ಉಲ್ಲೇಖವನ್ನು ಹೊಂದಿರತಕ್ಕದ್ದು.

ಆಯ್ಕೆ ಪ್ರಕ್ರಿಯೆ

ಸೇನೆ:
ಹಂತ 1 – ಆನ್‌ಲೈನ್ ಪರೀಕ್ಷೆ
ಸಿಇಇ (ಕಾಮನ್ ಎಂಟ್ರನ್ಸ್ ಟೆಸ್ಟ್)
ಹಂತ 2
ಶಾರೀರಿಕ ಸದೃಢತೆ ಪರೀಕ್ಷೆ, ದೈಹಿಕ ಅಳತೆ ಪರೀಕ್ಷೆ ಮತ್ತು ವೈದ್ಯಕೀಯ ತಪಾಸಣೆ

ನೌಕಾಪಡೆ:
ಹಂತ 1 – ಆನ್‌ಲೈನ್ ಪರೀಕ್ಷೆ
ಐಎನ್‌ಇಟಿ (ಇಂಡಿಯನ್ ನೇವಿ ಎಂಟ್ರನ್ಸ್ ಟೆಸ್ಟ್)
ಹಂತ 2
ಶಾರೀರಿಕ ಸದೃಢತಾ ಪರೀಕ್ಷೆ, ಲಿಖಿತ ಪರೀಕ್ಷೆ ಮತ್ತು ನೇಮಕಾತಿ ವೈದ್ಯಕೀಯ ತಪಾಸಣೆ

ವಾಯುಪಡೆ:
ಹಂತ 1 – ಆನ್‌ಲೈನ್ ಪರೀಕ್ಷೆ
ಎಸ್‌ಟಿಎಆರ್ (ಷೆಡ್ಯೂಲ್ಡ್ ಟೆಸ್ಟ್ ಫಾರ್ ಅಗ್ನಿವೀರ್‌ವಾಯು ರಿಕ್ರ್ಯೂಟ್‌ಮೆಂಟ್)
ಹಂತ 2
ಶಾರೀರಿಕ ಸದೃಢತಾ ಪರೀಕ್ಷೆ – 1 ಮತ್ತು 2, ಅಡಾಪ್ಟಬಿಲಿಟಿ ಪರೀಕ್ಷೆ – 1 ಮತ್ತು 2 ಹಾಗೂ ವೈದ್ಯಕೀಯ ಪರೀಕ್ಷೆ

ಶಾರೀರಿಕ ಸದೃಢತಾ ಮಾನದಂಡ

ಸೇನೆ

ಪುರುಷ

ಗುಂಪು	1.6 ಕಿ.ಮೀ. ಓಟ – ಸಮಯ ಇಂದ	ಸಮಯ ವರೆಗೆ	ಅಂಕಗಳು	ಬೀಮ್ (ಪುಲ್ ಅಪ್ಸ್) – ಪುಲ್ ಅಪ್ಸ್	ಅಂಕಗಳು	9 ಅಡಿ ಡಿಚ್	ಜಿಗ್–ಜಾಗ್ ಬ್ಯಾಲನ್ಸ್
ಗುಂಪು I	-	5 ನಿಮಿಷ 30 ಸೆಕೆಂಡ್‌ವರೆಗೆ	60	10	40	ಅರ್ಹತೆ ಪಡೆಯಬೇಕು	ಅರ್ಹತೆ ಪಡೆಯಬೇಕು
ಗುಂಪು II	5 ನಿಮಿಷ 31 ಸೆಕೆಂಡ್‌ವರೆಗೆ	5 ನಿಮಿಷ 45 ಸೆಕೆಂಡ್‌ವರೆಗೆ	48	9	33		
ಗುಂಪು III	5 ನಿಮಿಷ 46 ಸೆಕೆಂಡ್‌ವರೆಗೆ	6 ನಿಮಿಷ	36	8	27		
ಗುಂಪು IV	6 ನಿಮಿಷ 01 ಸೆಕೆಂಡ್‌ವರೆಗೆ	6 ನಿಮಿಷ 15 ಸೆಕೆಂಡ್‌ವರೆಗೆ	24	7	21		
				6	16		

ಸೂಚನೆ: ಅಗ್ನಿವೀರ್ ಟೆಕ್ ಮತ್ತು ಅಗ್ನಿವೀರ್ ಆಫೀಸ್ ಅಸಿಸ್ಟಂಟ್/ಎಸ್‌ಕೆಟಿ ಹುದ್ದೆಗಾಗಿ ಹಾಜರಾಗುವ ಅಭ್ಯರ್ಥಿಗಳು ಮಾತ್ರ ಎಲ್ಲಾ ಪರೀಕ್ಷೆಗಳಲ್ಲಿ ಅರ್ಹರಾಗತಕ್ಕದ್ದು.

ಮಹಿಳೆ

1.6 – ಗುಂಪು	ಸಮಯ	10 ಅಡಿ ಉದ್ದ ಜಿಗಿತ	3 ಅಡಿ ಎತ್ತರ ಜಿಗಿತ
ಗುಂಪು–1	7 ನಿಮಿಷ 30 ಸೆಕೆಂಡ್‌ವರೆಗೆ	ಅರ್ಹತೆ ಪಡೆಯಬೇಕು	ಅರ್ಹತೆ ಪಡೆಯಬೇಕು
ಗುಂಪು–2	8 ನಿಮಿಷಗಳವರೆಗೆ		

ನೌಕಾಪಡೆ

ಲಿಂಗ	1.6 ಕಿ.ಮೀ. ಓಟ	ಸ್ಕ್ವಾಟ್ಸ್ (ಉಠಕ್ ಬೈಠಕ್)	ಪುಷ್–ಅಪ್ಸ್	ಬೆಂಟ್ ನೀ ಸಿಟ್–ಅಪ್ಸ್
ಪುರುಷ	6 ನಿಮಿಷ 30 ಸೆಕೆಂಡ್‌ವರೆಗೆ	20	15	15
ಮಹಿಳೆ	8 ನಿಮಿಷ	15	10	10

ವಾಯುಪಡೆ

ಲಿಂಗ	1.6 ಕಿ.ಮೀ. ಓಟ	ಸ್ಕ್ವಾಟ್ಸ್ (ಉಠಕ್ ಬೈಠಕ್) (ಸಮಯ)	ಪುಷ್–ಅಪ್ಸ್ (ಸಮಯ)	ಸಿಟ್–ಅಪ್ಸ್ (ಸಮಯ)
ಪುರುಷ	07 ನಿಮಿಷ	20 (01 ನಿಮಿಷ)	10 (01 ನಿಮಿಷ)	10 (01 ನಿಮಿಷ)
ಮಹಿಳೆ	08 ನಿಮಿಷ	15 (01 ನಿಮಿಷ)	–	10 (01 ನಿಮಿಷ 30 ಸೆಕೆಂಡ್)

ಪ್ರಾಯ

$17\frac{1}{2}$ – 21 ವರ್ಷ

ಸೂಚನೆ (ಭಾರತೀಯ ಸೇನೆಯ ಮಹಿಳಾ ಮಿಲಿಟರಿ ಪೊಲೀಸ್ ಹುದ್ದೆಗೆ ಮಾತ್ರ) – ಕಾರ್ಯನಿರತರಾಗಿದ್ದಾಗ ಮಡಿದ ರಕ್ಷಣಾ ಸಿಬ್ಬಂದಿಗಳ ವಿಧವೆಯರ ಗರಿಷ್ಠ ವಯೋಮಿತಿಗೆ 30 ವರ್ಷಗಳವರೆಗೆ ಸಡಿಲಿಕೆ ದೊರೆಯುತ್ತದೆ.

ಸೇವಾವಧಿ

ನಾಲ್ಕು ವರ್ಷಗಳು

ನಿಯಮಿತ ವೃಂದದಲ್ಲಿ ನೇಮಕಾತಿ

ನಾಲ್ಕು ವರ್ಷಗಳ ಸೇವೆಯನ್ನು ಪೂರ್ಣಗೊಳಸಿದ ಬಳಿಕ, ಸಂಸ್ಥೆಯ ಅಗತ್ಯತೆಗಳು ಮತ್ತು ಸಂಬಂಧಿತ ಸೇವೆಗಳಿಂದ ಘೋಷಿಸಲಾದ ನೀತಿಗಳ ಆಧಾರದಲ್ಲಿ ಅಗ್ನಿವೀರರಿಗೆ, ಸಶಸ್ತ್ರ ಪಡೆಗಳಲ್ಲಿ ಶಾಶ್ವತವಾಗಿ ನಿಯೋಜನೆಗೊಳ್ಳಲು ಅರ್ಜಿ ಸಲ್ಲಿಸುವ ಅವಕಾಶ ನೀಡಲಾಗುತ್ತದೆ. ನಿಯೋಜಿತ ನಾಲ್ಕು ವರ್ಷಗಳ ಅವಧಿಯಲ್ಲಿನ ಅವರ ಸಾಧನೆಯೂ ಸೇರಿದಂತೆ ಪ್ರಮುಖ ಮಾನದಂಡಗಳ ಆಧಾರದ ಮೇರೆಗೆ ಒಂದು ಕೇಂದ್ರೀಕೃತ ಮಾದರಿಯಲ್ಲಿ ಸದರಿ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ ಮತ್ತು ನಿಯಮಿತ ವೃಂದದಲ್ಲಿ ಮರು ನಿಯೋಜನೆಗಾಗಿ ನಿರ್ದಿಷ್ಟ ಬ್ಯಾಚ್‌ನಿಂದ ತಲಾ 25% ವರೆಗಿನ ಅಗ್ನಿವೀರ್‌ರನ್ನು ಭಾರತೀಯ ಸಶಸ್ತ್ರ ಪಡೆಗಳಲ್ಲಿ ನಿಯೋಜನೆ ಮಾಡಿಕೊಳ್ಳಲಾಗುತ್ತದೆ. ಅಗ್ನಿವೀರರಿಗೆ, ಭಾರತ ಸರ್ಕಾರದಲ್ಲಿ ಮುಂದಿನ ನಿಯೋಜನೆಗೆ ಆಯ್ಕೆ ಮಾಡಿಕೊಳ್ಳಲೇಬೇಕೆಂದು ಕೇಳುವ ಯಾವುದೇ ಹಕ್ಕು ಇರುವುದಿಲ್ಲ. ಅಗ್ನಿವೀರ್‌ರನ್ನು ಮುಂದಿನ ನಿಯೋಜನೆಗೆ ಆಯ್ಕೆ ಮಾಡುವ ಸಾಧ್ಯತೆಗಳು, ಸಂಪೂರ್ಣವಾಗಿ ಭಾರತ ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತವೆ.

ವೈವಾಹಿಕ ಸ್ಥಿತಿಗತಿ ಮತ್ತು ಗರ್ಭಾವಸ್ಥೆ

ಅವಿವಾಹಿತ ಭಾರತೀಯ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಮಾತ್ರ ಅಗ್ನಿವೀರ್‌ರಾಗಿ ನಿಯೋಜನೆಗೊಳ್ಳಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಯು ನಿಯೋಜನೆಯ ಸಮಯದಲ್ಲಿ 'ಅವಿವಾಹಿಕ' ಆಗಿರುವುದಕ್ಕೆ ಪ್ರಮಾಣಪತ್ರ ನೀಡಬೇಕಾಗುತ್ತದೆ. ಅಗ್ನಿವೀರ್‌ರಿಗೆ ಸಂಬಂಧಿತ ಸೇವೆಗಳಲ್ಲಿನ ನಾಲ್ಕು ವರ್ಷಗಳ ಸಂಪೂರ್ಣ ಸೇವೆಯ ಅವಧಿಯಾದ್ಯಂತ ವಿವಾಹ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಒಂದು ವೇಳೆ ಅಭ್ಯರ್ಥಿಯು, ಅವನ/ಅವಳ ಸೇವಾವಧಿಯಲ್ಲಿ ವಿವಾಹವಾದರೆ, ಅಥವಾ ಅವಿವಾಹಿಕ ಪ್ರಮಾಣಪತ್ರ ನೀಡಿದ್ದರೂ ಅದಾಗಲೇ ವಿವಾಹವಾಗಿರುವುದು ತಿಳಿದುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು ಸೇವೆಯಿಂದ ವಜಾ ಮಾಡಲಾಗುತ್ತದೆ. ಮಹಿಳಾ ಅಭ್ಯರ್ಥಿಗಳು, ತಮ್ಮ ನಿಯೋಜಿತ ಅವಧಿಯಲ್ಲಿ ತಾವು ಗರ್ಭಧಾರಣೆ ಮಾಡುವುದಿಲ್ಲ ಎಂದು ಹೆಚ್ಚುವರಿಯಾಗಿ ಘೋಷಣೆ ಸಲ್ಲಿಸಬೇಕಾಗುತ್ತದೆ. ಒಂದು ವೇಳೆ ಮಹಿಳಾ ಅಗ್ನಿವೀರ್‌ರು, ಗರ್ಭಧಾರಣೆಯಿಂದಾಗಿ ಲೊ ಮೆಡಿಕಲ್ ಕೆಟಗರಿ (ಎಲ್‌ಎಂಸಿ) ಒಳಗಾದರೆ, ಅಂತಹವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗುತ್ತದೆ. ಗರ್ಭಧಾರಣೆಯು, ಮಹಿಳಾ ಅಗ್ನಿವೀರ್‌ರಿಗೆ ನಿಯಮಿತ ವೃಂದದೊಳಗೆ ಆಯ್ಕೆಯಾಗುವ ಅವಕಾಶವನ್ನು ಸ್ಥಗಿತಗೊಳಿಸುತ್ತದೆ.

ಸೂಚನೆ (ಭಾರತೀಯ ಸೇನೆಯ ಮಹಿಳಾ ಮಿಲಿಟರಿ ಪೊಲೀಸ್ ಹುದ್ದೆಗೆ ಮಾತ್ರ) – ಮಕ್ಕಳಿಲ್ಲದಿರುವ ವಿಧವೆ, ವಿಚ್ಛೇದಿತ ಅಥವಾ ಕಾನೂನುಬದ್ಧವಾಗಿ ಪ್ರತ್ಯೇಕಗೊಂಡಿರುವ ಮಹಿಳೆ ಕೂಡ ಅರ್ಹರಾಗಿರುತ್ತಾರೆ. ರಕ್ಷಣಾ ಸಿಬ್ಬಂದಿಯ, ಮಕ್ಕಳನ್ನು ಹೊಂದಿರುವ ವಿಧವೆಯರು ಕೂಡ ಅರ್ಹರಾಗಿರುತ್ತಾರೆ. ಆದರೆ, ಅವರು ಮರು ವಿವಾಹ ಮಾಡಿಕೊಂಡಿರಬಾರದು.

ವೈದ್ಯಕೀಯ ಮಾನದಂಡಗಳು

ಅಭ್ಯರ್ಥಿಗಳು, ಸಂಬಂಧಿತ ಸೇವೆಗಳಿಂದ ನಿಗದಿಪಡಿಸಲಾಗಿರುವ ವೈದ್ಯಕೀಯ ತಪಾಸಣೆಗಳಿಗೆ ಒಳಗಾಗಬೇಕಾಗುತ್ತದೆ. ಸಂಬಂಧಿತ ಸೇವೆಗಳ ವೆಬ್‌ಸೈಟ್‌ನಲ್ಲಿ ಹೆಚ್ಚಿನ ವಿವರಗಳು ಲಭ್ಯವಿರುತ್ತದೆ.

ವೇತನ, ಭತ್ಯಗಳು, ಪೂರಕ ಲಾಭಗಳು ಮತ್ತು ಅಗ್ನಿವೀರ್ ಕಾರ್ಪಸ್ ಫಂಡ್ (ಸೇವಾ ನಿಧಿ ಪ್ಯಾಕೇಜ್)

ಈ ಯೋಜನೆಯ ಅಡಿಯಲ್ಲಿ ನಿಯೋಜನೆಗೊಳ್ಳುವ ಅಗ್ನಿವೀರ್‌ರಿಗೆ ಮಾಸಿಕ ರೂ. 30,000/– ಪ್ಯಾಕೇಜ್ ಪಾವತಿಸುವ ಜೊತೆಗೆ ವಾರ್ಷಿಕವಾಗಿ ನಿಗದಿತ ವೇತನ ಹೆಚ್ಚಳ ನೀಡಲಾಗುತ್ತದೆ. ಅಲ್ಲದೆ, ಅಪಾಯ ಮತ್ತು ಸಂಕಷ್ಟ ಭತ್ಯೆಗಳನ್ನು, ಉಡುಪು ಮತ್ತು ಪ್ರಯಾಣ ಭತ್ಯೆಗಳನ್ನು ಪಾವತಿಸಲಾಗುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ಮೇರೆಗೆ ದಿನಸಿ, ಬಟ್ಟೆ, ವಸತಿ ಮತ್ತು ಲೀವ್ ಟ್ರಾವೆಲ್ ಕನ್ಸೆಷನ್ (ಎಲ್‌ಟಿಸಿ) ಮಾದರಿಯ ಸವಲತ್ತುಗಳನ್ನು ಕೂಡ ಒದಗಿಸಲಾಗುತ್ತದೆ. ಅಗ್ನಿವೀರ್‌ರ ನಿಯೋಜಿತ ಅವಧಿಯು ಪೂರ್ಣಗೊಂಡ ಬಳಿಕ, ಇಲ್ಲಿ ಕೆಳಗೆ ತಿಳಿಸಿರುವಂತೆ, ಅವರಿಗೆ ಒಂದೇ ಬಾರಿಗೆ ಸೇವಾ ನಿಧಿ ಪ್ಯಾಕೇಜ್ ನೀಡಲಾಗುತ್ತದೆ. ಈ ಪ್ಯಾಕೇಜ್‌ನಲ್ಲಿ ಅವರ ಮಾಸಿಕ ಕೊಡುಗೆಯ ಜೊತೆಗೆ ಸರ್ಕಾರದ ಸಮಾನ ಕೊಡುಗೆ ಕೂಡ ಒಳಗೊಂಡಿರುತ್ತದೆ:–

ವರ್ಷ	ಕಸ್ಟಮೈಸ್ಡ್ ಪ್ಯಾಕೇಜ್ (ಮಾಸಿಕ)	ಇನ್ ಹ್ಯಾಂಡ್ (70%)	ಅಗ್ನಿವೀರ್ ಕಾರ್ಪಸ್ ಫಂಡ್ ಕೊಡುಗೆ (30%)	ಕಾರ್ಪಸ್ ಫಂಡ್‌ಗೆ ಭಾರತ ಸರ್ಕಾರದ ಕೊಡುಗೆ
ಎಲ್ಲಾ ಅಂಕಿಅಂಶಗಳು ರೂ.ಗಳಲ್ಲಿ (ಮಾಸಿಕ ಕೊಡುಗೆ)				
1ನೇ ವರ್ಷ	30000	21000	9000	9000
2ನೇ ವರ್ಷ	33000	23100	9900	9900
3ನೇ ವರ್ಷ	36500	25550	10950	10950
4ನೇ ವರ್ಷ	40000	28000	12000	12000
ನಾಲ್ಕು ವರ್ಷಗಳ ನಂತರ ಅಗ್ನಿವೀರ್ ಕಾರ್ಪಸ್ ಫಂಡ್‌ನಲ್ಲಿ ಲಭ್ಯವಾಗುವ ಒಟ್ಟು ಕೊಡುಗೆ			Rs. 5.02 ಲಕ್ಷಗಳು	Rs. 5.02 ಲಕ್ಷಗಳು
4ನೇ ವರ್ಷದ ಬಳಿಕ ನಿರ್ಗಮನ	ಅಂದಾಜು ರೂ. 10.04 ಲಕ್ಷ ಮೌಲ್ಯದ ಸೇವಾ ನಿಧಿ ಪ್ಯಾಕೇಜ್ (ಬಡ್ಡಿ ಹೊರತುಪಡಿಸಿ ಸಂಪೂರ್ಣ ಮೊತ್ತ)			

ಜೀವ ವಿಮೆ ವ್ಯಾಪ್ತಿ

ಅಗ್ನಿವೀರ್‌ರಿಗೆ, ಅವರ ನಿಯೋಜನಾ ಅವಧಿಯಾದ್ಯಂತ ರೂ. 48 ಲಕ್ಷ ಜೀವ ವಿಮಾ ವ್ಯಾಪ್ತಿ ನೀಡಲಾಗುತ್ತಿದ್ದು, ಇದಕ್ಕಾಗಿ ಅವರು ಯಾವುದೇ ಕೊಡುಗೆ ನೀಡಬೇಕಾಗಿರುವುದಿಲ್ಲ.

ಮೃತ್ಯು ಪರಿಹಾರ

ರೂ. 48 ಜೀವ ವಿಮಾ ವ್ಯಾಪ್ತಿಯ ಜೊತೆಗೆ, ಸೇವೆಯಲ್ಲಿದ್ದಾಗ ಸಾವು ಸಂಭವಿಸಿದರೆ, ಹೆಚ್ಚುವರಿಯಾಗಿ ಎನ್‌ಓಕೆ'ಗೆ ಒಂದು ಬಾರಿಯ ರೂ. 44 ಲಕ್ಷ ಎಕ್ಸ್‌ಗ್ರೇಶಿಯಾ ನೀಡಲಾಗುತ್ತದೆ.

ವೈಕಲ್ಯತಾ ಪರಿಹಾರ

ಅಗ್ನಿವೀರ್‌ರಿಗೆ, ಒಂದು ಬಾರಿಯ ರೂ. 44/25/15 ಲಕ್ಷ ಎಕ್ಸ್‌ಗ್ರೇಶಿಯಾವು ವೈಕಲ್ಯತೆಯ ಶೇಕಡವಾರು (100% / 75% / 50%) ಆಧಾರದ ಮೇರೆಗೆ ಅನ್ವಯವಾಗುತ್ತದೆ.

ರಜೆ

ಅಗ್ನಿವೀರ್‌ರಿಗೆ ಪ್ರತಿ ವರ್ಷಕ್ಕೆ 30 ದಿನಗಳ ರಜೆ ಅನ್ವಯವಾಗುತ್ತದೆ. ಅಲ್ಲದೆ, ಸಕ್ಷಮ ವೈದ್ಯಕೀಯ ಪ್ರಾಧಿಕಾರದ ವೈದ್ಯಕೀಯ ಸಲಹೆಗಳ ಮೇರೆಗೆ ಅನಾರೋಗ್ಯ ರಜೆ ಕೂಡ ಅನ್ವಯವಾಗುತ್ತದೆ.

ವೈದ್ಯಕೀಯ ಮತ್ತು ಸಿಎಸ್‌ಡಿ ಸೌಕರ್ಯಗಳು

ಭಾರತೀಯ ಸಶಸ್ತ್ರ ಪಡೆಗಳಲ್ಲಿನ ಅವರ ನಿಯೋಜನೆಯ ಅವಧಿಯಲ್ಲಿ, ಅಗ್ನಿವೀರ್‌ರು ಸೇವಾ ಆಸ್ಪತ್ರೆಗಳಿಗೆ ಮತ್ತು ಸಿಎಸ್‌ಡಿ ಸೌಲಭ್ಯಗಳಿಗೆ ಹಕ್ಕುದಾರರಾಗಿರುತ್ತಾರೆ.

CBC 10701/13/0035/2425

ಆನ್‌ಲೈನ್ ಅರ್ಜಿಗಳು ಇಲ್ಲಿ ಲಭ್ಯ:– https://joinindianarmy.nic.in/ https://joinindiannavy.gov.in https://agnipathvayu.cdac.in



ಬರೆದರೆ ಮುತ್ತಿನ ಹಾರದಂತಿರಲಿ!

ಚಂದದ ಕೈಬರಹವಿದ್ದರೆ ಪರೀಕ್ಷೆಯಲ್ಲಿ ಒಂದೆರಡು ಅಂಕ ಹೆಚ್ಚಿಗೆ ಸಿಗುವುದು ಸುಲಭವಾಗುತ್ತದೆ. ಕೈಬರಹ ಹೇಗಿರಬೇಕು ಎಂಬುದಕ್ಕೆ ಇಲ್ಲಿವೆ ಹಲವು ಸಲಹೆಗಳು

ಎಸ್.ಜಿ.ಕಡೇಮನಿ

ಆಲಿಸುವುದು, ಓದುವುದು, ಬರೆಯುವುದು, ಮೌಖಿಕ ಅಭಿವ್ಯಕ್ತಿ, ಈ ನಾಲ್ಕು ಹಂತಗಳು ಕಲಿಕಾ ಪ್ರಕ್ರಿಯೆಯ ಮುಖ್ಯ ಆಯಾಮಗಳಾಗಿರುತ್ತವೆ. ಈ ನಾಲ್ಕರಲ್ಲಿ ಮಗು ತೋರುವ ಆಸಕ್ತಿ ಮತ್ತು ಪ್ರತಿಕ್ರಿಯೆಗಳನ್ನಾಧರಿಸಿ, ಆ ಮಗುವಿನ ಕಲಿಕೆಯ ಕುರಿತು ನಿಖರವಾದ ಅಭಿಪ್ರಾಯವನ್ನು ಹೇಳಬಹುದಾಗಿದೆ. ಈ ನಾಲ್ಕು ಆಯಾಮಗಳು ಪರಸ್ಪರ ಪೂರಕವಾಗಿದ್ದು, ಇವುಗಳನ್ನು ಗಮನಿಸುತ್ತಾ ಪಾಠ ಮಾಡುವುದು ಶಿಕ್ಷಕರ ಹೊಣೆಗಾರಿಕೆಯೂ ಆಗಿರುತ್ತದೆ.

ಬರವಣಿಗೆ ಒಂದು ಮುಖ್ಯವಾದ ಮನೋ ಶಾರೀರಿಕ ಕಲಿಕಾ ಚಟುವಟಿಕೆಯಾಗಿರುತ್ತದೆ. ಮೌಲ್ಯಮಾಪನದಲ್ಲಿ ಲಿಖಿತ ಮತ್ತು ಮೌಖಿಕ, ಪ್ರಾಯೋಗಿಕ ಚಟುವಟಿಕೆಗಳಿರುತ್ತವೆ. ವರ್ಷವಿಡೀ ಕಲಿತ ಅಥವಾ ಸಂಗ್ರಹಿಸಿದ ವಿಷಯ ಜ್ಞಾನವನ್ನು ಲಿಖಿತ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಬರೆದು ತೋರಬೇಕಾಗುತ್ತದೆ. ಲಿಖಿತ ಪರೀಕ್ಷೆ ಮೌಲ್ಯಮಾಪನದ ಅತ್ಯಂತ ಮುಖ್ಯವಾದ ಶೈಕ್ಷಣಿಕ ಚಟುವಟಿಕೆ ಆಗಿರುತ್ತದೆ. ವಿದ್ಯಾರ್ಥಿ ಬರೆದದ್ದು ಮೌಲ್ಯಮಾಪಕರಿಗೆ ಸುಲಭವಾಗಿ ಓದಲು ಬರುವಂತಿರಬೇಕು. ಹಾಗಾಗಿ ಕೈಬರಹದ ಕುರಿತು ಕೆಲ ಅಂಶಗಳನ್ನು ನಮ್ಮ ವಿದ್ಯಾರ್ಥಿಗಳು ಮನನ ಮಾಡಿಕೊಳ್ಳುವುದು ಅತಿ ಮುಖ್ಯವಾಗಿರುತ್ತದೆ.

ಕೈಬರಹ ಹೇಗಿರಬೇಕು?:

ಅಕ್ಷರಗಳು ದುಂಡಾಗಿರಬೇಕು. ಸರಳವಾಗಿ ಓದಲು ಬರುವಂತಿರಬೇಕು. ಅಕ್ಷರಗಳ ಗಾತ್ರ, ಆಕಾರಗಳು ಸಮರ್ಪಕವಾಗಿರಬೇಕು. ಅಕ್ಷರ ಬರೆಯುವಲ್ಲಿ ಮೂರು ಅಂಶಗಳನ್ನು ಗಮನಿಸಬೇಕು. ಆರಂಭ, ಮುಂದುವರಿಕೆ ಮತ್ತು ಮುಕ್ತಾಯ. ಇವೇ ಆ ಮೂರು ಅಂಶಗಳು. ಪ್ರತಿಯೊಂದು ಅಕ್ಷರವನ್ನು ಸಮರ್ಪಕವಾಗಿ ಬರೆಯಲು ಆರಂಭಿಸಬೇಕು. ಬರೆಯುತ್ತ ಮುಂದುವರಿಯಬೇಕು ಬರೆದು ಮುಗಿಸಬೇಕು. ಕೆಲವು ವಿದ್ಯಾರ್ಥಿಗಳು ಕೆಲ ಅಕ್ಷರಗಳನ್ನು ಬರೆಯುವಾಗ ತಿರುಪಾಗಿ ಬರೆಯುತ್ತಾರೆ ಅದು ಸರಿಯಲ್ಲ.

ಎರಡು ಶಬ್ದಗಳ ನಡುವೆ ಸರಿಯಾದ ಅಂತರವಿರಬೇಕು. ಪೂರ್ಣವಿರಾಮ, ಅಲ್ಪವಿರಾಮ, ಉದ್ಗಾರವಾಚಕ, ಪ್ರಶ್ನಾರ್ಥಕ, ಅವತರಿಣಿಕೆ ಇತ್ಯಾದಿ ಚಿಹ್ನೆಗಳನ್ನು ಸರಿಯಾಗಿ ಬಳಸಬೇಕು. ಆಗ ಮೌಲ್ಯಮಾಪಕರಿಗೆ ಬರೆದದ್ದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಎಲ್ಲೆಂದರಲ್ಲಿ ಚಿಹ್ನೆಗಳನ್ನು ಬಳಸಿದರೆ ಅಥವಾ ಚಿಹ್ನೆಗಳನ್ನು ಸಮರ್ಪಕವಾಗಿ ಬಳಸದೇ ಇದ್ದರೆ ಬರೆದದ್ದು ಮೌಲ್ಯಮಾಪಕರಿಗೆ ಅರ್ಥವಾಗುವುದಿಲ್ಲ. ಹಾಗೆ ಮಾಡಬಾರದು.

ಈ ಹಿಂದೆ ಒಂದು ಲೇಖನವನ್ನು ಕೊಟ್ಟು, ಅದರಲ್ಲಿ ವಿರಾಮ ಚಿಹ್ನೆಗಳನ್ನು ಬಳಸಿರಿ ಎಂಬುದಾಗಿ ಐದು ಅಂಕಗಳ ಪ್ರಶ್ನೆಯನ್ನೇ ಕೊಡಲಾಗುತ್ತಿತ್ತು. ಬರೆದ ವಾಕ್ಯ ಯಾರದೋ ಒಬ್ಬರ ಹೇಳಿಕೆಯಾಗಿದ್ದರೆ ಆ ವಾಕ್ಯವನ್ನು ಚಿಹ್ನೆಗಳಿಂದ ಗುರುತಿಸಬೇಕು. ವಿರುದ್ಧಾರ್ಥ, ವ್ಯಂಗ್ಯ ಅಥವಾ ವಿಡಂಬನೆಯನ್ನು ವ್ಯಕ್ತಪಡಿಸುವುದಾದರೆ ಅಂಥ ವಾಕ್ಯಗಳನ್ನು ಆವರಣಗಳಲ್ಲಿ ಬರೆಯಬೇಕು.

ಬರಹದಲ್ಲಿ ಅಂಕಿ ಅಂಶಗಳನ್ನು ಅಥವಾ ಅರ್ಥವತ್ತಾದ ವಿಶೇಷ ವಾಕ್ಯವನ್ನು ತಳರೇಖೆ (underline) ಹಾಕಬೇಕು. ಈಗ ಗಿಳಿ ಹಸಿರಿನ ತೆಳು ವರ್ಣದ ಮಾರ್ಕರ್ ಪೆನ್‌ಗಳು ದೊರೆಯುತ್ತವೆ. ಅವುಗಳಿಂದ ಅಂಥ ಅಂಶಗಳನ್ನು ಎತ್ತಿ ತೋರಿಸಬಹುದು.

ಕೆಲವು ಸಲ ವಿದ್ಯಾರ್ಥಿಗಳಿಗೆ ತಾವು ಬರೆದದ್ದು ತಪ್ಪಾಗಿದೆ ಎಂಬುದು ಗಮನಕ್ಕೆ ಬರುತ್ತದೆ. ಅಂಥ ಸಂದರ್ಭದಲ್ಲಿ ತಪ್ಪಾದ ಶಬ್ದ ಮತ್ತು ವಾಕ್ಯಗಳನ್ನು ಒಂದೇ ಒಂದು ಗೆರೆ ಎಳೆಯುವುದರ ಮೂಲಕ ರದ್ದುಪಡಿಸಬೇಕು. ಆದರೆ, ಕೆಲವರು ತಾವು ತಪ್ಪಾಗಿ ಬರೆದದ್ದು ಓದುಗರಿಗೆ ಗೊತ್ತಾಗಬಾರದು ಎಂಬ ಉದ್ದೇಶದಿಂದ ತಪ್ಪು ಶಬ್ದ ಅಥವಾ ವಾಕ್ಯಗಳ ಮೇಲೆ ಪುನಃ ಪುನಃ ಗೆರೆ ಎಳೆಯುವರು. ಹೀಗೆ ಮಾಡಬೇಡಿ.

ಶಿಸ್ತು, ಸ್ವಚ್ಛತೆ, ಸೌಂದರ್ಯ ಈ ಮೂರು ಬರವಣಿಗೆಯ ಅಂದವನ್ನು ಹೆಚ್ಚಿಸುತ್ತವೆ. ಸುಂದರವಾದ ಬರವಣಿಗೆಯನ್ನು ಕಂಡ ಮೌಲ್ಯಮಾಪಕರು ಸಂತೋಷಭರಿತರಾಗುವರು. ಆಗ ಎರಡು ಅಂಕಗಳು ಹೆಚ್ಚು ಬರುವ ಸಾಧ್ಯತೆಯೂ ಇರುತ್ತದೆ. ಈ ಹಿಂದೆ ಸುಂದರವಾದ ಬರಹಕ್ಕೆ ಐದು ಅಂಕಗಳನ್ನು ಮೀಸಲಿಡುವ ಪದ್ಧತಿಯೂ ಇತ್ತು. ಉತ್ತರ ಬರೆಯುವಲ್ಲಿ ಅಗತ್ಯವಾದ ಶೀರ್ಷಿಕೆ, ಉಪಶೀರ್ಷಿಕೆಗಳನ್ನು ಸ್ಪಷ್ಟವಾಗಿ ಬರೆಯಬೇಕು. ಒಂದು ಪ್ರಶ್ನೆಗೆ ಉತ್ತರವನ್ನು ಬರೆದಾದ ಮೇಲೆ ಕೆಳಗೆ ಒಂದು ಗೆರೆ ಎಳೆಯುವುದೂ ಒಳ್ಳೆಯ ಪರಿಪಾಠವಾಗಿರುತ್ತದೆ.

ನಿಬಂಧರೂಪದ ಉತ್ತರ ಬರೆಯುವುದಿದ್ದಲ್ಲಿ ವಿಷಯಾನುಸಾರ (paragraphs) ಕಂಡಿಕೆಗಳನ್ನು ಮಾಡಬೇಕು. ಹಾಗೆ ಮಾಡುವುದರಿಂದ ಮೌಲ್ಯಮಾಪಕರಿಗೆ ಬರೆದ ವಿಷಯ ಹಂತ ಹಂತವಾಗಿ ಸ್ಪಷ್ಟವಾಗಿ ತಿಳಿಯುತ್ತದೆ.

ಪುಟದ ಎಡಭಾಗದಲ್ಲಿ ಎರಡು ಅಂಗುಲದ ಮಾರ್ಜಿನ್ ಬಿಟ್ಟು ಬರೆಯಬೇಕು. ಕೆಲವು ಸಲ ಮಾರ್ಜಿನ್ ಗೆರೆ ಹಾಕಿದ ಉತ್ತರ ಪತ್ರಿಕೆಗಳೂ ಕೊಡಲಾಗುತ್ತವೆ. ಈ ಹಿಂದೆ ಉತ್ತರ ಪತ್ರಿಕೆಯ ಪುಟದ ಕಾಲು ಭಾಗವನ್ನು ಮಾರ್ಜಿನ್ ಬಿಡುವ ಪದ್ಧತಿ ಇತ್ತು.

ಕೂಡಕ್ಷರಗಳನ್ನು ಬರೆಯುವುದಕ್ಕಿಂತ (joint letters) ಅಕ್ಷರಗಳನ್ನು, ಶಬ್ದಗಳನ್ನು ಬಿಡಿಸಿ ಬರೆಯುವುದೇ ಲೇಸು. ಹಾಗೆ ಬರೆದದ್ದು ಮುತ್ತಿನ ಹಾರದಂತೆ ಮುದ್ದಾಗಿ ಕಾಣುತ್ತದೆ.

ಚಂದದ ಕೈಬರಹ ನಿಮ್ಮದಾಗಬೇಕಾದರೆ, ನಿತ್ಯ ಒಂದು ಪುಟ ಬರೆಯುವ ರೂಢಿಯನ್ನು ಇಟ್ಟುಕೊಳ್ಳಬೇಕು. ಬರವಣಿಗೆ ಚಟವಾದರೆ ಪರೀಕ್ಷೆ ಬರೆಯುವುದು ಸರಾಗವಾಗುತ್ತದೆ. ಕೇವಲ ಓದಿ, ಮಾಹಿತಿ ಸಂಗ್ರಹಿಸಿದರೆ ಸಾಲದು. ಸಂಗ್ರಹಿಸಿದ ಮಾಹಿತಿಯನ್ನು ಇತಿಮಿತಿಯಲ್ಲಿ ದುಂಡಗೆ ಬರೆದು ತೋರುವುದು ಪರೀಕ್ಷಾ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ❖

ಮಗ ಚಟಗಳ ದಾಸ ಪರಿಹಾರವೇನು?



ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

● ನನ್ನ ಮಗ ಮದ್ಯಪಾನ ಮತ್ತು ಧೂಮಪಾನಗಳ ದಾಸನಾಗಿದ್ದಾನೆ. ಎರಡು ಸಲ ಚಟ ನಿವಾರಣಾ ಕೇಂದ್ರಗಳಿಗೂ ಸೇರಿಸಿದ್ದೆ. ಅಲ್ಲಿಂದ ಬಂದ ಮೇಲೆ ಒಂದೆರಡು ತಿಂಗಳಷ್ಟೆ ಆರಾಮಾಗಿರುತ್ತಾನೆ. ಮತ್ತದೇ ಚಟಗಳು ಶುರುವಾಗುತ್ತವೆ. ಏನು ಮಾಡಬೇಕು?

ಯುವಜನತೆಯನ್ನು ಕಾಡುತ್ತಿರುವ ಗಂಭೀರವಾದ ಸಮಸ್ಯೆ ಇದು. ಹದಿಹರೆಯದ ಮಕ್ಕಳು ಕುತೂಹಲಕ್ಕಾಗಿ, ಗೆಳೆಯರ ಸಹವಾಸದಿಂದ ಹಾಗೂ ಮನೆಯಲ್ಲಿ ವ್ಯಸನಿಗಳಾದ ಹಿರಿಯರಿಂದ ಪ್ರೇರಣೆ ಪಡೆದು ಚಟ ಹತ್ತಿಸಿಕೊಳ್ಳುತ್ತಾರೆ. ಇನ್ನು ಕೆಲವರು ತಮ್ಮಲ್ಲಿ ಮನೆ ಮಾಡಿರುವ ಕೀಳರಿಮೆ, ಅವಮಾನ, ಭಯಗಳಿಂದ ಹೊರಬರುವ ಪ್ರಯತ್ನವಾಗಿ ಧೂಮಪಾನ ಮತ್ತು ಮದ್ಯಪಾನದ ಮೊರೆ ಹೋಗುತ್ತಾರೆ. ಹೀಗೆ ಮಾಡುವ ಮೂಲಕ ಸಂಗಡಿಗರ ಮುಂದೆ ಗೆದ್ದೆ ಎಂದೆಲ್ಲಾ ಸಂಭ್ರಮಿಸುತ್ತಾರೆ.

ತಂಬಾಕಿನಲ್ಲಿರುವ ನಿಕೋಟಿನ್‌ಗಳು ಮಿದುಳಿನಲ್ಲಿ ಡೋಪಮೈನ್ ಎಂಬ ರಾಸಾಯನಿಕವನ್ನು ಬಿಡುಗಡೆ ಮಾಡುತ್ತದೆ. ಇದು ಉಲ್ಲಾಸ ಮೂಡಿಸುತ್ತದೆ. ಇದರಿಂದ ಹೆಚ್ಚು ಹೆಚ್ಚು ನಿಕೋಟಿನ್ ಸೇವಿಸುವಂತೆ ಪ್ರೇರಣೆ ಸಿಗುತ್ತದೆ. ಕ್ರಮೇಣ ಚಟವಾಗಿ ರೂಪುಗೊಳ್ಳುತ್ತದೆ. ಹಾಗೆಯೇ ವ್ಯಸನಿಗಳಾಗುತ್ತಾರೆ. ನಂತರ ಅದರಿಂದ ಹೊರಕ್ಕೆ ಬರಲಿಕ್ಕಾಗದೇ ಒದ್ದಾಡುತ್ತಾರೆ.

ಹವ್ಯಾಸಕ್ಕೆಂದು ಶುರುಮಾಡಿದ ಧೂಮಪಾನ ಕ್ರಮೇಣ ಅಭ್ಯಾಸವಾಗುತ್ತದೆ. ಆರಂಭದಲ್ಲಿ ಚಟವನ್ನಾಗಿಸಿಕೊಳ್ಳುವ ಇರಾದೆ ಅವರಿಗೆ ಇರುವುದಿಲ್ಲ. ಆದರೆ ಡೋಪಮೈನ್ ಪ್ರಭಾವದಿಂದಾಗಿ ಬಿಡಲಿಕ್ಕಾಗದೇ ಸೋಲುತ್ತಾರೆ. ಅದು ಚಟವಾಗಿ ಮಾರ್ಪಡುತ್ತದೆ. ಅವರು ಅದನ್ನು ಬಿಡುವ ಪ್ರಯತ್ನವನ್ನೂ ಮಾಡುತ್ತಿರುತ್ತಾರೆ. ಬಿಡಲಾರದೇ ಒದ್ದಾಡುತ್ತಲೂ ಇರುತ್ತಾರೆ. ಹಾಗಾಗಿ ಅವರ ಮನಸ್ಸಿನಲ್ಲಿ ಅಪರಾಧಿ ಪ್ರಜ್ಞೆ ಇರುತ್ತದೆ.

ನಿಮ್ಮ ಮಗ ಎಷ್ಟನೇ ವಯಸ್ಸಿಗೆ ಧೂಮಪಾನ ಮತ್ತು ಮದ್ಯಪಾನ ಮಾಡಿದ ಎಂದು ನಿಮಗೆ ಗೊತ್ತೆ?. ಮತ್ತೆ ಮತ್ತೆ ಅವನು ಅದರ ವಶವಾಗುತ್ತಿದ್ದಾನೆ ಎಂದರೆ ಅವನಿಗೆ ಮಾನಸಿಕವಾಗಿ ತೊಂದರೆ ಇದೆ ಎಂದು ಅರ್ಥೈಸಬಹುದು. ಯಾವುದೇ ಚಟವನ್ನಾಗಲೀ ಮೊದಲು ಬಿಡಬೇಕು ಎನ್ನುವ ಮನಸ್ಸು ಆ ವ್ಯಸನಿಗೆ ಇರಬೇಕು. ಅವನಿಗೆ ಮನಸ್ಸು ಇಲ್ಲದಿದ್ದರೆ, ಮೂರನೆಯವರ ಪ್ರಯತ್ನವು ಫಲಪ್ರದವಾಗುವುದು ಕಡಿಮೆ. ವ್ಯಸನವನ್ನು ಬಿಟ್ಟ ಕೆಲವು ದಿನಗಳಲ್ಲಿಯೇ ಅವನ ದೇಹದಲ್ಲಿ ನಿಕೋಟಿನ್ ಅಂಶವು ಕಡಿಮೆಯಾಗುತ್ತದೆ. ಇದರಿಂದ ಖಿನ್ನತೆ, ಹತಾಶೆ, ಆತಂಕಗಳು ಶುರುವಾಗುತ್ತವೆ.

ಚಟ ನಿವಾರಣಾ ಕೇಂದ್ರದಿಂದ ಹೊರಬಂದ ನಂತರ ಚಟ ಹತ್ತಿಸಿಕೊಳ್ಳುವುದು ಸಾಮನ್ಯ ಸಂಗತಿ. ಮನೆಯಲ್ಲಿಯೂ ಶಾಂತವಾದ, ಭರವಸೆಯ, ಗೌರವದ ವಾತಾವರಣ ಇರಬೇಕು. ಮನೆಯವರು ಅವನನ್ನು ವ್ಯಸನಿಯಂತೆ ನೋಡಬಾರದು. ಅವನು ಮತ್ತೆ ಮತ್ತೆ ವ್ಯಸನಮುಖಿಯಾಗುವ ಅವಕಾಶವನ್ನು ತಪ್ಪಿಸಬೇಕು. ವ್ಯಸನಿಗಳ ಸಹವಾಸದಿಂದ ಅವನನ್ನು ಹೊರಗೆ ಇಡಬೇಕು. ಒಳ್ಳೆಯ ಹವ್ಯಾಸವನ್ನು ರೂಢಿಸಿಕೊಳ್ಳುವ ಅವಕಾಶವನ್ನು ಕೊಡಬೇಕು. ಅದರ ಬಗ್ಗೆ ಅವನಿಗೆ ಸಾಸಿವೆಯಷ್ಟದಾರೂ ಆಸಕ್ತಿ ಇರಬೇಕು. ಧ್ಯಾನ ಮಾಡಬೇಕು. ಆರೋಗ್ಯಕರವಾದ ಸತ್ವಯುತ ಆಹಾರವನ್ನು ಸೇವಿಸಬೇಕು. ನಿತ್ಯ ದೇಹವು ದಣಿಯುವಷ್ಟು ದೈಹಿಕ ಕಸರತ್ತು ಮಾಡಬೇಕು. ಎರಡು ಸಲ ಸ್ನಾನ ಮಾಡುವುದು ಒಳ್ಳೆಯದು.

ಯಾವ ಕಾರಣಕ್ಕೆ ಈ ಚಟ ಬಂದಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಅದರಂತೆ ಆ ತೊಂದರೆಯನ್ನು ಗುರುತಿಸಬೇಕು. ಚಟಗಳೆಲ್ಲ ದೇಹಕ್ಕೆ ಸಂಬಂಧಿಸಿದ್ದಲ್ಲ. ಮನಸ್ಸಿಗೆ ಸಂಬಂಧಿಸಿದ್ದು. ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಬಹುದು. ❖

ಅಂಕ ಗಳಿಕೆಗೆ ಕ್ರ್ಯಾಷ್ ಕೋರ್ಸ್

ನೀಟ್, ಸಿಇಟಿ, ಜೆಇಇ ಪ್ರವೇಶ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಲು ಸಹಾಯವಾಗುವಂತೆ ಎಕ್ಸೆಲ್ ಅಕಾಡೆಮಿಕ್ಸ್ 50 ದಿನಗಳ ಕ್ರ್ಯಾಷ್ ಕೋರ್ಸ್ ರೂಪಿಸಿದೆ. ಈ ಕೋರ್ಸ್‌ನಲ್ಲಿ ಕಡಿಮೆ ಅವಧಿಯಲ್ಲಿ ಉತ್ತಮ ಅಂಕಗಳನ್ನು ಪಡೆಯುವ 'ಟ್ರಿಕ್ಸ್' ತಿಳಿಸಿಕೊಡಲಾಗುವುದು. ಈಗಾಗಲೇ ಸಿಇಟಿ, ಜೆಇಇ, ನೀಟ್ ಪರೀಕ್ಷೆಯ ವೇಳಾಪಟ್ಟಿ ಬಿಡುಗಡೆಯಾಗಿದೆ. ದ್ವಿತೀಯ ಪಿಯು ಪರೀಕ್ಷೆ ಮುಗಿದ ಬಳಿಕವೇ ಈ ಕೋರ್ಸ್ ಆರಂಭವಾಗಲಿದೆ.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೇರೆ ಬೇರೆ ಬ್ಯಾಚ್‌ಗಳಾಗಿ ವಿಂಗಡಿಸಿ ತರಬೇತಿ ನೀಡಲಾಗುವುದು. ಪ್ರತಿದಿನ ತರಬೇತಿ ನಂತರ ಪರೀಕ್ಷೆ ನಡೆಯಲಿದೆ. ಫಲಿತಾಂಶವನ್ನೂ ಅದೇ ದಿನ ಬಿಡುಗಡೆ ಮಾಡಲಾಗುವುದು. ರಾಜ್ಯಪಠ್ಯಕ್ರಮ, ಕೇಂದ್ರ ಪಠ್ಯಕ್ರಮ ಎಲ್ಲ ವಿದ್ಯಾರ್ಥಿಗಳೂ ಈ ಕೋರ್ಸ್‌ಗೆ ದಾಖಲಾಗಬಹುದು. ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ತರಗತಿಗಳು ಇರಲಿವೆ. ನಿತ್ಯ 2 ಗಂಟೆ ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತ ವಿಷಯಗಳ ಬೋಧನೆ ನಡೆಯಲಿದೆ. ಆಯ್ಕೆ ಮಾಡಿಕೊಳ್ಳುವ ಪ್ರವೇಶ ಪರೀಕ್ಷೆ ಆಧಾರದ ಮೇಲೆ ತರಬೇತಿ ಇರಲಿದೆ. ನೀಟ್(ಪಿಸಿಬಿ), ಜೆಇಇ ಮೈನ್ಸ್(ಪಿಸಿಎಂ), ಸಿಇಟಿ(ಪಿಸಿಎಂ), ಎಂಜಿನಿಯರಿಂಗ್ ಸಿಇಟಿ(ಪಿಸಿಬಿ), ಪಶು ವೈದ್ಯಕೀಯ, ಬಿ.ಎಸ್ಸಿ ಅಗ್ರಿ(ಪಿಸಿಬಿ) ಸಿಇಟಿ-ಪಿಸಿಎಂಬಿ ವಿಷಯಗಳನ್ನು ಬೋಧಿಸಲಿದೆ. ಇಲ್ಲಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳ ಅನುಗುಣವಾಗಿ ಪ್ರಶ್ನೆಪತ್ರಿಕೆಗಳನ್ನು ರೂಪಿಸಿ ಪರೀಕ್ಷೆ ನಡೆಸಲಿದೆ.

ಮಾಹಿತಿಗೆ: 9513657041, 7676917777 ಸಂಪರ್ಕಿಸಿ.

ಕೋರ್ಸ್	ಅವಧಿ
ನೀಟ್ (ಪಿಸಿಎಂಬಿ)	45 ದಿನಗಳು
ಸಿಇಟಿ (ಪಿಸಿಎಂ–ಎಂಜಿನಿಯರಿಂಗ್)	30 ದಿನಗಳು
ಸಿಇಟಿ ಪಿಸಿಬಿ (ಎಜಿ ಆ್ಯಂಡ್ ವೆಟರ್ನರಿ)	30 ದಿನಗಳು
ಸಿಇಟಿ ಪಿಸಿಎಂಬಿ (ಎರಡೂ)	30 ದಿನಗಳು

ವಿದ್ಯಾರ್ಥಿ ವೇತನ ಕೈಪಿಡಿ

ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್ ಪ್ರೋಗ್ರಾಂ ಫಾರ್ ಓವರ್‌ಸೀಸ್

ಎಸ್‌ಬಿಐ ಫೌಂಡೇಷನ್‌ನಡಿ ಬರುವ ಒಂದು ಉಪಕ್ರಮವಾಗಿದ್ದು, ಕಡಿಮೆ ಆದಾಯವಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುವ ಗುರಿ ಹೊಂದಿದೆ.

ಅರ್ಹತೆ: ವಿದೇಶದಲ್ಲಿ ವಿಶ್ವವಿದ್ಯಾಲಯ ಅಥವಾ ಕಾಲೇಜಿನಲ್ಲಿ ಸ್ನಾತಕೋತ್ತರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದ ಕೋರ್ಸ್‌ಗೆ ದಾಖಲಾಗಿರಬೇಕು. ಎಸ್‌ಸಿ ಮತ್ತು ಎಸ್‌ಟಿ ವರ್ಗದ ವಿದ್ಯಾರ್ಥಿಗಳಿಗೆ ಆದ್ಯತೆ. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯ ₹6,00,000 ಇರಬೇಕು.

ಆರ್ಥಿಕ ನೆರವು: ₹ 20,00,000ದವರೆಗೆ ಅಥವಾ ಕೋರ್ಸ್-ಸಂಬಂಧಿತ ಖರ್ಚುಗಳ ಶೇ 50 (ಯಾವುದು ಕಡಿಮೆಯೋ ಅದು).

ಅರ್ಜಿ ಸಲ್ಲಿಸಲು ಕೊನೆ ದಿನ: 31-03-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/praja/SBIFS12

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

31) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ ....

ಎ) ಸಾರ್ವಜನಿಕ ಹಣಕಾಸು ಬಿ) ಸಾರ್ವಜನಿಕ ವೆಚ್ಚಗಳು
ಸಿ) ಯೋಜನಾ ವೆಚ್ಚಗಳು ಡಿ) ಆಯವ್ಯಯ

ಉತ್ತರ :– (ಡಿ) ಆಯವ್ಯಯ

2) ನೀತಿ ಆಯೋಗದ ಎಲ್ಲಾ ಚಟುವಟಿಕೆಗಳನ್ನು ನಾಲ್ಕು ಮುಖ್ಯ ವಿಭಾಗಗಳಲ್ಲಿ ನೋಡಬಹುದು. ಅವುಗಳನ್ನು ಗಮನಿಸಿ.

1) ನೀತಿ ಮತ್ತು ಕಾರ್ಯಕ್ರಮ ಚೌಕಟ್ಟು
2) ಸಹಕಾರಿ ಒಕ್ಕೂಟ ವ್ಯವಸ್ಥೆ
3) ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
4) ಚಿಂತಕರ ಕೂಟ ಮತ್ತು ಜ್ಞಾನ ಮತ್ತು ನಾವಿನ್ಯ ಸಮೂಹ

ಇವುಗಳಲ್ಲಿ ಯಾವುದಾದರೂ ತಪ್ಪಾಗಿದೆಯೇ ಗುರುತಿಸಿ.?

ಉತ್ತರ ಸಂಕೇತಗಳು

ಎ) 1 ಮಾತ್ರ ತಪ್ಪಾಗಿದೆ ಬಿ) 2 ಮತ್ತು 3 ಮಾತ್ರ ತಪ್ಪಾಗಿದೆ
ಸಿ) 3 ಮತ್ತು 4 ಮಾತ್ರ ತಪ್ಪಾಗಿದೆ
ಡಿ) ಯಾವೂದೂ ತಪ್ಪಾಗಿಲ್ಲ.

ಉತ್ತರ:– (ಡಿ) ಯಾವೂದೂ ತಪ್ಪಾಗಿಲ್ಲ.

3) ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯಲ್ಲಿ ಸರ್ಕಾರವು ಮರಗಳನ್ನು ಕಡಿಯಲು ಅನುಮತಿ ನೀಡಿತ್ತು. ಇದರಿಂದ ಅರಣ್ಯ ನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಜನರು ಮರಗಳನ್ನು ಅಪ್ಪಿ ಹಿಡಿದು ಕಡಿಯದಂತೆ ತಡೆದರು. ಈ ಚಳವಳಿಯು 1973ರಲ್ಲಿ ಸುಂದರ್ ಲಾಲ್ ಬಹುಗುಣ ಹಾಗೂ .... ಅವರ ನೇತೃತ್ವದಲ್ಲಿ ನಡೆಯಿತು

ಎ) ಚಂಡಿಪ್ರಸಾದ್ ಭಟ್ ಬಿ) ಇಳಾ ಭಟ್
ಸಿ) ರಾಮಚಂದ್ರ ಗುಹಾ ಡಿ) ಈಶಾ ಫೌಂಡೇಶನ್

ಉತ್ತರ:– (ಎ) ಚಂಡಿಪ್ರಸಾದ್ ಭಟ್

4) ಬ್ಯಾಂಕ್‌ಗಳ ಬ್ಯಾಂಕು. ....

ಎ) ಮೈಸೂರು ಬ್ಯಾಂಕ್ ಬಿ) ಭೂ ಬ್ಯಾಂಕು
ಸಿ) ಸಹಕಾರಿ ಬ್ಯಾಂಕು ಡಿ) ರಿಸರ್ವ ಬ್ಯಾಂಕ್

ಉತ್ತರ:– (ಡಿ) ರಿಸರ್ವ್ ಬ್ಯಾಂಕ್

5) ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ ; ಉತ್ತರ ಪ್ರದೇಶದಲ್ಲಿ ಆಂಡೀಸ್ ; : ಕರ್ನಾಟಕದಲ್ಲಿ ಕಾಫಿ ತುಂತುರು : ಕೇರಳದಲ್ಲಿ ....

ಎ) ಚಹಾ ತೋಟ ಬಿ) ಮಾವಿನ ಹೊಯ್ಲು
ಸಿ) ಉಪ್ಪಿನ ಹೊಯ್ಲು ಡಿ) ಅಕ್ಕಿಯ ಕೊದಲು

ಉತ್ತರ:–(ಬಿ) ಕೇರಳದಲ್ಲಿ 'ಮಾವಿನ ಹೊಯ್ಲು'

6) 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ'(Planned Economy for India) ಎಂಬ ಪುಸ್ತಕ ಯಾರಿಗೆ ಸಂಬಂಧಿಸಿದೆ.?

ಎ) ಮಹಾತ್ಮ ಗಾಂಧಿ ಬಿ) ಜವಾಹರ ಲಾಲ್ ನೆಹರು
ಸಿ) ಸರ್ ಎಂ ವಿಶ್ವೇಶ್ವರಯ್ಯ ಡಿ) ಸರೋಜಿನಿ ನಾಯ್ಡು

ಉತ್ತರ:– (ಸಿ) ಸರ್ ಎಂ ವಿಶ್ವೇಶ್ವರಯ್ಯ

5) 'ಬಿಳಿ ಕ್ರಾಂತಿಯ ಪಿತಾಮಹ' ಎಂದು ಖ್ಯಾತರಾಗಿರುವವರು….

ಎ) ಧೀರೂಬಾಯಿ ಅಂಬಾನಿ ಬಿ) ವರ್ಗೀಸ್ ಕುರಿಯನ್
ಸಿ) ಅಜೀಂ ಪ್ರೇಮ್‌ಜಿ ಡಿ) ಕಿರಣ್ ಮಂಜುಂದಾರ್ ಷಾ.

ಉತ್ತರ :– (ಬಿ) ವರ್ಗೀಸ್ ಕುರಿಯನ್

6) ವಿಶ್ವವ್ಯಾಪಾರ ಸಂಘಟನೆ W.T.Oಯ ಕೇಂದ್ರ ಕಚೇರಿ ಇರುವುದು.............

ಎ) ಜಿನೇವಾ ಬಿ) ಪ್ಯಾರಿಸ್
ಸಿ) ರೋಮ್ ಡಿ) ನವದೆಹಲಿ

ಉತ್ತರ: (ಎ) ಜಿನೇವಾ

32) ಇವರು ಯಾರು? ಯಾಕೆ ಪ್ರಸಿದ್ಧರು?



ಉತ್ತರ:– ಸ್ವಾಮಿ ವಿವೇಕಾನಂದ,
ಇವರು ಚಿಕಾಗೋ ಸರ್ವಧರ್ಮ ಸಮ್ಮೇಲನದಲ್ಲಿ ಭಾರತದ ಧರ್ಮ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದರು. ರಾಮಕೃಷ್ಣಾಶ್ರಮವನ್ನು ಸ್ಥಾಪಿಸಿದರು

33) ಸುರಪುರದ ರಾಜನನ್ನು(ವೆಂಕಟಪ್ಪನನ್ನು) ಬ್ರಿಟಿಷರು ಸಂಶಯದಿಂದ ನೋಡಲು ಕಾರಣ ಏನು?

ಉತ್ತರ;– 1857ರಲ್ಲಿ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡು ಬಂತು. ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು.

34) ಯಾವುದನ್ನು ವ್ಯವಸಾಯ ಅಥವಾ ಕೃಷಿ ಎನ್ನುವರು? ಅದು ಏನನ್ನೆಲ್ಲಾ ಒಳಗೊಂಡಿದೆ?

ಉತ್ತರ:– ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು 'ವ್ಯವಸಾಯ ಅಥವಾ ಕೃಷಿ' ಎನ್ನುವರು. ಇಂದು ಕೃಷಿಯು ಪಶು ಪಾಲನೆ, ಕೋಳಿ ಸಾಕಣೆ ಮತ್ತು ಜೇನು ಸಾಕಣೆಗಳನ್ನೂ ಒಳಗೊಂಡಿದೆ.

35) ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಮುಖ್ಯ ಅಕ್ಷಾಂಶ ಯಾವುದು?

ಉತ್ತರ : 23 ½⁰ ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ) ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋಗುತ್ತದೆ.

36) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.

ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

37) ಯಾವ ಅವಧಿಯನ್ನು ಮಂದಗಾಮಿ ಯುಗ ಎನ್ನುತ್ತಾರೆ?

ಉತ್ತರ:– ಸಾಂಪ್ರಾದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿ ಯುಗ' ಎನ್ನುತ್ತಾರೆ.

38) ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?

ಉತ್ತರ.:– ಉತ್ತರದ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿವುದರಿಂದ ಈ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ.

39) ಜಯಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರನ್ನು ಹೆಸರಿಸಿ

ಉತ್ತರ:– ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಹಾಗೂ ಆರ್ಕಾಟ್ ರಾಮಸ್ವಾಮಿ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

CET MATHEMATICS

MULTIPLE CHOICE QUESTIONS

7) If $A = \begin{bmatrix} \cos\theta & -\sin\theta \\ \sin\theta & \cos\theta \end{bmatrix}$ and $A^T + A = I_2$, then

(A) $\theta = n\pi, n \in Z$ (B) $\theta = (2n+1)\frac{\pi}{2}, n \in Z$

(C) $\theta = 2n\pi \pm \frac{\pi}{3}, n \in Z$ (D) None of these

Ans: (C) $\theta = 2n\pi \pm \frac{\pi}{3}, n \in Z$

Expln :– $A = \begin{bmatrix} \cos\theta & -\sin\theta \\ \sin\theta & \cos\theta \end{bmatrix}$, $A^T = \begin{bmatrix} \cos\theta & \sin\theta \\ -\sin\theta & \cos\theta \end{bmatrix}$

$A^T + A = \begin{bmatrix} 2\cos\theta & 0 \\ 0 & 2\cos\theta \end{bmatrix} = \begin{bmatrix} 1 & 0 \\ 0 & 1 \end{bmatrix}$ (given)

$\therefore 2\cos\theta = 1 \Rightarrow \cos\theta = \frac{1}{2}$ i.e., $\cos\theta = \cos\frac{\pi}{3}$

$\therefore \theta = 2n\pi \pm \frac{\pi}{3}$.

8) The real value of 'α' for which 1 - i sin α / 1 + 2 isin α is purely real is:

(A) (n + 1) π/2, n ∈ N
(B) (2n + 1) π / 2, n ∈ N
(C) nπ, n ∈ N
(D) (2n - 1) π / 2, n ∈ N

Ans:- (C) nπ, n ∈ N

9) If $y = 2x^{3x}$, than $\frac{y}{dx}$ at $x = 1$ is

A)2 **(B) 6**
(C) 3 **(D) 1**

Ans. B

Sol.

$\log y = \log(2.x^{3x})$

$= \log 2 + 3x \log x$

$\frac{1}{y}\frac{dy}{dx} = 3\left[x\frac{1}{x} + \log x\right]$

$\frac{dy}{dx} = 2x^{3x}.3(1 + \log x)$

$\left.\frac{dy}{dx}\right|_{x=1} = 6$

10) If A and B are two matrices such that AB=A and BA = B, then B^2 is equal to...............

(A) B (B) A
(C) Zero matrix (D) 1

Ans: (A) B

Expln:- **Consider BA = B.**
$BAB = B^2 \therefore BA = B^2 \Rightarrow B = B^2$

11) Given 5 line segments of lengths 2, 3, 4, 5, 6 units. Then the number of triangles that can be formed by joining these segments is...................

(A) $^5C_3 - 3$ (B) $^5C_3$
(C) $^5C_3 - 1$ (D) $^5C_3 - 2$

Ans: (A) $^5C_3 - 3$

Expln:-
The line segments 2 and 4 added gives 6 units.
That of 2 and 3 added gives 5 units.
Thus, that of 4 units is not considered,
i.e., there are 3 lines.
The no. of triangles formed is $5C_3 - 3$.

12) For the function $f(x) = x^3 - 6x^2 + 12x - 3$; x=2 is

(A) a point of minimum
(B) a point of inflexion
(C) not a critical point
(D) a point of maximum

Ans. B

Expln:-

$f'(x) = 3x^2 - 12x + 12$
$f''(x) = 6x - 12$
$f''(2) = 0$
$f'''(2) \neq 0$

13) How many numbers greater than 10,00,000 be formed from 2, 3, 0, 3, 4, 2, 3?

(A) 420 **(B) 360**
(C) 400 **(D) 300**

Ans: (B) 360

Expln:- Any number greater than 10,00,000 will contain all seven digits.

We have to arrange 7 digits out of which 2 occurs twice and 3 occurs thrice. The rest are distinct.

$\therefore$ Number of such arrangements $= \frac{7!}{2! \times 3!}$
$= 420.$

These arrangements will also include those which contain 0 in the first place.

Keeping '0' in first place, remaining 6 digits out of which 2 occurs twice, 3 occurs thrice and rest can be arranged in $\frac{6!}{2! \times 3!} = 60$ ways.

$\therefore$ Required number of arrangements $= 420 - 60$
$= 360.$

14)

$\frac{d}{dx}\left[\cos^2\left(\cot^{-1}\sqrt{\frac{2+x}{2-x}}\right)\right]$ is

A) $-\frac{3}{4}$ B) $-\frac{1}{2}$

C) $\frac{1}{2}$ D) $\frac{1}{4}$

Ans:- D

Expln:-

$x = 2\cos\theta$

$\frac{2+x}{2-x} = \frac{2(1+\cos\theta)}{2(1-\cos\theta)} = \cot^2\frac{\theta}{2}$

$\therefore \frac{d}{dx}\frac{1}{2}(1+\cos\theta) = \frac{1}{2}\frac{d}{dx}\left(1+\frac{x}{2}\right)$

$= \frac{1}{4}$

15) An urn contains 9 balls, 2 of which are white, 3 blue and 4 black. 3 balls are drawn at random from the urn. The chance that 2 balls will be of the same colour and the third of a different colour is..............................

(A) $\frac{45}{84}$ (B) $\frac{55}{84}$

(Contd....)

ಷರತ್ತುಗಳ ಉಲ್ಲಂಘಿಸಿದ ದೊಡ್ಡಣವರ ಬ್ರದರ್ಸ್ ಕಂಪನಿ • 12.91 ಹೆಕ್ಟೇರ್‌ನಲ್ಲಿ ಗಣಿಗಾರಿಕೆ ಪ್ರಸ್ತಾವ ತಿರಸ್ಕಾರ

ಒತ್ತುವರಿ: 'ದೊಡ್ಡ' ಗಣಿಗೆ ಕೇಂದ್ರ ಅಂಕುಶ

• ಮಂಜುನಾಥ ಹೆಬ್ಬಾರ್

ನವದೆಹಲಿ: ಷರತ್ತುಗಳ ಉಲ್ಲಂಘನೆ ಹಾಗೂ ಅರಣ್ಯ ಒತ್ತುವರಿ ಮಾಡಿಕೊಂಡು ಗಣಿಗಾರಿಕೆ ನಡೆಸಿದ ಕಾರಣಕ್ಕೆ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಹಿರೇಮಾಗಿಯಲ್ಲಿ 30.33 ಹೆಕ್ಟೇರ್ ಅರಣ್ಯದಲ್ಲಿ ಗಣಿಗಾರಿಕೆ ನಡೆಸಲು 'ಮೆ.ದೊಡ್ಡಣವರ ಬ್ರದರ್ಸ್' ಕಂಪನಿಗೆ ನೀಡಿದ್ದ ಅನುಮತಿಯನ್ನು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಸಚಿವಾಲಯ ತಡೆ ಹಿಡಿದಿದೆ. ಹೊಸದಾಗಿ 12.97 ಹೆಕ್ಟೇರ್ ಅರಣ್ಯದಲ್ಲಿ ಗಣಿಗಾರಿಕೆ ನಡೆಸುವ ಪ್ರಸ್ತಾವವನ್ನೂ ತಿರಸ್ಕರಿಸಿದೆ.

ಪರಿಸರ ಸಚಿವಾಲಯದ ಡಿಐಜಿಪಿ ಪ್ರಣಿತಾ ಪೌಲ್ ಅವರು 2025ರ ಫೆಬ್ರುವರಿ 6ರಂದು ಗಣಿಗಾರಿಕೆ ನಡೆಸಿರುವ ಸ್ಥಳದ ಪರಿಶೀಲನೆ ನಡೆಸಿ ಕಂಪನಿ ಎಸಗಿರುವ ಲೋಪಗಳನ್ನು ಪತ್ತೆ ಹಚ್ಚಿದ್ದಾರೆ. ಕೇಂದ್ರ ಅರಣ್ಯ ಸಚಿವಾಲಯದ ಅನುಮೋದನೆ ಪಡೆಯದೆಯೇ 10 ವರ್ಷ (2030ರ ವರೆಗೆ) ಗಣಿ ಗುತ್ತಿಗೆ ಅವಧಿ ವಿಸ್ತರಿಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅರಣ್ಯ ಸಚಿವಾಲಯ ವಿಧಿಸಿರುವ ಷರತ್ತುಗಳನ್ನು ಪಾಲಿಸುವ ತನಕ 30.33 ಹೆಕ್ಟೇರ್‌ನ ಗಣಿ ಗುತ್ತಿಗೆಗೆ (ಗುತ್ತಿಗೆ ಸಂಖ್ಯೆ 2649) ತಡೆ ನೀಡುವಂತೆ ಶಿಫಾರಸು ಮಾಡಿದ್ದಾರೆ. ಗಣಿಗಾರಿಕೆ ನಡೆಸಿರುವ 39.20 ಹೆಕ್ಟೇರ್‌ನಲ್ಲಿ (ಗುತ್ತಿಗೆ ಸಂಖ್ಯೆ 2394) ಅರಣ್ಯ ಇಲಾಖೆಯ ಸಹಕಾರದಲ್ಲಿ ಈ ಕಂಪನಿಯು ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಶಿಫಾರಸು ಮಾಡಿದ್ದಾರೆ. ಅವರ ವರದಿಯ ಆಧಾರದಲ್ಲಿ ಗಣಿ ಗುತ್ತಿಗೆಗೆ ಸಚಿವಾಲಯ ತಡೆ ನೀಡಿದೆ.

ಕೇಂದ್ರದ ಅನುಮೋದನೆ ಪಡೆಯದೇ ಗುತ್ತಿಗೆ ನವೀಕರಣ




- ಹಿರೇಮಾಗಿ, ಐಹೊಳೆ ಹಾಗೂ ಸೂಳೇಭಾವಿಯ ಸರ್ವೆ ಸಂಖ್ಯೆ 65, 367 ಹಾಗೂ 116ರಲ್ಲಿ 43.30 ಹೆಕ್ಟೇರ್ ಅರಣ್ಯದಲ್ಲಿ 20 ವರ್ಷ ಗಣಿಗಾರಿಕೆ ನಡೆಸಲು ಕರ್ನಾಟಕ ಸರ್ಕಾರವು 1980ರಲ್ಲಿ ಗಣಿ ಗುತ್ತಿಗೆ ನೀಡಿತ್ತು. ಗುತ್ತಿಗೆ ಅವಧಿ 2020ರಲ್ಲಿ ಮುಕ್ತಾಯಗೊಂಡಿತ್ತು. ಈ ಅವಧಿಯಲ್ಲಿ 30.33 ಹೆಕ್ಟೇರ್‌ನಲ್ಲಿ ಅದಿರು ಹೊರ ತೆಗೆಯಲಾಗಿತ್ತು. 12.97 ಹೆಕ್ಟೇರ್ ಅರಣ್ಯ ಬಳಸಿರಲಿಲ್ಲ.
- ಈ ಗಣಿ ಗುತ್ತಿಗೆಯ ನವೀಕರಣಕ್ಕೆ ಕರ್ನಾಟಕ ಸರ್ಕಾರವು ಕೇಂದ್ರ ಪರಿಸರ ಸಚಿವಾಲಯಕ್ಕೆ 2001ರಲ್ಲಿ ಪ್ರಸ್ತಾವ ಸಲ್ಲಿಸಿತ್ತು.
- 30.33 ಹೆಕ್ಟೇರ್‌ನಲ್ಲಿ 10 ವರ್ಷ ಗಣಿ ಗುತ್ತಿಗೆ ನವೀಕರಣಕ್ಕೆ ಸಚಿವಾಲಯ ಅನುಮೋದನೆ ನೀಡಿತ್ತು. ಈ ಗುತ್ತಿಗೆ ಅವಧಿ 2011ರ ಜೂನ್‌ನಲ್ಲಿ ಕೊನೆಗೊಂಡಿತ್ತು.
- 12.97 ಹೆಕ್ಟೇರ್‌ನಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ರಾಜ್ಯ ಸರ್ಕಾರವು 2011ರಲ್ಲಿ ಪ್ರಸ್ತಾವ ಸಲ್ಲಿಸಿತ್ತು.
- ಪರಿಸರ ಸಚಿವಾಲಯದ ಮಾರ್ಗಸೂಚಿ ಅನ್ವಯ 31.06 ಹೆಕ್ಟೇರ್‌ನ ಅರಣ್ಯ ತಿರುವಳಿ ಅವಧಿಯನ್ನು 2020ರ ಜೂನ್ ವರೆಗೆ ವಿಸ್ತರಿಸಲಾಗಿದೆ ಎಂದು ರಾಜ್ಯ ಸರ್ಕಾರವು ಸಚಿವಾಲಯಕ್ಕೆ 2015ರಲ್ಲಿ ಮಾಹಿತಿ ನೀಡಿತ್ತು.
- ಷರತ್ತುಗಳನ್ನು ಉಲ್ಲಂಘಿಸಿದ ಕಾರಣಕ್ಕೆ ಗಣಿ ಗುತ್ತಿಗೆ ನವೀಕರಣವನ್ನು ವಾಪಸ್ ಪಡೆಯಲಾಗಿದೆ ಎಂದು ರಾಜ್ಯ ಸರ್ಕಾರವು 2016ರ ಜನವರಿಯಲ್ಲಿ ಸಚಿವಾಲಯಕ್ಕೆ ಪತ್ರ ಬರೆದಿತ್ತು.
- ಆದಾಗ್ಯೂ, 30.33 ಹೆಕ್ಟೇರ್‌ನಲ್ಲಿ ಗಣಿಗಾರಿಕೆ ನಡೆಸಲು 2030ರ ಜೂನ್ ವರೆಗೆ ಒಪ್ಪಿಗೆ ನೀಡಲಾಗಿದೆ ಎಂದು ರಾಜ್ಯ ಸರ್ಕಾರವು 2020ರ ಜುಲೈನಲ್ಲಿ ರಾಜ್ಯ ಸರ್ಕಾರವು ಕೇಂದ್ರಕ್ಕೆ ತಿಳಿಸಿತ್ತು. ಆದರೆ, ಕೇಂದ್ರ ಪರಿಸರ ಸಚಿವಾಲಯದಿಂದ ಇದಕ್ಕೆ ಅನುಮೋದನೆ ಪಡೆದಿರಲಿಲ್ಲ. ಜತೆಗೆ, ಷರತ್ತುಗಳನ್ನು ಉಲ್ಲಂಘಿಸಿದ ಗಣಿ ಕಂಪನಿ ವಿರುದ್ಧ ಕೈಗೊಂಡ ಕ್ರಮಗಳ ವರದಿಯನ್ನೂ ರಾಜ್ಯ ಸರ್ಕಾರ ಸಲ್ಲಿಸಿಲ್ಲ.
- 12.97 ಹೆಕ್ಟೇರ್‌ನಲ್ಲಿ ಗಣಿಗಾರಿಕೆ ಹಾಗೂ 0.97 ಹೆಕ್ಟೇರ್‌ನಲ್ಲಿ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅರಣ್ಯ ಅನುಮೋದನೆ ನೀಡುವಂತೆ ರಾಜ್ಯವು 2024ರ ನವೆಂಬರ್ 30ರಂದು ಪ್ರಸ್ತಾವ ಸಲ್ಲಿಸಿತ್ತು.

ಆಕ್ಷೇಪಗಳೇನು?

- ಗುತ್ತಿಗೆ ಪ್ರದೇಶದ ಜತೆಗೆ ಒತ್ತುವರಿ ಮಾಡಿಕೊಂಡು 5.13 ಹೆಕ್ಟೇರ್ ಅರಣ್ಯ ಬಳಕೆ.
- ಗಣಿ ಬಾಧಿತ ಪ್ರದೇಶದ ಪುನರುಜ್ಜೀವನ ಯೋಜನೆಗಳನ್ನು ಕೈಗೆತ್ತಿಕೊಂಡಿಲ್ಲ.
- ಮಣ್ಣು ನೀರಿನ ಸಂರಕ್ಷಣೆಗೆ ಕ್ರಮ ಕೈಗೊಂಡಿಲ್ಲ.
- ಗಿಡಗಳನ್ನು ನೆಡುವ ಕಾರ್ಯ ಆಗಿಲ್ಲ ಹಾಗೂ ಅಂತರ್ಜಲ ಸಂರಕ್ಷಣೆಗೆ ಯೋಜನೆಗಳನ್ನು ರೂಪಿಸಿಲ್ಲ. ಗಣಿಗಾರಿಕೆ ಪ್ರದೇಶದಲ್ಲಿ ದೂಳು ನಿಯಂತ್ರಣಕ್ಕೆ ಯಾವುದೇ ಉಪಕ್ರಮಗಳಿಲ್ಲ.
- ಗುತ್ತಿಗೆ ಪ್ರದೇಶದಲ್ಲೇ ಅತಿಥಿಗೃಹ ನಿರ್ಮಿಸಲಾಗಿದೆ.
- ಗಡಿ ಗುರುತಿಸುವ ಕಂಬಗಳು ನಾಪತ್ತೆಯಾಗಿವೆ.
- 30.33 ಹೆಕ್ಟೇರ್ ಅರಣ್ಯ ಬಳಸಿದ್ದಕ್ಕೆ ಪರಿಹಾರಾತ್ಮಕ ಅರಣ್ಯೀಕರಣ ನಡೆಸಿಲ್ಲ.
- 12.97 ಹೆಕ್ಟೇರ್ ಅರಣ್ಯ ಬಳಕೆ ವಿಷಯದಲ್ಲೂ ಪರಿಹಾರಾತ್ಮಕ ಅರಣ್ಯೀಕರಣದ ಪ್ರಸ್ತಾವದಲ್ಲಿ ಗೊಂದಲಗಳಿವೆ.

ಷರತ್ತು ಉಲ್ಲಂಘಿಸಿ 11.82 ಲಕ್ಷ ಟನ್ ಅದಿರು ಹೊರತೆಗೆದಿದ್ದ ಕಂಪನಿ

ದೊಡ್ಡಣವರ ಬ್ರದರ್ಸ್ ಕಂಪನಿಯು ಕಡ್ಡಾಯ ಅರಣ್ಯೀಕರಣಕ್ಕೆ ಜಾಗ ನೀಡದೆ ಹಾಗೂ ಅದರ ಶುಲ್ಕವನ್ನು ಪಾವತಿಸದೆ 2019ರಿಂದ ಇಲ್ಲಿಯವರೆಗೆ 11.82 ಲಕ್ಷ ಟನ್ ಅದಿರು ಹೊರತೆಗೆದಿದೆ. ಅರಣ್ಯ ತೀರುವಳಿ ಷರತ್ತುಗಳನ್ನು ಪಾಲಿಸದೆ ಎಷ್ಟು ಟನ್ ಅದಿರು ಹೊರ ತೆಗೆಯಲಾಗಿದೆ ಎಂಬುದರ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸೂಚಿಸಿದ್ದರು. ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು (ಅರಣ್ಯ ಸಂರಕ್ಷಣೆ) ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ 2024ರ ನವೆಂಬರ್ 26ರಂದು ವರದಿ ಸಲ್ಲಿಸಿದ್ದಾರೆ.



5.13 ಹೆಕ್ಟೇರ್‌ನಲ್ಲಿ ಅಕ್ರಮ ಗಣಿಗಾರಿಕೆ

ಈ ಕಂಪನಿಯು ಮಂಜೂರಾದ ಗಣಿ ಗುತ್ತಿಗೆ ಪ್ರದೇಶದ ಪಕ್ಕದ ಅರಣ್ಯವನ್ನು ಒತ್ತುವರಿ ಮಾಡಿಕೊಂಡು ಗಣಿಗಾರಿಕೆ ನಡೆಸಿತ್ತು. 5.13 ಹೆಕ್ಟೇರ್‌ನಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡಿತ್ತು. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಕಂಪನಿಯು ದಂಡ ಪಾವತಿಸಬೇಕು ಎಂದು ಅರಣ್ಯ ಇಲಾಖೆ ಸೂಚಿಸಿತ್ತು. ಅರಣ್ಯ ಇಲಾಖೆ ಅಧಿಕಾರಿಗಳು ಜಂಟಿ ತಪಾಸಣೆ ನಡೆಸಿ ಕಂಪನಿಯು ₹6.7 ಕೋಟಿ ದಂಡ ಪಾವತಿಸಬೇಕು ಎಂದು ವರದಿ ಸಲ್ಲಿಸಿದ್ದರು. ಕೇಂದ್ರ ಅರಣ್ಯ ಸಚಿವಾಲಯಕ್ಕೆ ದಂಡ ಪಾವತಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳು 2023ರಲ್ಲಿ ನೆನಪೋಲೆಗಳನ್ನು ಬರೆದಿದ್ದರು. ಅರಣ್ಯ ಸಂರಕ್ಷಣಾ ಕಾಯ್ದೆ 1980 ಉಲ್ಲಂಘಿಸಿ 5.13 ಹೆಕ್ಟೇರ್‌ನಲ್ಲಿ ಅಕ್ರಮ ಗಣಿಗಾರಿಕೆ ನಡೆಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅಕ್ಕಿ ಕಾಳುಗಳ ಮೇಲೆ ರಾಷ್ಟ್ರಗೀತೆ ಬರೆದು ದಾಖಲೆ


ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಪಟ್ಟಣದ ಯುವತಿಯೊಬ್ಬರು 32 ನಿಮಿಷ 20 ಸೆಕೆಂಡುಗಳಲ್ಲಿ 133 ಅಕ್ಕಿ ಕಾಳುಗಳ ಮೇಲೆ ಕನ್ನಡದಲ್ಲಿ ರಾಷ್ಟ್ರ ಗೀತೆ ಬರೆದು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆ ನಿರ್ಮಿಸಿದ್ದಾರೆ.

ಸ್ಥಳೀಯ ಪುರಸಭೆ ವ್ಯಾಪ್ತಿಯ ಹುಲಿಗುಡ್ಡ ನಿವಾಸಿ ಐಶ್ವರ್ಯ ಮುನಿಸ್ವಾಮಿ ದಾಖಲೆ ಬರೆದ ಯುವತಿ. ಪಟ್ಟಣದ ಸಂಜೀವ್ ಬಿ.ಇಡಿ ಕಾಲೇಜಿನಲ್ಲಿ ಓದುತ್ತಿದ್ದಾರೆ.

ಕೆಲವು ತಿಂಗಳು ಹಿಂದೆ ಅವಲಕ್ಕಿ ಮೇಲೆ ರಾಷ್ಟ್ರಗೀತೆ ಬರೆದು ದಾಖಲೆ ಮಾಡಿದ್ದನ್ನು ಸಾಮಾಜಿಕ ಜಾಲತಾಣದಲ್ಲಿ ಐಶ್ವರ್ಯ ನೋಡಿದ್ದರು. ಅದರಿಂದ ಪ್ರೇರಿತರಾಗಿ ಅಕ್ಕಿ ಕಾಳುಗಳ ಮೇಲೆ ರಾಷ್ಟ್ರಗೀತೆ ಬರೆದು ಸಾಧನೆ ಮಾಡಿದ್ದಾರೆ. ಯಾವುದೇ ತರಬೇತಿ ಇಲ್ಲದೇ ಈ ಸಾಧನೆ ತೋರಿದ್ದಾರೆ.

ಅಕ್ಕಿ ಕಾಳುಗಳ ಮೇಲೆ ಕನ್ನಡದಲ್ಲಿ ರಾಷ್ಟ್ರಗೀತೆ ಬರೆದ ವಿಡಿಯೊವನ್ನು ಜನವರಿಯಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಗೆ ಕಳಿಸಿದ್ದರು. ಆ ಸಂಸ್ಥೆಯವರು ಪರಿಶೀಲನೆ ನಡೆಸಿ ಫೆಬ್ರುವರಿ 5ರಂದು ಅಧಿಕೃತವಾಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಿಸಿಕೊಂಡು, ಐಶ್ವರ್ಯ ಅವರಿಗೆ ಪದಕ ಹಾಗೂ ಪ್ರಮಾಣ ಪತ್ರ ಕಳಿಸಿದ್ದಾರೆ. ಐಶ್ವರ್ಯ ಸಾಧನೆಗೆ ತಾಲ್ಲೂಕಿನ ಜನರಿಂದ ಮೆಚ್ಚುಗೆ ವ್ಯಕ್ತವಾಗಿದೆ.



ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಪದಕ ಹಾಗೂ ಪ್ರಮಾಣ ಪತ್ರದೊಂದಿಗೆ ಐಶ್ವರ್ಯ



'ಪ್ರಜಾವಾಣಿ' ಹಿರಿಯ ಉಪ ಸಂಪಾದಕಿ ಮಂಜುಶ್ರೀ ಎಂ. ಕಡಕೋಳ, ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಅರೆಕಾಲಿಕ ವರದಿಗಾರ ಟಿ. ನಾಗೇಂದ್ರ ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ದತ್ತಿ ಪ್ರಶಸ್ತಿಯನ್ನು ಕೊಪ್ಪಳದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸ್ವೀಕರಿಸಿದರು



ಪ್ರತಿಭಟನೆ ಕೇಂದ್ರ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ ವಕ್ಫ್ ತಿದ್ದುಪಡಿ ಮಸೂದೆ ವಿರೋಧಿಸಿ ಕರ್ನಾಟಕ ಉಲಮ ಒಕ್ಕೂಟದ ಸದಸ್ಯರು ಮಂಗಳೂರಿನ ಗಡಿಯಾರ ಗೋಪುರದ ಬಳಿ ಪ್ರತಿಭಟನೆ ಮಾಡಿದರು ಪ್ರಜಾವಾಣಿ ಚಿತ್ರ

ಸೌಜನ್ಯಾ ಪರ ಹೋರಾಟ: ಸಭೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಕ ಮಹಾದೇವಿ ಸಭಾಂಗಣದಲ್ಲಿ ಸಭೆ ನಡೆಸಲು ನೀಡಿದ್ದ ಅನುಮತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಕೊನೇ ಕ್ಷಣದಲ್ಲಿ ಹಿಂದಕ್ಕೆ ಪಡೆದ ಕಾರಣ ಭಾನುವಾರ ನಡೆಸಲು ಉದ್ದೇಶಿಸಿದ್ದ ಸೌಜನ್ಯಾ ಪರ ಸಾಹಿತಿ, ಚಿಂತಕ, ಪತ್ರಕರ್ತರು, ಹೋರಾಟಗಾರರ ಸಮಾಲೋಚನಾ ಸಭೆಯನ್ನು ರದ್ದುಗೊಳಿಸಲಾಯಿತು.

ಸೌಜನ್ಯಾ ಪರ ಮುಂದಿನ ಹೋರಾಟದ ಬಗ್ಗೆ ಚರ್ಚಿಸಲು ಸಮಾನ ಮನಸ್ಕರ ಸಭೆ ಭಾನುವಾರ ನಿಗದಿಯಾಗಿತ್ತು. ಅಕ್ಕಮಹಾದೇವಿ ಸಭಾಂಗಣವನ್ನು ಬಾಡಿಗೆಗೆ ಪಡೆದಿದ್ದರು. 'ಸಭೆ ನಡೆಸಲು ಹೇಗೆ ಅನುಮತಿ ನೀಡಿದ್ದೀರಿ?' ಎಂದು ವಕೀಲರ ಮೂಲಕ ಶನಿವಾರ ರಾತ್ರಿ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತ ಮಂಡಳಿಗೆ ನೋಟಿಸ್ ತಲುಪಿಸಿದ್ದರಿಂದ ಅವರು ಅನುಮತಿ ಹಿಂಪಡೆದುಕೊಂಡರು.

'ಊಳಿಗಮಾನ್ಯದ ಪಳಿಯುಳಿಕೆಗಳು ಸಭೆಗೆ ತಾತ್ಕಾಲಿಕ ಅಡ್ಡಿ ಮಾಡಿರಬಹುದು. ಆದರೆ ಸಮಾನ ಮನಸ್ಕರೆಲ್ಲರೂ ಸೇರಿ ಮತ್ತೆ ಹೋರಾಟವನ್ನು ಮುಂದುವರಿಸು-ತ್ತೇವೆ' ಎಂದು ಸಂಘಟಕರಲ್ಲಿ ಒಬ್ಬರಾದ ಹರೀಶ್ ಬೈರಪ್ಪ ತಿಳಿಸಿದರು.

'ಸಭೆ ರದ್ದಾದ ಮೇಲೆ ಮುಂದೇನು ಮಾಡಬಹುದು ಎಂಬುದರ ಬಗ್ಗೆ ಚರ್ಚೆ ನಡೆಸಿದ್ದೇವೆ. ಕಾನೂನು ಹೋರಾಟದಲ್ಲಿ ಒಂದಷ್ಟು ಗೋಜಲುಗಳು, ಸಮಸ್ಯೆಗಳಿವೆ. ಅದನ್ನು ಸರಿಪಡಿಸಿಕೊಂಡು ಹೇಗೆ ಕಾನೂನು ಹೋರಾಟ ಮಾಡಬಹುದು ಎಂಬ ಬಗ್ಗೆ ಹೋರಾಟದ ಪರ ಇರುವ ವಕೀಲರೊಂದಿಗೆ ಚರ್ಚಿಸಲಾಗುವುದು. ಜನಪರ ಇರುವ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಿ ಮುಂದೆ ಸೌಜನ್ಯಾ ಪರವಾಗಿ ಹೋರಾಟದ ಮುಂದಿನ ನಡೆಯನ್ನು ತೀರ್ಮಾನಿಸಲು ನಿರ್ಧರಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಪ್ರತಿಪಕ್ಷದವರು ಸಲಹೆ ನೀಡಲಿ: ಡಿ.ಕೆ. ಶಿವಕುಮಾರ್

'ಖರ್ಗೆ ಸಲಹೆ ಪಾಲಿಸುತ್ತೇವೆ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಏನೇ ಮಾರ್ಗದರ್ಶನ ನೀಡಿದರೂ ಪಾಲಿಸುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಜಿಲ್ಲೆಯ ಮಳವಳ್ಳಿಯಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷದವರು ಕೂಡ ಒಳ್ಳೆಯ ಮಾರ್ಗದರ್ಶನ ನೀಡಲಿ. ಅದನ್ನೂ ಪಾಲಿಸುತ್ತೇವೆ. ಟೀಕಿಸಿದರೂ ಬೇಸರವಿಲ್ಲ. ನಾವು ಮಾಡುವ ಕೆಲಸ ಮಾಡುತ್ತೇವೆ. ಜನರು ಎಲ್ಲವನ್ನೂ ನೋಡುತ್ತಾರೆ' ಎಂದು ಹೇಳಿದರು.

'ರಾಜ್ಯ ಬಜೆಟ್ ವಿರುದ್ಧ ಬಿಜೆಪಿ ನಡೆಸುತ್ತಿರುವ ಪ್ರತಿಭಟನೆ ಅಸೂಯೆಯಿಂದ ಕೂಡಿದ್ದು, ಅದಕ್ಕೆ ಮದ್ದಿಲ್ಲ. ರಾಜ್ಯದ ಬಗ್ಗೆ ಗೌರವ, ಸ್ವಾಭಿಮಾನ ಇದ್ದರೆ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಲಿ. ರಾಜ್ಯಕ್ಕೆ ಬರಬೇಕಾದ ತೆರಿಗೆಯ ಪಾಲು ಕೊಡಿಸಲಿ' ಎಂದು ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

ಕೆಲಸ ಮಾಡುವವರ ಟೀಕೆಗೆ ಮಾತ್ರ ಉತ್ತರ



ಡಿ.ಕೆ. ಶಿವಕುಮಾರ್

ರಾಮನಗರ: ಜನಪರ ಅಭಿವೃದ್ಧಿ ಕೆಲಸ ಮಾಡುವವರು ಟೀಕಿಸಿದರೆ ಅಥವಾ ಸವಾಲು ಹಾಕಿದರೆ ಅದಕ್ಕೆ ಉತ್ತರಿಸಬಹುದು. ಕೆಲಸ ಮಾಡದೆಯೇ ದೂರುವವರ ಬಗ್ಗೆ ಮಾತನಾಡದಿರುವುದೇ ಒಳ್ಳೆಯದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಾಲ್ಲೂಕಿನ ಭೂಹಳ್ಳಿಯಲ್ಲಿ ಭಾನುವಾರ ಮಾಧ್ಯಮ-ದವರೊಂದಿಗೆ ಮಾತನಾಡಿದ ಅವರು, 'ಒಬ್ಬ ವ್ಯಕ್ತಿ ಹಿಂದೆ ಎಷ್ಟು ಜನರಿದ್ದಾರೆ ಎನ್ನುವುದಕ್ಕಿಂತ ಆತ ಎಷ್ಟು ಜನರ ಬದುಕು ಬದಲಾವಣೆ ಮಾಡಿದ ಎನ್ನುವುದು ಮುಖ್ಯ. ಕಾಯಕದಲ್ಲೇ ನಾವು ದೇವರನ್ನು ಕಾಣಬೇಕು. ಅಭಿವೃದ್ಧಿಯೇ ನಮ್ಮ ತಾಯಿ, ತಂದೆ. ಗ್ಯಾರಂಟಿ ಯೋಜನೆಗಳೇ ನಮ್ಮ ಬಂಧು–ಬಳಗ' ಎಂದರು.

ಮೇಕೆದಾಟು ಅಣೆಕಟ್ಟೆ ಯೋಜನೆಗೆ ರಾಜ್ಯ ಸರ್ಕಾರವು ತಮಿಳುನಾಡನ್ನು ಒಪ್ಪಿಸಿದರೆ ಹತ್ತೇ ನಿಮಿಷದಲ್ಲಿ ಕೇಂದ್ರ ಸರ್ಕಾರದಿಂದ ಅನುಮತಿ ಕೊಡಿಸುವುದಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದರು. 'ಮೇಕೆದಾಟು ಯೋಜನೆಗಾಗಿ ಕಚೇರಿ ಪ್ರಾರಂಭಿಸಲಾಗಿದೆ. ಯೋಜನೆಯಿಂದ ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎಂದು ಕಂದಾಯ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಸಮೀಕ್ಷೆ ಮಾಡುತ್ತಿದ್ದಾರೆ. ಕಾವೇರಿ ನದಿ ನೀರನ್ನು ತಂದು ಜನರ ಬದುಕು ಬದಲಾವಣೆ ಮಾಡುವ ದೊಡ್ಡ ಕೆಲಸ ನಡೆಯುತ್ತಿದೆ' ಎಂದು ತಿಳಿಸಿದರು.

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಒಗ್ಗಟ್ಟಾಗಿ ಹೋಗುತ್ತಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಒಪ್ಪಿಕೊಂಡಿದ್ದಾರೆ. ಹೀಗಾಗಿಯೇ ಒಟ್ಟಿಗೆ ಹೋಗುವಂತೆ ಸೂಚನೆ ನೀಡಿದ್ದಾರೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಸೈಬರ್ ವಂಚನೆ: ಮೊತ್ತ ಮೂರು ಪಟ್ಟು ಹೆಚ್ಚಳ

• ಕೆ.ಎಸ್.ಸುನಿಲ್

ಬೆಂಗಳೂರು: ತಂತ್ರಜ್ಞಾನ ಬೆಳೆದಂತೆ ಆನ್‌ಲೈನ್ ವಂಚನೆಯ ಜಾಲವೂ ವಿಸ್ತಾರವಾಗುತ್ತಿದ್ದು, ಅನಕ್ಷರಸ್ಥರು ಮಾತ್ರವಲ್ಲದೇ ಶಿಕ್ಷಿತರೂ ಈ ಜಾಲಕ್ಕೆ ಸಿಲುಕಿ ಹಣ ಕಳೆದುಕೊಂಡು ಸಂಕಷ್ಟ ಎದುರಿಸುತ್ತಿದ್ದಾರೆ.

ರಾಜ್ಯದಲ್ಲಿ ಕಳೆದ ವರ್ಷ (2024) 21,984 ಪ್ರಕರಣಗಳು ದಾಖಲಾಗಿದ್ದು, ₹2,120 ಕೋಟಿ ಸೈಬರ್ ಕಳ್ಳರ ಪಾಲಾಗಿದೆ. ಅಂಕಿ ಅಂಶಗಳ ಪ್ರಕಾರ ಬೆಂಗಳೂರು ಒಂದರಲ್ಲೇ 2023ರಲ್ಲಿ ₹673.03 ಕೋಟಿ ಕಳೆದುಕೊಂಡಿದ್ದ ಜನರು, 2024ರಲ್ಲಿ ₹1,998 ಕೋಟಿ ಕಳೆದುಕೊಂಡಿದ್ದಾರೆ. ನಿತ್ಯ ಸರಾಸರಿ 48 ಪ್ರಕರಣ ದಾಖಲಾಗುತ್ತಿದ್ದು, ಸೈಬರ್ ವಂಚಕರಿಂದ ಹಣ ಕಳೆದುಕೊಳ್ಳುವವರ ಸಂಖ್ಯೆ ಒಂದೇ ವರ್ಷದಲ್ಲಿ ನಗರದಲ್ಲಿ ಮೂರು ಪಟ್ಟು ಹೆಚ್ಚಳ ಆಗಿದೆ.

ವಂಚಕರು ಹೂಡಿಕೆ ಹೆಸರಿನಲ್ಲಿ ಕಳುಹಿಸಿದ ಲಿಂಕ್ ಒತ್ತಿದ ಎಡವಟ್ಟಿಗೆ ಖಾಸಗಿ ಶಾಲೆಯ ಶಿಕ್ಷಕಿಯೊಬ್ಬರು ₹15 ಲಕ್ಷ ಕಳೆದುಕೊಂಡರೆ, ಸಾಫ್ಟ್‌ವೇರ್ ಉದ್ಯೋಗಿಯೊಬ್ಬರು ಮನೆ ಮಾರಾಟದಿಂದ ಬಂದ ₹1.48 ಕೋಟಿ ಹಣವನ್ನು ಷೇರು ಹೂಡಿಕೆಯಲ್ಲಿ ತೊಡಗಿಸಿ ಕಳೆದುಕೊಂಡರು. ಇದು ಉದಾಹರಣೆಯಷ್ಟೇ.

ಹೀಗೆ ಹಲವು ವರ್ಷಗಳಿಂದ ದುಡಿದು ಕೂಡಿಟ್ಟಿದ್ದ ಹಣವನ್ನು ಉದ್ಯಮಿಗಳು, ವ್ಯಾಪಾರಿಗಳು, ನಿವೃತ್ತ ಸರ್ಕಾರಿ ಅಧಿಕಾರಿಗಳು, ಮಹಿಳೆಯರು ಸೇರಿದಂತೆ ಇತರರು ಕಳೆದುಕೊಳ್ಳುತ್ತಿದ್ದಾರೆ. ಇಂಟರ್‌ನೆಟ್, ಖಾಸಗಿ ಕಂಪನಿಗಳ ಆ್ಯಪ್, ಸಾಮಾಜಿಕ ಜಾಲತಾಣ, ಹಣ ದ್ವಿಗುಣ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮತ್ತು ಮೊಬೈಲ್‌ಗಳಿಗೆ ನಕಲಿ ಲಿಂಕ್‌ಗಳನ್ನು ಕಳುಹಿಸಿ ವಂಚನೆ ಮಾಡುತ್ತಿದ್ದಾರೆ.

ಸೈಬರ್ ಪೊಲೀಸರು ಪ್ರಕರಣ ಬೆನ್ನಟ್ಟಿ ಹೋದರೂ ಯಶಸ್ಸಿನ ಪ್ರಮಾಣ ಮಾತ್ರ ಕಡಿಮೆ. ನಕಲಿ ಬ್ಯಾಂಕ್ ಖಾತೆಗಳನ್ನು ಹೊಂದಿರುವುದು, ವಿದೇಶಿ ಕಂಪನಿಗಳ ಮಾಹಿತಿ ಸಿಗದಿರುವುದು, ವಿಪಿಎನ್ ಬಳಕೆ ಹಾಗೂ ಕ್ರಿಪ್ಟೋ ಕರೆನ್ಸಿ ಬಳಸುತ್ತಿರುವ ಕಾರಣ ಆರೋಪಿಗಳನ್ನು ಪತ್ತೆ ಮಾಡಿ ಜಪ್ತಿ ಮಾಡಲು ಆಗುತ್ತಿಲ್ಲ.

ವಂಚನೆಗೆ ಒಳಗಾದವರು ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡುತ್ತಿರುವುದರಿಂದ ಬ್ಯಾಂಕ್‌ಗಳಿಂದ ಮಾಹಿತಿ ಬರುವುದು ತಡವಾಗುತ್ತಿರುವುದು ವಂಚಕರ ಪತ್ತೆಗೆ ಅಡ್ಡಿಯಾಗಿದೆ. ದುಬೈ, ಕಾಂಬೋಡಿಯಾ, ಥಾಯ್ಲೆಂಡ್, ಹಾಂಕಾಂಗ್, ಚೀನಾ ಮೂಲದ ಸೈಬರ್ ಅಪರಾಧಿಗಳು ಹೆಚ್ಚಾಗಿದ್ದು, ಅವರ ಮೂಲ ತಲುಪುವುದು ಕಷ್ಟವಾಗಿದೆ.

'ಮಕ್ಕಳ ಶಿಕ್ಷಣ, ಮದುವೆ, ಮನೆ ನಿರ್ಮಾಣ, ಸಾಲ ಮಾಡಿ ತಂದ ಹಣ.. ಹೀಗೆ ಕೂಡಿಟ್ಟ ಹಣವನ್ನು ಅಪರಿಚಿತರ ಕರೆ ಸ್ವೀಕರಿಸಿ ಒಟಿಪಿ ಹೇಳುವುದರಿಂದ, ಕೆಲವು ಲಿಂಕ್‌ಗಳನ್ನು ಒತ್ತುವುದರ ಮೂಲಕ ಕಳೆದುಕೊಳ್ಳುವುದು ನಿತ್ಯ ನಡೆಯುತ್ತಿದೆ. ಷೇರಿನಲ್ಲಿ ಹಣ ಹೂಡಿಕೆ ಮಾಡಿ, ಒಂದೇ ತಿಂಗಳಲ್ಲಿ ದುಪ್ಪಟ್ಟು ಮಾಡಿಕೊಡುವುದಾಗಿ ಹೇಳುತ್ತಾರೆ. ನಂಬಿಕೆ ಬರುವ ಸಲುವಾಗಿ ಕೆಲವು ಮಂದಿಗೆ ಹೆಚ್ಚಿನ ಹಣ ಪಾವತಿಸಿ ನಂಬಿಕೆ ಮೂಡಿಸಿ ಬಳಿಕ ವಂಚನೆ ಮಾಡುತ್ತಾರೆ' ಎಂದು ಸೆನ್ ಠಾಣೆ ಅಧಿಕಾರಿಯೊಬ್ಬರು ತಿಳಿಸಿದರು.


'ಸೈಬರ್ ಅಪರಾಧ ನಡೆದ ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಿ, ಬ್ಯಾಂಕ್ ಖಾತೆ, ಯುಪಿಐ, ವಂಚಕರು ಕಳುಹಿಸಿದ್ದ ಲಿಂಕ್, ದೂರವಾಣಿ ಸಂಖ್ಯೆಯನ್ನು ಪೊಲೀಸರಿಗೆ ಕೊಡಬೇಕು. ಅಪರಿಚಿತರ ಕರೆ ಬಗ್ಗೆ ಪೂರ್ವಾಪರ ವಿಚಾರಿಸಬೇಕು' ಎಂದು ಎಚ್ಚರಿಸಿದರು.

ಮೊಬೈಲ್ ಕೊಟ್ಟು ಹಣ ದೋಚಿದರು

ಬ್ಯಾಂಕ್ ಪ್ರತಿನಿಧಿಗಳ ಸೋಗಿನಲ್ಲಿ ಸೈಬರ್ ವಂಚಕರು ಟೆಕಿಗೆ ಕರೆ ಮಾಡಿ, ಮೊಬೈಲ್ ಅನ್ನು ಕೊಡುಗೆಯಾಗಿ ಕಳುಹಿಸಿ, ಅವರ ಬ್ಯಾಂಕ್ ಖಾತೆಯಿಂದ ₹2.80 ಕೋಟಿ ದೋಚಿದ್ದಾರೆ. ಮೊಬೈಲ್‌ನಲ್ಲಿ ಕೆಲ ಆ್ಯಪ್ ಇನ್‌ಸ್ಟಾಲ್ ಮಾಡಿದ್ದರು. ಮೊಬೈಲ್‌ಗೆ ಸಿಮ್ ಕಾರ್ಡ್ ಹಾಕಿ ಆ್ಯಕ್ಟಿವೇಟ್ ಮಾಡುತ್ತಿದ್ದಂತೆ ವಂಚಕರು ಆ ಮೊಬೈಲ್ ಅನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದರು. ಹಣ ಕಡಿತವಾದಾಗ ಮೊಬೈಲ್, ಇ–ಮೇಲ್‌ಗೆ ಸಂದೇಶ ಹೋಗದಂತೆ ಸೆಟ್ ಮಾಡಿದ್ದರು ಎಂಬುದು ಪೊಲೀಸ್ ತನಿಖೆ ವೇಳೆ ಗೊತ್ತಾಗಿದೆ.

ವಂಚನೆಗೆ ಒಳಗಾದ ಬಹುತೇಕರು ಹಣ ಕಳೆದುಕೊಂಡ 2–3 ದಿನ ಬಳಿಕ ಬಂದು ದೂರು ನೀಡುತ್ತಿದ್ದಾರೆ

ಬಿ.ದಯಾನಂದ ನಗರ ಪೊಲೀಸ್ ಕಮಿಷನರ್



ಬೆಂಗಳೂರು ನಗರದಲ್ಲಿ ಪ್ರಕರಣಗಳು (ಮೊತ್ತ ಕೋಟಿಗಳಲ್ಲಿ)

ವರ್ಷ	ಪ್ರಕರಣ	ಹಣ ಕಳೆದುಕೊಂಡಿದ್ದು	ಹಣ ಮುಟ್ಟುಗೋಲು	ಹಣ ಜಪ್ತಿ
2022	9,940	₹271.89	₹79.82	₹34.75
2023	17,632	₹673.03	₹306.43	₹68.17
2024	17,560	₹1998.48	₹652.22	₹139.04

ಹುಟ್ಟೂರಿನ ಜನರ ಕನಸು ನನಸಾಗಿಸಿದ್ದೇನೆ ಎಂದ ಕಾದಂಬರಿಕಾರ

ಭೈರಪ್ಪಗೆ 'ಭಗೀರಥ ಸ್ವರೂಪಿ' ಬಿರುದು

ಪ್ರಜಾವಾಣಿ ವಾರ್ತೆ

ನುಗ್ಗೇಹಳ್ಳಿ (ಹಾಸನ ಜಿಲ್ಲೆ): ತಮ್ಮ ಹುಟ್ಟೂರಾದ ಹೋಬಳಿಯ ಸಂತೇಶಿವರ ಕೆರೆಗೆ ನೀರು ತುಂಬಿಸುವ ಯೋಜನೆಯನ್ನು ಕಾರ್ಯಗತಗೊಳಿಸಿದ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರಿಗೆ 'ಭಗೀರಥ ಸ್ವರೂಪಿ' ಬಿರುದು ನೀಡಿ ಗ್ರಾಮಸ್ಥರು ಭಾನುವಾರ ಸನ್ಮಾನಿಸಿದರು.

ಬಳಿಕ ಮಾತನಾಡಿದ ಭೈರಪ್ಪ, 'ನನ್ನ ಹುಟ್ಟೂರು ಸಂತೇಶಿವರ ಹಾಗೂ ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆಗಳಿಗೆ ನೀರು ಹರಿಸುವ ಯೋಜನೆಯನ್ನು ಸರ್ಕಾರದ ನೆರವಿನಿಂದ ಅನುಷ್ಠಾನಗೊಳಿಸುವ ಮೂಲಕ ಈ ಭಾಗದ ರೈತರ ದಶಕದ ಕನಸನ್ನು ನನಸು ಮಾಡಿದ್ದೇನೆ' ಎಂದು ತಿಳಿಸಿದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, 'ಭೈರಪ್ಪನವರು ತಮ್ಮ ಕುಟುಂಬಕ್ಕಾಗಿ ಏನನ್ನೂ ಕೇಳಲಿಲ್ಲ. ಬದಲಿಗೆ ಗ್ರಾಮದ ಜನರಿಗೆ ಅನುಕೂಲ ಆಗಲೆಂದು ಕೆರೆ ತುಂಬಿಸುವ ಯೋಜನೆಗೆ ಹಣ ನೀಡಿ ಎಂದು ಕೋರಿಕೊಂಡಿದ್ದಾರೆ. ಇದರಿಂದಲೇ ಅವರ ವ್ಯಕ್ತಿತ್ವ ತಿಳಿಯುತ್ತದೆ' ಎಂದರು.

ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೇಯಸ್ ಪಟೇಲ್, ಶಾಸಕ ಸಿ.ಎನ್.ಬಾಲಕೃಷ್ಣ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಇದಕ್ಕೂ ಮುನ್ನ ಭೈರಪ್ಪ ದಂಪತಿಯನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಗ್ರಾಮಕ್ಕೆ ಕರೆತರಲಾಯಿತು. ಭೈರಪ್ಪ ಅವರ ಪುಸ್ತಕಗಳ ಮಾರಾಟ ಮಳಿಗೆಯನ್ನು ತೆರೆಯಲಾಗಿತ್ತು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದ ಭೈರಪ್ಪ ಅವರು, ಗ್ರಾಮದ ಕೆರೆ ತುಂಬಿಸುವ ಯೋಜನೆಗೆ ₹25 ಕೋಟಿ ಬಿಡುಗಡೆ ಮಾಡಿಸುವಲ್ಲಿ ಹೆಚ್ಚು ಪರಿಶ್ರಮಪಟ್ಟಿದ್ದರು. ಯೋಜನೆ ಪೂರ್ಣಗೊಂಡು ಈ ಹಂಗಾಮಿನಲ್ಲಿ ಸಂತೇಶಿವರ ಹಾಗೂ ಅಗ್ರಹಾರ ಬೆಳಗುಲಿ ಕೆರೆಗಳಿಗೆ ನೀರು ಹರಿಸಲಾಗಿದೆ. ಯೋಜನೆಯಿಂದ 20ಕ್ಕೂ ಹೆಚ್ಚು ಗ್ರಾಮಗಳಿಗೆ ಅನುಕೂಲವಾಗುತ್ತಿದೆ.



ಎಸ್.ಎಲ್.ಭೈರಪ್ಪ ಅವರಿಗೆ 'ಭಗೀರಥ ಸ್ವರೂಪಿ' ಬಿರುದು ನೀಡಿ ಗೌರವಿಸಲಾಯಿತು. ಪತ್ರಕರ್ತ ವಿಶ್ವೇಶ್ವರ ಭಟ್, ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಸಂಸದರಾದ ಬಸವರಾಜ ಬೊಮ್ಮಾಯಿ, ಯದುವೀರ್ ಕೃಷ್ಣದತ್ತ ಒಡೆಯರ್ ಉಪಸ್ಥಿತರಿದ್ದರು

47 ಕುರಿ ಸಾವು ಅಂಥ್ರಾಕ್ಸ್ ಶಂಕೆ

ಶಿರಹಟ್ಟಿ (ಗದಗ ಜಿಲ್ಲೆ): ತಾಲ್ಲೂಕಿನ ಸೇವಾನಗರದ ಹೊರವಲಯದಲ್ಲಿರುವ ಪೋಮಪ್ಪ ಲಮಾಣಿ ಅವರು ಸಾಕಿಕೊಂಡಿದ್ದ 47 ಕುರಿಗಳು ಹಠಾತ್ ಮೃತಪಟ್ಟಿವೆ.

ಶನಿವಾರ 22 ಕುರಿಗಳು ಮತ್ತು ಭಾನುವಾರದಂದು 25 ಕುರಿಗಳು ಮೃತಪಟ್ಟಿವೆ. ಇನ್ನಷ್ಟು ಕುರಿಗಳು ಸಾಯುವಂತಾಗಿದ್ದು ಪಶು ವೈದ್ಯರು ಮೃತ ಕುರಿಗಳಿಂದ ರಕ್ತ ಮತ್ತು ಮೂಗಿನ ದ್ರವ ಮಾದರಿ ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ವರದಿ ನಿರೀಕ್ಷಿಸಲಾಗಿದೆ.

'ಮೃತ ಕುರಿಗಳಲ್ಲಿ ಕಂಡುಬಂದ ರೋಗದ ಲಕ್ಷಣಗಳು ಅಂಥ್ರಾಕ್ಸ್ ಅನ್ನು ಹೋಲುತ್ತಿವೆ. ಮಾದರಿಗಳನ್ನು ಈಗಾಗಲೇ ಬಾಗಲ ಕೋಟೆಯ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಅಲ್ಲಿಂದಲೇ ಅಂಥ್ರಾಕ್ಸ್ ಸಂಬಂಧಿತ ಲಸಿಕೆಗಳನ್ನು ತಂದು ಗ್ರಾಮದ ಸುತ್ತಮುತ್ತಲಿನ ಕುರಿ ಹಾಗೂ ಜಾನುವಾರುಗಳಿಗೆ ಹಾಕಲಾಗಿದೆ' ಎಂದು ತಾಲ್ಲೂಕು ಪಶುವೈದ್ಯಾಧಿಕಾರಿ ಡಾ. ನಿಂಗಪ್ಪ ಓಲೇಕಾರ ತಿಳಿಸಿದ್ದಾರೆ.



ಸುಭಾಷಿತ

ತನಗೂ ಒಂದು ದಿನ ಸಾವಿದೆ ಎಂಬುದನ್ನು ಅರಿತವನು ಇನ್ನೊಬ್ಬರಿಗೆ ಎಂದೂ ತೊಂದರೆ ಕೊಡುವುದಿಲ್ಲ.

-ಗೌತಮ ಬುದ್ಧ

ಸ್ಥೂಲಕಾಯದ ಸಮಸ್ಯೆ ಪರಿಹಾರಕ್ಕೆ ರಾಷ್ಟ್ರೀಯ ಕ್ರಿಯಾ ಯೋಜನೆ ರೂಪಿಸಿ

ಭಾರತದಲ್ಲಿ ಸ್ಥೂಲಕಾಯದ ಸಮಸ್ಯೆಯು ಸಾಂಕ್ರಾಮಿಕದಂತೆ ಆಗಿದೆ. ಜನರ ಆರೋಗ್ಯಕ್ಕೆ ಬಹುದೊಡ್ಡ ಬೆದರಿಕೆಯಾಗಿದೆ. ಸ್ಥೂಲಕಾಯದವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಜಗತ್ತಿನ ಮೂರನೇ ದೇಶ ಭಾರತ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ಪ್ರಕಾರ, ಶೇಕಡ 24ರಷ್ಟು ಮಹಿಳೆಯರು ಮತ್ತು ಶೇ 23ರಷ್ಟು ಗಂಡಸರಿಗೆ ಸ್ಥೂಲಕಾಯ ಇದೆ. ಲ್ಯಾನ್ಸೆಟ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ವರದಿಯೊಂದರ ಪ್ರಕಾರ, ಭಾರತದಲ್ಲಿ 2050ರ ಹೊತ್ತಿಗೆ 45 ಕೋಟಿ ಮಂದಿ ಸ್ಥೂಲಕಾಯ ಹೊಂದಲಿದ್ದಾರೆ. ಇದು ಜಗತ್ತಿನಲ್ಲಿಯೇ ಅತಿ ದೊಡ್ಡ ಸಂಖ್ಯೆ ಆಗಲಿದೆ. ಈಗ 18 ಕೋಟಿ ಜನರಿಗೆ ಬೊಜ್ಜು ಇದೆ. ಕಳೆದ ಎರಡು ದಶಕಗಳಲ್ಲಿ ಈ ಸಮಸ್ಯೆ ತೀವ್ರವಾಗಿದೆ. 2022ರಲ್ಲಿ 73 ಲಕ್ಷ ಬಾಲಕರು ಮತ್ತು 52 ಲಕ್ಷ ಬಾಲಕಿಯರು ಸ್ಥೂಲಕಾಯ ಹೊಂದಿದ್ದರು. 1990ರಲ್ಲಿ ಈ ಸಂಖ್ಯೆ ಎರಡು ಲಕ್ಷದ ಆಸುಪಾಸಿನಲ್ಲಿ ಇತ್ತು. ಬೊಜ್ಜು ಹೊಂದಿರುವ ಜನರ ಸಂಖ್ಯೆಯಲ್ಲಿ ಆಗಿರುವ ಏರಿಕೆಯು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ದೊಡ್ಡ ಸವಾಲಾಗಿದೆ. ಭಾರತವು ಜಗತ್ತಿನ ಮಧುಮೇಹದ ರಾಜಧಾನಿ ಎಂದು ಗುರುತಿಸಿಕೊಂಡಿದೆ. ಜಗತ್ತಿನಲ್ಲಿ ಇರುವ ಮಧುಮೇಹಿಗಳಲ್ಲಿ ಶೇ 23ರಷ್ಟು ಮಂದಿ ಭಾರತದಲ್ಲಿ ಇದ್ದಾರೆ. ಸ್ಥೂಲಕಾಯ, ಮಧುಮೇಹ ಮತ್ತು ಜೀವನ ಶೈಲಿಗೆ ಸಂಬಂಧಿಸಿದ ಇತರ ಸಮಸ್ಯೆಗಳು ಜನಸಂಖ್ಯೆಯ ಬಹುದೊಡ್ಡ ವರ್ಗವನ್ನು ಅನಾರೋಗ್ಯಕಾರಿಯಾಗಿಸುತ್ತವೆ. ಸ್ಥೂಲಕಾಯವು ಆರೋಗ್ಯಕ್ಕೆ ಸಂಬಂಧಿಸಿದ ಗಂಭೀರ ಸಮಸ್ಯೆಯಾಗಿದ್ದು ಅದಕ್ಕೆ ಸಿಗಬೇಕಾದಷ್ಟು ಗಮನ ತೀರಾ ಇತ್ತೀಚೆಗಷ್ಟೇ ಸಿಕ್ಕಿದೆ.



ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ದೊಡ್ಡ ಸವಾಲಾಗಿರುವ ಸ್ಥೂಲಕಾಯಕ್ಕೆ ಕಾರಣವಾಗುವ ಎಲ್ಲ ಅಂಶಗಳಿಗೂ ಪರಿಹಾರ ಕಂಡುಕೊಳ್ಳಬೇಕು

ಪೌಷ್ಟಿಕವಲ್ಲದ ಆಹಾರ ಸೇವನೆ, ಕೆಲಸದ ಅವಧಿಯಲ್ಲಿನ ಬದಲಾವಣೆ, ದೈಹಿಕ ಚಟುವಟಿಕೆಯ ಕೊರತೆ, ಮೊಬೈಲ್ ಫೋನ್-ಟಿ.ವಿ. ನೋಡಿಕೊಂಡು ಹೆಚ್ಚಿನ ಸಮಯ ಕಳೆಯುವುದು ಬೊಜ್ಜು ಬರುವುದಕ್ಕೆ ಇರುವ ಪ್ರಮುಖ ಕಾರಣಗಳು. ಜನರು ನಡೆಯುವುದು ಕಡಿಮೆಯಾಗಿ, ವಾಹನಗಳಲ್ಲಿ ಪ್ರಯಾಣಿಸುವುದು ಹೆಚ್ಚಾಗಿದೆ. ಜೀವನಶೈಲಿಯಲ್ಲಿನ ಇಂತಹ ಬದಲಾವಣೆಗಳು ಜನರ ದೇಹ ದಪ್ಪವಾಗಲು ಕಾರಣವಾಗುತ್ತವೆ. ದಪ್ಪ ದೇಹದಿಂದಾಗಿ ಹೃದಯ ಸಂಬಂಧಿ ಕಾಯಿಲೆಗಳು, ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್‌ನಂತಹ ರೋಗಗಳು ಬರಬಹುದು. ಇಂತಹ ಸ್ಥಿತಿಯಿಂದಾಗಿ ಆರೋಗ್ಯಕ್ಕೆ ಸಂಬಂಧಿಸಿ ಮಾಡುವ ವೆಚ್ಚದ ಮೊತ್ತವು ಹೆಚ್ಚಾಗುತ್ತದೆ. ಅರ್ಥ ವ್ಯವಸ್ಥೆಯ ಮೇಲೆಯೂ ಇದು ಪ್ರತಿಕೂಲ ಪರಿಣಾಮ ಬೀರುತ್ತದೆ. 2035ರ ಹೊತ್ತಿಗೆ, ಸ್ಥೂಲಕಾಯದಿಂದ ಆಗುವ ಆರೋಗ್ಯ ಸಮಸ್ಯೆಗಳಿಂದಾಗಿ ಜಿಡಿಪಿಯು ಶೇ 1.8ರಷ್ಟು ಕುಗ್ಗಬಹುದು ಎಂದು ಅಂದಾಜಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಈ ಸಮಸ್ಯೆಯ ಕುರಿತು ಇತ್ತೀಚೆಗೆ ಗಮನ ಸೆಳೆದಿದ್ದಾರೆ. ಬೊಜ್ಜು ದೇಹದಿಂದ ಆಗಬಹುದಾದ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಲು ವಿವಿಧ ಕ್ಷೇತ್ರಗಳ 10 ಮಂದಿ ಗಣ್ಯರನ್ನು ಪ್ರಧಾನಿ ಹೆಸರಿಸಿದ್ದಾರೆ. ಅಡುಗೆ ಎಣ್ಣೆಯ ಬಳಕೆಯು ದೇಹ ಸ್ಥೂಲವಾಗಲು ಪ್ರಮುಖ ಕಾರಣ. ಹಾಗಾಗಿ, ಜನ ಅಡುಗೆ ಎಣ್ಣೆ ಬಳಕೆಯನ್ನು ಶೇ 10ರಷ್ಟು ಕಡಿಮೆ ಮಾಡಬೇಕು ಎಂದು ಪ್ರಧಾನಿ ಕರೆ ಕೊಟ್ಟಿದ್ದಾರೆ. ಭಾರತದಲ್ಲಿ ಪ್ರತಿ ವ್ಯಕ್ತಿ ವರ್ಷಕ್ಕೆ ಸೇವಿಸುವ ಅಡುಗೆ ಎಣ್ಣೆಯು 20 ಕೆ.ಜಿ. ಪ್ರತಿ ವ್ಯಕ್ತಿ ವರ್ಷದಲ್ಲಿ ಸೇವಿಸುವ ಅಡುಗೆ ಎಣ್ಣೆಯ ಪ್ರಮಾಣ 12 ಕೆ.ಜಿ. ಮೀರಬಾರದು ಎಂದು ವಿಶ್ವ ಆರೋಗ್ಯ ಸಂಸ್ಥೆಯು ಶಿಫಾರಸು ಮಾಡಿದೆ. ಸ್ಥೂಲಕಾಯವು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮುಂದೆ ಇರುವ ದೊಡ್ಡ ಸವಾಲು. ಈ ಸವಾಲಿಗೆ ಕಾರಣವಾಗುವ ಎಲ್ಲ ಅಂಶಗಳಿಗೂ ಪರಿಹಾರ ಕಂಡುಕೊಳ್ಳಬೇಕು. ಮಕ್ಕಳು ಮತ್ತು ಹದಿಹರೆಯದವರನ್ನು ಕೇಂದ್ರೀಕರಿಸಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಶಾಲೆಗಳಿಗೆ ಅದರಲ್ಲಿ ಮಹತ್ವದ ಪಾತ್ರ ಇರಬೇಕು. ಬಾಲ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲಿದವರು ನಂತರದ ಹಂತದಲ್ಲಿ ಸ್ಥೂಲಕಾಯವನ್ನು ಹೊಂದುವ ಸಾಧ್ಯತೆ ಇದೆ. ಸ್ಥೂಲಕಾಯ ಸಮಸ್ಯೆಯ ಎಲ್ಲ ಆಯಾಮಗಳನ್ನು ಗುರಿಯಾಗಿಸಿದ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ರೂಪಿಸಿ, ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು.

ದಿನದ ಟ್ವೀಟ್

ಮೂಲ ದಾಖಲೆ: ಶೋಷಣೆಯ ಅಸ್ತ್ರವಾಗದಿರಲಿ

ಬೆಂಗಳೂರಿನಲ್ಲಿ ಭೂಮಾಲೀಕರು ಬಿಲ್ಡರ್‌ಗಳಿಂದ ತಮ್ಮ ಪಾಲಿಗೆ ಬರಬೇಕಾದಷ್ಟು ಫ್ಲ್ಯಾಟ್‌ಗಳನ್ನು ಪಡೆದುಕೊಂಡು, ಅವುಗಳನ್ನು ಮಾರಿಕೊಂಡಿರುತ್ತಾರೆ. ಆದರೂ ಜಮೀನಿನ ಮೂಲ ದಾಖಲೆಯನ್ನು ತಮ್ಮ ಹೆಸರಿನಲ್ಲೇ ಉಳಿಸಿಕೊಂಡು, ತಾವೇ ಆ ಜಮೀನಿನ ಮಾಲೀಕರು ಎಂದು ಪ್ರತಿಪಾದಿಸುತ್ತಿರುತ್ತಾರೆ. ಈ ಏಕೈಕ ದಾಖಲೆಯನ್ನು ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳಿಗೆ ವರ್ಗಾಯಿಸಲು ಹೆಚ್ಚುವರಿ ಹಣಕ್ಕೆ ಬೇಡಿಕೆ ಇಡುತ್ತಾರೆ.

ಗೋಪಿನಾಥ್ ಕೆ.

ಕಿಡಿನುಡಿ



ಬಡವರ ಬದುಕು ಬದಲಾವಣೆ ಮಾಡಲು 5 ಗ್ಯಾರಂಟಿಗಳನ್ನು ಕೊಟ್ಟಿದ್ದೇವೆ. ಬಿಜೆಪಿಯವರಿಗೆ ಹೃದಯ ಶ್ರೀಮಂತಿಕೆ ಇಲ್ಲ. ಸಮಾಜವನ್ನು ಒಡೆಯಲು ಹೊರಟಿದ್ದಾರೆ. ನಾವು ಹಿಂದುಳಿದವರನ್ನು ಮೇಲೆತ್ತಲು ಪ್ರಯತ್ನಿಸುತ್ತಿದ್ದೇವೆ. ಬಿಜೆಪಿಯವರು ಔಷಧ ತೆಗೆದುಕೊಂಡು ಹೊಟ್ಟೆಯುರಿ ಕಡಿಮೆ ಮಾಡಿಕೊಳ್ಳಲಿ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 10-3-2000

• ಮೀಸಲಾತಿ ನಿಗದಿಪಡಿಸುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ

ಬೆಂಗಳೂರು, ಮಾರ್ಚ್ 9– ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರವಾರು ಮೀಸಲಾತಿ ನಿಗದಿಪಡಿಸುವ ಮತ್ತು ಕ್ಷೇತ್ರಗಳ ಪುನರ್‌ವಿಂಗಡಣೆ ಮಾಡುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದಿಂದ ಹಿಂದಕ್ಕೆ ಪಡೆದು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನೀಡಬೇಕೆಂಬ ಆಡಳಿತ ಪಕ್ಷದ ಶಾಸಕರ ಒತ್ತಡಕ್ಕೆ ರಾಜ್ಯ ಸರ್ಕಾರ ಕೊನೆಗೂ ಮಣಿದಿದ್ದು, ಈ ಸಂಬಂಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ತರಲು ಇಂದು ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರವಾರು ಮೀಸಲಾತಿಯನ್ನು ನಿಗದಿ ಪಡಿಸುವ ಸಂಬಂಧ ಜನತಾದಳ ನೇತೃತ್ವದ ಸರ್ಕಾರ ತಂದಿದ್ದ ಬದಲಾವಣೆಗಳನ್ನು ರದ್ದುಪಡಿಸಿ, ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ– 1993ರ ಅನ್ವಯ ಕ್ಷೇತ್ರವಾರು ಮೀಸಲಾತಿ ನಿಗದಿಪಡಿಸಲೂ ಸಂಪುಟ ಸಭೆ ನಿರ್ಧರಿಸಿದೆ. ಸಂಪುಟ ಸಭೆಯ ಈ ನಿರ್ಧಾರಗಳನ್ನು ಸಚಿವ ಎಂ.ವೈ. ಘೋರ್ಪಡೆ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

• ‘ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ಇಳಿಕೆ ಇಲ್ಲ’

ಬೆಂಗಳೂರು, ಮಾರ್ಚ್ 9– ‘ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ’ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ನಡೆದ ನೌಕರರ ರಾಜ್ಯ ಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಭರವಸೆ ನೀಡಿದರು.

50 ವರ್ಷಗಳ ಹಿಂದೆ

ಸೋಮವಾರ, 10-3-1975

• ತಮ್ಮ ಖಾತೆಯ ಬಗ್ಗೆ ತಾತ್ಸಾರ ಕಾರ್ಮಿಕ ಸಚಿವರ ವಿಷಾದ

ಬೆಂಗಳೂರು, ಮಾರ್ಚ್ 9– ‘ಸರ್ಕಾರವು ಕಾರ್ಮಿಕ ಇಲಾಖೆಯನ್ನು ಕಡೆಗಣಿಸಿದೆ’ ಎಂದು ಕಾರ್ಮಿಕ ಖಾತೆಯ ರಾಜ್ಯ ಸಚಿವ ಕೆ. ಶ್ರೀರಾಮುಲು ಇಂದು ಇಲ್ಲಿ ವಿಷಾದಿಸಿದರು.

ರಾಜ್ಯದ ಕಾರ್ಮಿಕ ಇನ್‌ಸ್ಪೆಕ್ಟರ್‌ಗಳ ಮೂರನೇ ವಾರ್ಷಿಕ ಸಮ್ಮೇಳನ ಉದ್ಘಾಟಿಸಿದ ಸಚಿವರು, ‘ಬೇರೆ ಇಲಾಖೆಗಳನ್ನು ನೋಡುವ ದೃಷ್ಟಿಯಲ್ಲಿ ಕಾರ್ಮಿಕ ಇಲಾಖೆಯನ್ನು ನೋಡುತ್ತಿಲ್ಲ. ಸರ್ಕಾರದ ಈ ಅಭ್ಯಾಸ ಹೋಗಲೇಬೇಕು’ ಎಂದರು.

ಈ ದೃಷ್ಟಿಮಾಂದ್ಯಕ್ಕೆ ಕಾರಣರು ಯಾರು ಎಂಬುದು ಗೊತ್ತಿಲ್ಲವಾದರೂ, ಕಳೆದ 20 ವರ್ಷಗಳಲ್ಲಿ ದಕ್ಷ ಹಾಗೂ ಒಳ್ಳೆಯ ಅಧಿಕಾರಿಗಳು ರೂಪಿಸಿದ ಅಭಿಪ್ರಾಯಗಳನ್ನು ಜಾರಿಗೆ ತರಲು ವ್ಯವಸ್ಥಿತ ಪ್ರಯತ್ನವಾಗಿಲ್ಲ ಎಂದು ಅಭಿಪ್ರಾಯಪಟ್ಟರು.

• ಶಾಸಕರ ಅಪಹರಣ ಆರೋಪ

ಕೊಹಿಮಾ, ಮಾರ್ಚ್ 9– ಸ್ಪೀಕರ್ ಹಾಗೂ ಉಪಸ್ಪೀಕರ್‌ಗಳನ್ನು ಮಾತ್ರವಲ್ಲದೆ ಸಂಯುಕ್ತ ಪ್ರಜಾಸತ್ತೆ ರಂಗದ ಐವರು ಶಾಸಕರನ್ನು ವಿರೋಧಪಕ್ಷದವರು ಅಪಹರಿಸಿರುವುದರಿಂದ ರಾಜ್ಯದಲ್ಲಿ ರಾಜಕೀಯ ಬಿಕ್ಕಟ್ಟು ತಲೆದೋರಿದೆ ಎಂದು ನಾಗಾಲ್ಯಾಂಡ್ ಮುಖ್ಯಮಂತ್ರಿ ವಿಜೋಲ್ ಆರೋಪಿಸಿದರು.

ಒಂದು ವಾರದ ಹಿಂದೆ ಭದ್ರತಾ ಪಡೆಗಳ ಸಹಾಯದಿಂದ ವಿರೋಧಪಕ್ಷದವರು ಐವರು ಶಾಸಕರನ್ನು ಅಪಹರಿಸಿದರು. ಆನಂತರ, ಸ್ಪೀಕರ್ ಹಾಗೂ ಉಪಸ್ಪೀಕರ್ ಅವರನ್ನು ಅವರ ಕಚೇರಿಗಳಿಂದ ವಿರೋಧಪಕ್ಷದ ನಾಯಕನ ನಿವಾಸಕ್ಕೆ ಬಲವಂತವಾಗಿ ಕರೆದೊಯ್ಯಲಾಗಿದೆ. ಬಿಕ್ಕಟ್ಟು ಇದರಿಂದ ಇನ್ನಷ್ಟು ಉಲ್ಬಣಗೊಂಡಿದೆ ಎಂದರು.

ವಿಶ್ವಕ್ಕೆ ಶಾಶ್ವತ ಶಾಂತಿಯ ಮಾರ್ಗ ತೋರುವ ಅವಕಾಶ ಝೆಲೆನ್‌ಸ್ಕಿ ಮುಂದಿತ್ತು

ವಿಶ್ವಶಾಂತಿಗೆ ಬೇಕು ಗಾಂಧಿ ಪಥ



ವಿಶ್ಲೇಷಣೆ

ಜಿ.ಎಸ್.ಜಯದೇವ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನಿನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ನಡುವೆ ನಡೆದ ವಾಕ್ಸಮರವನ್ನು ಇಡೀ ಜಗತ್ತು ವೀಕ್ಷಿಸಿತು. ವೀಕ್ಷಿಸುವಂತೆ ಸಜ್ಜುಗೊಳಿಸಲಾಗಿತ್ತು. ಇಸ್ರೇಲ್– ಹಮಾಸ್ ಬಂಡುಕೋರರ ನಡುವಣ ಯುದ್ಧ ಅಥವಾ ರಷ್ಯಾ–ಉಕ್ರೇನ್ ಯುದ್ಧದಿಂದ ಆಗಿರುವ ಹಿಂಸೆ, ರಕ್ತಪಾತಗಳಿಗೆ ಸ್ಪಂದಿಸುವ ಹೃದಯವಂತಿಕೆಯನ್ನು ಜಗತ್ತು ಕಳೆದುಕೊಂಡಿರುವಂತೆ ತೋರುತ್ತಿದೆ.

ಕಳಿಂಗ ಯುದ್ಧದ ರಕ್ತಪಾತವನ್ನು ಕಂಡ ಕಟುಕ ಹೃದಯದ ಚಕ್ರವರ್ತಿ ಅಶೋಕನು ಮರುಗಿ, ಯುದ್ಧದ ನಿರರ್ಥಕತೆಯನ್ನು ಮನಗಂಡು ಅಹಿಂಸಾ ಮಾರ್ಗ ಹಿಡಿದ. ಟ್ರಂಪ್, ಪುಟಿನ್, ನೆತನ್ಯಾಹು ಅವರಂತಹ ಆಧುನಿಕ ಜಗತ್ತಿನ ನಮ್ಮ ನಾಯಕರು ಇಂತಹ ಸಂವೇದನಾಶೀಲತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರಲ್ಲ, ಇದಕ್ಕೆ ಕಾರಣವೇನು? ಸರಾಸರಿಯಾಗಿ ಇಡೀ ಮನುಷ್ಯ ಕುಲವೇ ನೋವಿಗೆ ಸ್ಪಂದಿಸುವ ಗುಣವನ್ನು ಕಳೆದುಕೊಳ್ಳುವಂತೆ ಪ್ರಭಾವಿಸುತ್ತಿರುವ ಇಂದಿನ ಆಧುನಿಕತೆಯ ಪ್ರೇರಣೆಗಳಾದರೂ ಯಾವುವು?

ಆರ್ಥಿಕ ಪ್ರಗತಿ ಮತ್ತು ತಾಂತ್ರಿಕ ಸಾಧ್ಯತೆಗಳು ಪ್ರಬಲ ಸಮುದಾಯಗಳ, ಪ್ರಬಲ ದೇಶಗಳ ಪರವಾಗಿ ಮಾತ್ರ ಕೆಲಸ ಮಾಡುತ್ತ ‘ಬಲಿಷ್ಠನಿಗೆ ಮಾತ್ರ ಬಾಳು’ ಎಂಬಂತಹ ಕಾಡುನಿಯಮಕ್ಕೆ ಎಡೆಮಾಡಿಕೊಡಬೇಕೆ? ಕ್ವಾಂಟಮ್ ಕಂಪ್ಯೂಟರ್ ತಂತ್ರಜ್ಞಾನವನ್ನು ಸಾಧಿಸಲು ನಡೆದಿರುವ ಸ್ಪರ್ಧೆಯನ್ನೇ ನೋಡಿ. ನಮ್ಮ ಸೂಪರ್ ಕಂಪ್ಯೂಟರ್‌ಗಳಿಗೆ ಸಾವಿರಾರು ವರ್ಷ ಹಿಡಿಯುವ ಲೆಕ್ಕಾಚಾರವನ್ನು ಈ ಕ್ವಾಂಟಮ್ ಕಂಪ್ಯೂಟರ್‌ಗಳು ಕೆಲವು ಸೆಕೆಂಡ್‌ಗಳಲ್ಲಿ ಮಾಡಿ ಮುಗಿಸುತ್ತವೆಯಂತೆ. ಹೀಗೆ ವಿವರಿಸುತ್ತಿದ್ದ ವಿಜ್ಞಾನಿ ಹೇಳಿದ ಮತ್ತೊಂದು ಮಾತೆಂದರೆ ‘ಯಾವ ದೇಶ ಕ್ವಾಂಟಂ ಕಂಪ್ಯೂಟರ್‌ಗಳನ್ನು ಮೊದಲು ನಿರ್ಮಿಸುತ್ತದೋ ಅದು ಜಗತ್ತನ್ನು ಆಳುತ್ತದೆ!’

ಹೊಸ ತಂತ್ರಜ್ಞಾನದ ಸಾಧ್ಯತೆಗಳಿಂದ ಬಡತನವನ್ನು ಹೋಗಲಾಡಿಸಬಹುದು, ಅಂತರರಾಷ್ಟ್ರೀಯ ಅಪಾರ್ಥಗಳನ್ನು ಪರಿಹರಿಸಿ ಸೌಹಾರ್ದ ಸಂಬಂಧಗಳನ್ನು ಕಟ್ಟಬಹುದು ಅಥವಾ ಕೆಡುತ್ತಿರುವ ಹವಾಮಾನ ಬದಲಾವಣೆಯನ್ನು ತಡೆಯಬಹುದು ಎಂದು ಈ ವಿಜ್ಞಾನಿಗೆ ಹೊಳೆಯಲೇ ಇಲ್ಲ. ಮನುಷ್ಯನ ಮನಸ್ಸು ನೆಮ್ಮದಿಗಿಂತ ವಿಧ್ವಂಸಕತೆಯ ಕಡೆಗೇ ವಾಲುತ್ತದಲ್ಲ, ಹೀಗೇಕೆ?

ಇಂತಹ ಪ್ರಶ್ನೆ ಎದುರಾದಾಗಲೆಲ್ಲ ಗಾಂಧೀಜಿ ನೆನಪಿಗೆ ಬರುತ್ತಾರೆ. ತಂತ್ರಜ್ಞಾನದ ಸಾಧ್ಯತೆಗಳು ಹೆಚ್ಚಾದಂತೆಲ್ಲ ಮನುಷ್ಯರು ತಮ್ಮ ಒಡನಾಡಿಗಳ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡು ವಿಜೃಂಭಿಸುವ ಮನಃಸ್ಥಿತಿಗೆ ತಲುಪುತ್ತಾರೆ ಎಂಬುದನ್ನು ಅವರು ಗುರುತಿಸಿದ್ದರು. ಶಾಂತಿಗಿಂತ ಯುದ್ಧದಲ್ಲಿ ವಿಜಯಿಯಾಗುವ ವಿಕೃತ ತವಕಕ್ಕೆ, ನೆಮ್ಮದಿಯ ಬದುಕಿಗಿಂತ ವೈಭವದಿಂದ ಮೆರೆಯುವ ದುರಾಸೆಗೆ ಮನುಷ್ಯರು ದಾಸರಾಗುತ್ತಾರೆ ಎಂಬುದನ್ನು ಅರಿತೇ ಗಾಂಧೀಜಿ ಹೇಳಿದರು- ಸರಳ ಕಾಯಕದ ಬದುಕು ಸಾಗಿಸುತ್ತ ನೆಮ್ಮದಿಯ ಸಮಾಜವನ್ನು ಕಟ್ಟಬೇಕು; ಮನುಷ್ಯ ತನ್ನ ಮೂಲಭೂತ ಆವಶ್ಯಕತೆಗಳನ್ನೂ ಪೂರೈಸಿಕೊಂಡು ಹೆಚ್ಚು ಬಯಸದೆ ತೃಪ್ತಿಯಿಂದ ಬದುಕುವುದನ್ನು ಕಲಿಯಬೇಕು. ಜೊತೆಗೆ ಗಾಂಧೀಜಿ, ದುರಾಸೆಗೆ ಇಂಬು ಕೊಡುವ ಅನಗತ್ಯ ಉತ್ಪಾದನೆ ಮತ್ತು ಅನೈತಿಕ ಆರ್ಥಿಕ ಪ್ರಗತಿಯ ಬಗ್ಗೆ ಎಚ್ಚರಿಕೆಯನ್ನೂ ನೀಡಿದ್ದರು.

ಕಟ್ಟಕಡೆಯ ಮನುಷ್ಯನ ಕ್ಷೇಮವನ್ನು ಪ್ರಗತಿಯ ಆದ್ಯತೆಯಾಗಿ ಎತ್ತಿ ಹಿಡಿಯುವ ಗಾಂಧಿ ತತ್ವವು ಜಗತ್ತಿನ ಕಟ್ಟಕಡೆಯ ದೇಶವೂ ಘನತೆಯಿಂದ, ನೆಮ್ಮದಿಯಿಂದ ಬಾಳುವಂತೆ ಆಗಬೇಕು ಎಂದು ಬಯಸುತ್ತದೆ. ಇದೇ ಸರಿಯಾದ ವಿಶ್ವ ವಿಕಾಸ ಪಥ. ಇಂತಹ ವಿಕಾಸ ಪಥದಲ್ಲಿ ಜಗತ್ತು ನಡೆಯಬೇಕಾದರೆ ಬುದ್ಧಿಪೂರ್ವಕವಾಗಿ ನಾವು ‘ಆರ್ಥಿಕ ಸಾಮ್ರಾಜ್ಯಶಾಹಿ’ ಬೆಳವಣಿಗೆಯ ಕಂಟಕವನ್ನು ದಾಟಬೇಕು. ಇಂದಿನ ಯುದ್ಧ, ಹಿಂಸೆ, ಅಸಮಾನತೆಯ ಅನರ್ಥಗಳಿಗೆ ಆರ್ಥಿಕ ಸಾಮ್ರಾಜ್ಯಶಾಹಿಯೇ ಕಾರಣ. ಗಾಂಧೀಜಿ ಹೇಳುತ್ತಾರೆ ‘ಒಂದು ಸಣ್ಣ ದ್ವೀಪರಾಷ್ಟ್ರ (ಇಂಗ್ಲೆಂಡ್) ಆರ್ಥಿಕ ಸಾಮ್ರಾಜ್ಯಶಾಹಿಯಾಗಿ ಬೆಳೆದು ಇಂದು ಜಗತ್ತನ್ನೇ ಸರಪಳಿಯಲ್ಲಿ ಬಂಧಿಸಿದೆ. ಭಾರತದಂತಹ ಬೃಹತ್ ರಾಷ್ಟ್ರವೇನಾದರೂ ಕೈಗಾರಿಕೀಕರಣದ ಮೂಲಕ ಆರ್ಥಿಕ ಸಾಮ್ರಾಜ್ಯಶಾಹಿಯಾಗಿ ಪರಿಣಮಿಸಿದರೆ ಇಡೀ ಜಗತ್ತನ್ನು ಮಿಡತೆಗಳಂತೆ ತಿಂದು ಮುಗಿಸುತ್ತದೆ. ದೇವರದಯೆಯಿಂದ ನಾವು ಆ ಸ್ಥಿತಿಗೆ ಹೋಗುವುದು ಬೇಡ’.

ಇಂದು ಜಗತ್ತಿನ ಅತಿ ಬಲಿಷ್ಠ ಆರ್ಥಿಕ ಸಾಮ್ರಾಜ್ಯಶಾಹಿ ದೇಶವಾಗಿ ಬೆಳೆದುನಿಂತ ಅಮೆರಿಕ ಇಡೀ ಜಗತ್ತನ್ನೇ ತನ್ನೆದುರು ಮಂಡಿಯೂರಿ ನಿಲ್ಲುವಂತೆ ಮಾಡಲು ಹುಚ್ಚು ಪ್ರಯತ್ನಗಳನ್ನು ಮಾಡುತ್ತಿದೆ. ‘ಅಮೆರಿಕ ಮೊದಲು’ ಎಂಬ ಘೋಷಣೆಯೊಂದಿಗೆ ಸರಕು ಸೇವೆಗಳ ಮೇಲಿನ ಸುಂಕ, ಆಮದು ಸುಂಕಗಳನ್ನು ವಿಧಿಸುತ್ತಿರುವ ಟ್ರಂಪ್ ಆರ್ಥಿಕ ಭಯೋತ್ಪಾದಕನಂತೆ ವರ್ತಿಸುತ್ತಿದ್ದಾರೆ. ಯುದ್ಧ ಬೇಡವೆಂದು ಶಾಂತಿಯನ್ನು ಬಯಸಿದರೆ ಅದನ್ನೂ ಮಾರಲು ಸಿದ್ಧವಿರುವ ಟ್ರಂಪ್ ‘ನಿರಂತರ ಶಾಂತಿ’ಯನ್ನು ದಯಪಾಲಿಸುವ ತಮ್ಮ ಸಾಮರ್ಥ್ಯಕ್ಕೆ ಉಕ್ರೇನ್ ಅಮೂಲ್ಯ ಖನಿಜ ಸಂಪತ್ತನ್ನು ಬಿಟ್ಟುಕೊಡುವ ಒಪ್ಪಂದಕ್ಕೆ ಸಹಿ ಹಾಕಬೇಕು ಎನ್ನುತ್ತಾರೆ. ಬಲಿಷ್ಠ ಆರ್ಥಿಕ ಸಾಮ್ರಾಜ್ಯಶಾಹಿಯ ದೇಶ ಒಂದು ಕಡೆ, ಅಣ್ವಸ್ತ್ರ ಸಮರಕ್ಕೂ ಸಿದ್ಧ ಎನ್ನುವ ರಾಕ್ಷಸ ಶಕ್ತಿಯ ರಷ್ಯಾ ಇನ್ನೊಂದು ಕಡೆ. ಈ ಇಕ್ಕಟ್ಟಿನ ನಡುವೆ ನಿರುಪದ್ರವಿ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಜಗತ್ತಿನ ಅನುಕಂಪವನ್ನು ಗಳಿಸಿದರು ಎನ್ನಬಹುದೇ?




ಐರೋಪ್ಯ ಒಕ್ಕೂಟವು ಝೆಲೆನ್‌ಸ್ಕಿ ಪರವಾಗಿ ನಿಂತಿದೆಯಾದರೂ ಬ್ರಿಟನ್ ಪ್ರಧಾನಿಯು ಅಮೆರಿಕದ ನೆರವಿಲ್ಲದೆ ಶಾಂತಿ ಸಾಧ್ಯವಿಲ್ಲ ಎನ್ನುತ್ತ ಅಮೆರಿಕದ ಆರ್ಥಿಕ ಸಾಮರ್ಥ್ಯಕ್ಕೆ ತಲೆಬಾಗಿದರು. ವಿಧಿ ಇಲ್ಲದೆ ಝೆಲೆನ್‌ಸ್ಕಿ ಮತ್ತೆ ದೊಡ್ಡಣ್ಣನಿಗೆ ಶರಣಾಗಬೇಕಾಯಿತು. ಓವಲ್ ಆಫೀಸ್‌ನಲ್ಲಿ ನಡೆದ ಮೊದಲ ಸುತ್ತಿನ ಮಾತುಕತೆಯಲ್ಲಿ ಝೆಲೆನ್‌ಸ್ಕಿ ತಮ್ಮ ಕೋಪವನ್ನು, ಪ್ರತೀಕಾರ ಬುದ್ಧಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ವಿಫಲರಾದರು. ಪುಟಿನ್ ಒಬ್ಬ ಭಯೋತ್ಪಾದಕ, ಕೊಲೆಗಡುಕ, ನಂಬಿಕೆಗೆ ಅರ್ಹನಲ್ಲದ ವ್ಯಕ್ತಿ, ಅವನನ್ನು ಅಮೆರಿಕ ಏಕೆ ನಿಯಂತ್ರಿಸಲಿಲ್ಲ ಎನ್ನುತ್ತ ಅಸಹನೆಯನ್ನು ವ್ಯಕ್ತಪಡಿಸಿದರು. ‘ಬಡವನ ಕೋಪ ದವಡೆಗೆ ಮೂಲ’ ಎನ್ನುವ ಗಾದೆಯಂತೆ ಮತ್ತೆ ದೊಡ್ಡಣ್ಣನಿಗೇ ಅವರು ಶರಣಾಗಬೇಕಾಯಿತು.

ಝೆಲೆನ್‌ಸ್ಕಿ ಅವರ ಸ್ಥಾನದಲ್ಲಿ ಗಾಂಧಿ ಮಾದರಿಯೊಂದನ್ನು ಇಟ್ಟು ನೋಡೋಣ. ಬಲಿಷ್ಠ ಶಕ್ತಿಗಳಿಂದ ಆಗುವ ಅನ್ಯಾಯವನ್ನು ಗಾಂಧಿ ದೈಹಿಕ ಸಾಮರ್ಥ್ಯದಿಂದ ಎಂದೂ ಎದುರಿಸಲಿಲ್ಲ. ಹೀಗೆ ಎದುರಿಸಿ ಗೆಲ್ಲುವುದು ಸಾಧ್ಯವೆ ಅಥವಾ ಅಸಾಧ್ಯವೆ ಎಂಬ ಪ್ರಶ್ನೆ ಮುಖ್ಯವಲ್ಲ. ಬಾಹ್ಯ ಜಗತ್ತಿನ ವಿದ್ಯಮಾನಗಳು ಅಂತರಂಗದ ಜಗತ್ತಿನಲ್ಲಿ ನಾವು ಗಾಢವಾಗಿ ನಂಬಿ ಸ್ಥಾಪಿಸುವ ತಾತ್ವಿಕತೆಯನ್ನು ಆಧರಿಸಿವೆ. ಸತ್ಯ– ಅಹಿಂಸೆಯ ತತ್ವಗಳ ಮೇಲೆ ಯಾವುದನ್ನು ಸಾಧಿಸುತ್ತೇವೆಯೋ ಅದು ಶಾಶ್ವತ ಎಂಬ ಅಚಲ ವಿಶ್ವಾಸ ಗಾಂಧಿ ತತ್ವದ ಬುನಾದಿ. ದುರ್ಬಲ ಉಕ್ರೇನ್ ದೇಶ ರಷ್ಯಾದಿಂದ ತನಗಾಗುತ್ತಿರುವ ಅನ್ಯಾಯವನ್ನು ಶಕ್ತಿಶಾಲಿ ಅಮೆರಿಕ ಮತ್ತು ಯುರೋಪ್ ದೇಶಗಳ ಶಸ್ತ್ರಾಸ್ತ್ರಗಳ ನೆರವಿನಿಂದ ಎದುರಿಸಿ, ತಪ್ಪಿಗೆ ತಕ್ಕ ಶಿಕ್ಷೆ ವಿಧಿಸುತ್ತೇನೆ ಎಂದು ಭಾವಿಸಿದರೆ, ಝೆಲೆನ್‌ಸ್ಕಿಗಾದ ಮುಖಭಂಗಕ್ಕಿಂತ ಬೇರೇನು ಸಾಧ್ಯ?

‘ಶಸ್ತ್ರಾಸ್ತ್ರ ಸಾಮರ್ಥ್ಯದಲ್ಲಿ ನನಗೆ ನಂಬಿಕೆಯಿಲ್ಲ, ಒಳಿತೆಸಗುವ ಸಾಧ್ಯತೆಯೇ ನನ್ನ ಸಾಮರ್ಥ್ಯ. ನಾನು ಯಾರನ್ನೂ ದ್ವೇಷಿಸುವುದಿಲ್ಲ, ಪುಟಿನ್ ಅವರಿಗೂ ಒಳಿತನ್ನೇ ಬಯಸುತ್ತ ಅವರ ಹೃದಯದಲ್ಲಿ ಅನುಕಂಪ ಹುಟ್ಟಲಿ ಎಂದು ಪ್ರಾರ್ಥಿಸುತ್ತೇನೆ’ ಎಂದು ಝೆಲೆನ್‌ಸ್ಕಿ ಓವಲ್ ಆಫೀಸ್‌ನಲ್ಲಿ ಹೇಳಿದ್ದರೆ, ಹೆಚ್ಚಿನ ಅಂತರರಾಷ್ಟ್ರೀಯ ಅನುಕಂಪವನ್ನು ಅವರು ಗಳಿಸುತ್ತಿದ್ದರು. ಬಲಿಷ್ಠ ದುಷ್ಟಶಕ್ತಿಗಳನ್ನು ಎದುರಿಸುವ ಗಾಂಧಿ ಮಾದರಿಯನ್ನು ಬಲಪಡಿಸುವ ಮೂಲಕ ವಿಶ್ವ ವಿಕಾಸ ಪಥಕ್ಕೆ ಶಾಶ್ವತ ಶಾಂತಿಯ ಸಾಧ್ಯತೆಯನ್ನು ತೋರಿಸುತ್ತಿದ್ದರು.

‘ದ್ವೇಷದಿಂದ ದ್ವೇಷ ಪರಿಹಾರವಾಗದು’ ಎಂಬ ಬುದ್ಧನ ಮಾತು ಇಂದಿಗೂ ಮುಂದೆಂದಿಗೂ ಸತ್ಯ. ಸಂಯಮದ ಮೂಲಕ ಮಾತ್ರ ನಾವು ಇಂತಹ ಸಾಧ್ಯತೆಗಳನ್ನು ನೋಡಬಹುದು. ಆದರೆ ಇಡೀ ಜಗತ್ತು ಸಂಯಮವನ್ನು ಒಪ್ಪುತ್ತಿಲ್ಲ. ‘ಅದು ಅಗತ್ಯ, ಆದರೆ ಅದು ನನ್ನಿಂದ ಸಾಧ್ಯವಾಗುತ್ತಿಲ್ಲ’ ಎಂಬ ಪಶ್ಚಾತ್ತಾಪವೂ ಇಲ್ಲದೆ, ಅಪರಾಧಿ ಪ್ರಜ್ಞೆಯೂ ಇಲ್ಲದೆ ಜಗತ್ತು ಆತ್ಮಹತ್ಯಾ ಪಥವನ್ನು ತುಳಿಯುತ್ತಿರುವುದು ದುರದೃಷ್ಟಕರ. ಶಸ್ತ್ರಾಸ್ತ್ರಗಳ ಬಲದಿಂದ ಮಾತ್ರ ಶಾಂತಿ ಸಾಧ್ಯ, ಶಕ್ತಿಶಾಲಿಗಳಲ್ಲದವರಿಗೆ ಶಾಂತಿ ಸಾಧ್ಯವಿಲ್ಲ ಎಂಬ ನಂಬಿಕೆ ದಿನಗಳೆದಂತೆ ಸುಳ್ಳಾಗುತ್ತಿದೆ. ಗಾಂಧಿ ಪರಿಹಾರವನ್ನು ಒಪ್ಪಿಕೊಳ್ಳದೆ ಜಗತ್ತಿಗೆ ಅನ್ಯಮಾರ್ಗ ಇಲ್ಲ.

ಚುರುಮುರಿ



ಬಜೆಟ್ ಕವನ

• ಸುಮಂಗಲಾ

‘**ಕುವೆಂಪು**, ಅಡಿಗರು, ನಿಸಾರ್ ಅಹಮದ್, ವಿಲ್ಸನ್ ಕಟೀಲರ ಕವನ, ವಚನಗಳು...’ ಬೆಕ್ಕಣ್ಣ ಒಂದು ಎರಡು ಮೂರು ಎಂದು ಎಣಿಸುತ್ತ ಕವಿಗಳ ಹೆಸರುಗಳನ್ನು ಹೇಳುತ್ತಿತ್ತು.

‘ಏನಲೇ... ಈ ಕವಿಗಳ ಕವನ ಓದಬೇಕಂತ ಗುರುತು ಮಾಡಿಕೊಳ್ಳಾಕೆ ಹತ್ತೀಯೇನು?’ ಎಂದೆ ಅಚ್ಚರಿಯಿಂದ.

‘ನಾನು ಓದಕ್ಕಲ್ಲ, ಸಿದ್ದು ಅಂಕಲ್ಲು ಬಜೆಟ್ ಮಂಡಿಸಬೇಕಿದ್ರೆ ಇವರ ಕವನಗಳ ಸಾಲುಗಳನ್ನು ಉಲ್ಲೇಖ ಮಾಡ್ಯಾರೆ. ಅದ್ಸರಿ, ಈ ಬಜೆಟ್ ಮಂಡಿಸಬೇಕಿದ್ರೆ ಕವನಗಳನ್ನು ಎದಕ್ಕೆ ಉಲ್ಲೇಖಿಸತಾರೆ?’ ಬೆಕ್ಕಣ್ಣ ಕೇಳಿದಾಗ ನನಗೂ ಥಟ್ಟನೆ ಉತ್ತರ ಹೊಳೆಯಲಿಲ್ಲ.

‘ಕವಿಗಳ ಕವನದ ಸಾಲುಗಳನ್ನು ನಡುವೆ ಸೇರಿಸಿದ್ರೆ ಬಜೆಟ್ಟಿಗೆ ಒಂದು ವಜನು ಬರತೈತಿ. ಬಜೆಟ್ಟಿನಾಗೆ ಏನು ಮಂಡನೆ ಮಾಡತಾರ ಅದಕ್ಕೆ ಸಮರ್ಥನೆ ಸಿಗತೈತಿ ಅಂತ ಇರಬಕು’ ಎಂದೆ.

‘ಅಂದರೆ ಕವಿಗಳು ಕವಿತೆಗಳಲ್ಲಿ ವ್ಯಕ್ತಪಡಿಸಿದ ಸಮಬಾಳಿನ ಆಶಯವನ್ನು ಬಜೆಟ್ಟಿನಾಗೆ ಪೂರ್ಣ ಮಾಡತೀವಿ ಅಂತೇನು?’ ಬೆಕ್ಕಣ್ಣನ ಮರುಪ್ರಶ್ನೆ.

‘ಹೌದು, ಆದರೆ ಬಜೆಟ್ ಮಿತಿವಳಗೆ ಅನ್ನೋ ಕರಾರಿಗೆ ಒಳಪಟ್ಟು!’ ಎಂದು ನಕ್ಕೆ.

‘ಹಂಗಾರೆ ನಮ್ ಸಿಎಮ್ಮು, ನಿರ್ಮಲಕ್ಕ ಇವ್ರೆಲ್ಲ ಬಜೆಟ್ ಮಂಡನೆಗೆ ಮೊದಲು ಆಳವಾಗಿ ಕವನಾಧ್ಯಯನ ಮಾಡತಾರ’.

‘ಅವರಿಗೆಲ್ಲಿ ಟೈಮಿರತೈತಿ? ಬಜೆಟ್ ಭಾಷಣ ತಯಾರು ಮಾಡೋ ಅವರ ತಂಡದವರು ಕವನಗಳನ್ನು ಓದಿ, ಆರಿಸತಾರೆ’.

‘ಬಜೆಟ್ ಭಾಷಣದಾಗೆ ಉಲ್ಲೇಖಿಸಿದ ಕವಿಗಳಿಗೆ ಏನರೆ ವಿಶೇಷ ಇನಾಮು ಕೊಡಬೇಕಲ್ಲವಾ’ ಎಂದು ಭಾರಿ ಮುಗುಮ್ಮಾಗಿ ಕೇಳಿತು.

‘ಹೋಗಲೇ... ನೀ ಇಲ್ಲದ ಕ್ಯಾತೆ ತೆಗೆಯಾಕೆ ಹತ್ತಿ. ನಿಜವಾದ ಕವಿಗಳು ಇನಾಮು ಬಯಸಂಗಿಲ್ಲ. ಹಂಗೆಲ್ಲ ಇನಾಮು ಕೊಡತಿದ್ದರೆ, ಬಜೆಟ್ ಮಂಡನೆವಳಗೆ ಉಲ್ಲೇಖಿಸಕ್ಕೆ ಅಂತನೇ ಕವನ ಬರೆಯೋ ಬಜೆಟ್ ಕವಿಗಳೂ ಇರತಿದ್ದರು’ ಎಂದೆ.

‘ನಾ ಮುಂದಿನ ವರ್ಷದ ಬಜೆಟ್ಟಿಗೆ ಅಂತ ಈಗಲೇ ಒಂದಿಷ್ಟು ಕವನ ಬರದೀನಿ. ಸಿದ್ದು ಅಂಕಲ್, ಮತ್ತ ನಿರ್ಮಲಕ್ಕಂಗೆ ಕಳಿಸೂದೊಂದೇ ಬಾಕಿ!’ ಎಂದು ಹಿಹ್ಹಿಗುಟ್ಟಿತು.

ಸಂಗತ

‘ನಿರ್ಜೀವ’ ಹಾಳೆಯಲ್ಲೊಂದು ಭಾವಲಹರಿ

ಕವಿತೆಗಳ ಬಳಕೆಯು ಬಜೆಟ್ ಪ್ರಸ್ತುತಿಗೆ ಸೃಜನಶೀಲ ಮತ್ತು ಸಾಂಸ್ಕೃತಿಕ ಆಯಾಮವನ್ನು ನೀಡುತ್ತದೆ...

• ಸದಾಶಿವ್ ಸೊರಟೂರು

ಅಂಕಿಗಳು, ಆ ಕೋನ ಈ ಕೋನ, ಬೀಜಗಣಿತ, ಕೂಡಿಸು, ಭಾಗಿಸು... ಇಂಥವೇ ಪದಗಳಿಂದ ತುಂಬಿ ಹೋಗಿರುತ್ತಿದ್ದ ಗಣಿತದ ತರಗತಿಗಳೆಂದರೆ ನನಗೆ ಮೊದಲಿನಿಂದಲೂ ತಿರಸ್ಕಾರ. ಆರೈಲು ಹೋಗಲು ಎಷ್ಟು ಹೊತ್ತು ಬೇಕು, ಕುರಿಯನ್ನು ಎಷ್ಟಕ್ಕೆ ಮಾರಬೇಕಾಯಿತು, ಅಪ್ಪನ ವಯಸ್ಸು ಇಷ್ಟಾದರೆ ಮಗನ ವಯಸ್ಸು ಎಷ್ಟು... ಇಂಥವೇ ಲೆಕ್ಕಾಚಾರ. ಅಷ್ಟೂ ಸಮಯ ಶುಷ್ಕವಾಗಿ ಕಳೆದುಹೋಗುತ್ತಿತ್ತು. ಕಲಿತದ್ದು ಮರೆತುಹೋಗುತ್ತಿತ್ತು.

ಹತ್ತನೇ ತರಗತಿ ವೇಳೆಗೆ, ಗಣಿತ ಹೇಳಿಕೊಡಲು ಹೊಸ ಶಿಕ್ಷಕರೊಬ್ಬರು ಬಂದರು. ಗಣಿತವನ್ನು ಒಂದು ಭಾಷೆಯಂತೆ, ಸಮಾಜ ವಿಜ್ಞಾನದಂತೆ, ಕಥೆಯಂತೆ ಹೇಳುತ್ತಿದ್ದರು. ಅಲ್ಲಿ ನಗುವಿರುತ್ತಿತ್ತು, ಭಾವನಾತ್ಮಕ ಸನ್ನಿವೇಶ ಇರುತ್ತಿತ್ತು. ಅದರ ನಡುವೆ ಯಾವುದೋ ಮಾಯೆಯಲ್ಲಿ ಲೆಕ್ಕಗಳು ಎದೆಗೆ ಇಳಿಯುತ್ತಿದ್ದವು.

ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಬಜೆಟ್ ಮಂಡನೆಯ ಪ್ರತಿಗಳನ್ನು ನನ್ನ ಮೊದಲಿನ ಗಣಿತದ ತರಗತಿಗಳನ್ನು ನೆನಪಿಸಿಕೊಂಡು ಮುಟ್ಟಲೂ ಹೋಗುತ್ತಿರಲಿಲ್ಲ. ಅದೊಂದು ಬರೀ ಅಂಕಿಗಳ ದಾಖಲೆ, ಯಾವುದೇ ಭಾವನೆ ಇಲ್ಲದ ಒಂದು ನಿರ್ಜೀವ ಪತ್ರಿಕೆ ಅನ್ನಿಸುತ್ತಿತ್ತು.


ಮೊನ್ನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಹಾಳೆಗಳನ್ನು ತಿರುವಿ ಹಾಕುವಾಗ ನನ್ನ ಆ ಹೊಸ ಗಣಿತ ಶಿಕ್ಷಕರು ನೆನಪಾದರು. ‘ನಮ್ಮ ಕೈಬುಟ್ಟಿಯಲಿ/ ಸಿಡಿಲ ಗೂಡಿಹುದು/ ಹುಡುಕಿ ನೋಡಿದರಲ್ಲಿ/ ಸುಮದ ಬೀಡಿಹುದು...’ ಎಂಬ ಕುವೆಂಪು ಅವರ ಕವಿತೆಯಿಂದ ಅದು ಶುರುವಾಗುತ್ತದೆ. ಬರೀ ಲೆಕ್ಕಾಚಾರದ ನಿರ್ಜೀವ ಹಾಳೆಗೆ ಥಟ್ಟನೆ ಜೀವ ಬಂದಂತೆ ಆಗುತ್ತದೆ. ‘ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ/ ಸಮಬಗೆಯ ಸಮಸುಖದ ಸಮದುಃಖದ/ ಸಾಮರಸ್ಯದ ಸಾಮಗಾನ ಲಹರಿಯ ಮೇಲೆ/ ತೇಲಿ ಬರಲಿದೆ ನೋಡು, ನಮ್ಮ ನಾಡು...’ ಎಂಬ ಗೋಪಾಲಕೃಷ್ಣ ಅಡಿಗರ ಕವಿತೆಯು ಲೆಕ್ಕಾಚಾರ ಓದಲು ಬಂದವನನ್ನು ಒಳಗೆ ಎಳೆದುಕೊಳ್ಳುತ್ತದೆ.

ಅವ್ವ ನಮಗೆ ಎಂದಾದರೂ ಹತ್ತು ರೂಪಾಯಿ ನೀಡಿದಾಗ ಅದರಲ್ಲಿ ಜೀರಿಗೆಯ ಘಮ ಇರುತ್ತಿತ್ತು. ಹತ್ತು ರೂಪಾಯಿ ಬೆಲೆಗಿಂತ ಹೆಚ್ಚಾಗಿ ಅದಕ್ಕೆ ಮಹತ್ವ ಬರುತ್ತಿದ್ದುದು ಜೀರಿಗೆಯ ವಾಸನೆಯಿಂದ. ಎಷ್ಟೋ ಬಾರಿ ಅದನ್ನು ಖರ್ಚು ಮಾಡಲು ಕೂಡ ಮನಸ್ಸಾಗುತ್ತಿರಲಿಲ್ಲ. ಕವಿತ್ವದಿಂದ, ಗಣ್ಯರ ಮಾತುಗಳಿಂದ ಕೂಡಿದ ಬಜೆಟ್ ಹಾಳೆಗಳಿಗೆ ಜೀರಿಗೆಯ ವಾಸನೆಯಿಂದ ಬಂದಂತಹ ಜೀವಂತಿಕೆ ಬಂದಂತೆ ಆಗುತ್ತದೆ.

1991ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಬಜೆಟ್ ಮಂಡಿಸುವಾಗ ಬಳಸಿಕೊಂಡ ವಿಕ್ಟರ್ ಹ್ಯೂಗೊ ಅವರ ಸಾಲುಗಳು ಮೆಚ್ಚುಗೆಗೆ ಪಾತ್ರವಾಗಿದ್ದವು. ಅದುವರೆಗಿನ ಬಜೆಟ್ ಹಾಳೆಗಳು ಅಷ್ಟೇನೂ ಮನ ಸೆಳೆಯುವಂತೆ ಇರುತ್ತಿರಲಿಲ್ಲ. ನಂತರ ಪಿ.ಚಿದಂಬರಂ ಅವರು ಬಜೆಟ್ ಹಾಳೆಗಳನ್ನು ಕವಿತೆಗಳನ್ನು ಬಳಸಿ ಬಹಳಷ್ಟು ಹೊಸತಾಗಿಸಿದರು. ಅವರು 2008ರಲ್ಲಿ ಬಜೆಟ್ ಮಂಡಿಸುವಾಗ ಬಳಸಿದ ‘ಕೃಷಿ ಮಾಡಿ ಜೀವನ ನಡೆಸುವವರೇ ನಿಜವಾದ ಜೀವನವನ್ನು ನಡೆಸುತ್ತಾರೆ; ಇತರರು ಭಿಕ್ಷೆ ಬೇಡುವವರಂತೆ’ ಎಂಬ ತಿರುವಳ್ಳುವರ್ ಅವರ ಕವಿತೆಯ ಸಾಲುಗಳು ಬಹಳಷ್ಟು ಮೆಚ್ಚುಗೆ ಗಳಿಸಿದ್ದವು.

ಈ ವರ್ಷಗಳಲ್ಲಿ ಹಲವು ಬಜೆಟ್‌ಗಳನ್ನು ಮಂಡಿಸಿರುವ ನಿರ್ಮಲಾ ಸೀತಾರಾಮನ್ ಅವರ ಬಜೆಟ್‌ನ ಪ್ರಸ್ತುತಿಗಳು ಕೂಡ ಕವಿತೆಗಳಿಂದ ಆಕರ್ಷಕವಾಗಿ ಇರುತ್ತವೆ. ಅವರು 2021- 22ರ ಬಜೆಟ್ ಮಂಡನೆ ವೇಳೆಯಲ್ಲಿ ರವೀಂದ್ರನಾಥ ಟ್ಯಾಗೋರ್ ಅವರ ‘ವೇರ್ ದಿ ಮೈಂಡ್ ಈಸ್ ವಿದೌಟ್ ಫಿಯರ್’ ಎಂಬ ಕವಿತೆಯನ್ನು ಉಲ್ಲೇಖಿಸಿದ್ದರು. ಅದು ಆ ಹೊತ್ತಿಗೆ ತುಂಬಾ ಸೂಕ್ತವಾದ ಕವಿತೆಯಾಗಿತ್ತು.

ಕವಿತೆಯ ಶಕ್ತಿ ದೊಡ್ಡದು. ಕವಿತೆಗಳು ಜಗತ್ತಿನ ಅಘೋಷಿತ ಶಾಸನಗಳು. ನೂರಾರು ಪುಟಗಳ ಬಜೆಟ್ ಏನು ಹೇಳಬೇಕು ಎಂಬುದನ್ನು ಒಂದು ಕವಿತೆಯ ಸಾಲು ಹೇಳಿಬಿಡುತ್ತದೆ. ಬಜೆಟ್ ಮಂಡಿಸುವವರು ಈ ಬಜೆಟ್ ಮೂಲಕ ನಾಡಿಗೆ ತಾವೇನು ಕೊಡುತ್ತಿದ್ದೇವೆ ಎಂಬುದನ್ನು ಒಂದು ಕವಿತೆಯ ಸಾಲಿನ ಮುಖೇನ ಹೇಳಲು ಸಾಧ್ಯ.



ಕವಿತೆ ಮತ್ತು ವಿಶೇಷ ಸಾಲುಗಳ ಬಳಕೆಯು ಸರ್ಕಾರ ರೂಪಿಸಹೊರಟಿರುವ ನೀತಿಯ ಉದ್ದೇಶಗಳನ್ನು ಸಾಂಸ್ಕೃತಿಕವಾಗಿ ಸಮರ್ಥಿಸಿಕೊಳ್ಳಲು ಸಹ ನೆರವಾಗುತ್ತದೆ. ಕವಿತೆಗಳ ಸರಳ ಭಾಷೆ ಮತ್ತು ಭಾವನಾತ್ಮಕ ಆಯಾಮವು ಸಂಕೀರ್ಣ ಆರ್ಥಿಕ ಪರಿಕಲ್ಪನೆಗಳನ್ನು ಸಾರ್ವಜನಿಕರಿಗೆ ಸುಲಭವಾಗಿ ತಲುಪಿಸುತ್ತದೆ. ನಾಡಿನ, ದೇಶದ ಬಹುಸಾಂಸ್ಕೃತಿಕತೆಯನ್ನು ಪ್ರದರ್ಶಿಸುವ ಸಾಧನವಾಗಿಯೂ ಕೆಲಸ ಮಾಡುತ್ತದೆ, ಒಗ್ಗೂಡಿಸುತ್ತದೆ.

ಕವಿತೆಗಳ ಬಳಕೆಯು ಬಜೆಟ್ ಪ್ರಸ್ತುತಿಗೆ ಸೃಜನಶೀಲ ಮತ್ತು ಸಾಂಸ್ಕೃತಿಕ ಆಯಾಮವನ್ನು ನೀಡುತ್ತದೆ. ಆದರೆ, ಇದು ನೀತಿಯ ವಿವರಗಳೊಂದಿಗೆ ಸ್ಪಷ್ಟವಾಗಿ ಹೊಂದಿಕೊಂಡಾಗ ಮಾತ್ರ ಪರಿಣಾಮಕಾರಿಯಾಗುತ್ತದೆ. ಸರಳ, ಪ್ರಾಸಂಗಿಕ ಮತ್ತು ಸಂವೇದನಾಶೀಲ ನಡೆಯ ನಡುವಿನ ಸಮತೂಕವೇ ಬಜೆಟ್ ಹಾಳೆಗಳನ್ನು ಸೆಳೆಯುವಂತೆ ಮಾಡುತ್ತದೆ.

ಕೆಲವು ವಿಮರ್ಶಕರು ಬಜೆಟ್‌ಗಳಲ್ಲಿ ಕವಿತೆಗಳ ಬಳಕೆ ‘ಅಸಂಬದ್ಧ ಅಲಂಕಾರ’ ಎಂದು ಟೀಕಿಸುತ್ತಾರೆ. ಕವಿತೆಗಳು ನೀತಿಯ ವಾಸ್ತವಿಕ ಅನುಷ್ಠಾನದಿಂದ ಗಮನವನ್ನು ವಿಚಲಿತಗೊಳಿಸಬಹುದು ಎನ್ನುತ್ತಾರೆ. ಆದರೆ ಎಚ್ಚರಿಕೆಯಿಂದ ಬಳಸಿದ್ದೇ ಆದರೆ ಇದರ ಪರಿಣಾಮ ತುಂಬಾ ದೊಡ್ಡದು. ಬಜೆಟ್ ಪ್ರಸ್ತುತಿಗಳು ಸಾಹಿತ್ಯದ ಹೊರೆಯಿಂದ ಅತಿಯಾಗಿ ಭಾರವಾಗದಂತೆಯೂ ಅರ್ಥವೇ ಆಗದ ಕಠಿಣ ಭಾಷೆಯ ಅಬ್ಬರದಿಂದಲೂ ತೂಗದೆ, ಸಮತೋಲನ ಕಾಯ್ದುಕೊಂಡು, ಜನರಿಗೆ ಹತ್ತಿರವಾಗುವಂತೆ ಇರಬೇಕು.

ವಾಚಕರ ವಾಣಿ

ಶಾಸಕರ ಸೇವೆಯೇ ಸರ್ಕಾರದ ಕರ್ತವ್ಯ!

ವಿಧಾನಸಭಾ ಕಲಾಪಕ್ಕೆ ಜನಪ್ರತಿನಿಧಿಗಳು ಕ್ಷುಲ್ಲಕ ಕಾರಣಕ್ಕಾಗಿ ಗೈರುಹಾಜರಾಗುವುದನ್ನು ತಪ್ಪಿಸಲು, ಊಟದ ಬಳಿಕ ವಿಶ್ರಾಂತಿ ಪಡೆಯಲು ಮೊಗಸಾಲೆಯಲ್ಲಿ ರಿಕ್ಲೇನರ್ ಚೇರ್, ಮಸಾಜ್ ಚೇರ್ ಹಾಗೂ ಕಾಫಿ- ಟೀ ಕುಡಿಯುವುದಕ್ಕಾಗಿ ಪದೇ ಪದೇ ಹೊರಹೋಗುವುದನ್ನು ತಪ್ಪಿಸಲು ಸದನದ ಒಳಗೇ ಕಾಫಿ, ಟೀ ವ್ಯವಸ್ಥೆ ಮಾಡಲು ಮುಂದಾಗಿರುವ ಸ್ಪೀಕರ್ ಕ್ರಮವನ್ನು ಮೆಚ್ಚಬೇಕೋ ಅಥವಾ ಅದು ಅವರ ಅಸಹಾಯಕತೆ ಎಂದು ಹೇಳಬೇಕೋ ತಿಳಿಯುತ್ತಿಲ್ಲ.

ಚಿಕ್ಕ ಮಕ್ಕಳು ಹಟ ಮಾಡಿದಾಗ ಪಾಲಕರು ಸಿಹಿ ತಿನಿಸು, ಆಟಿಕೆ ಕೊಡಿಸುವ ಹಾಗೇ ಇಲ್ಲಿ ಸ್ಪೀಕರ್ ವರ್ತಿಸಿದ್ದಾರೆ ಎನಿಸುತ್ತದೆ. ಪ್ರಬುದ್ಧತೆ ಮೆರೆಯಬೇಕಾದ ಶಾಸಕರಿಗೆ ಅವರು ಶಿಸ್ತಿನ ಪಾಠ ಕಲಿಸುವುದು ಬಿಟ್ಟು ಅವರ ತಾಳಕ್ಕೆ ತಕ್ಕಂತೆ ಕುಣಿಯುವುದರಿಂದ ಸದನದ ಗಾಂಭೀರ್ಯ, ಪಾವಿತ್ರ್ಯವನ್ನು ಹೇಗೆ ಕಾಪಾಡಲು ಸಾಧ್ಯ? ಈ ಬಗ್ಗೆ ಮರುಪರಿಶೀಲನೆ ಮಾಡದಿದ್ದರೆ ‘ಜನಸೇವೆಯೇ ಜನಾರ್ದನನ ಸೇವೆ’ ಎಂಬುದಕ್ಕೆ ಬದಲಾಗಿ ‘ಶಾಸಕರ ಸೇವೆಯೇ ಸರ್ಕಾರದ ಕರ್ತವ್ಯ’ ಎಂದು ಹೇಳುವುದು ಸೂಕ್ತ ಎನಿಸುತ್ತದೆ.

ಸುರೇಂದ್ರ ಪೈ, ಭಟ್ಕಳ

ಸಾರ್ವಜನಿಕ ಶೌಚಾಲಯ ವೈಯಕ್ತಿಕ ಸ್ವತ್ತಲ್ಲ

ಸರ್ಕಾರಿ ಕಚೇರಿಯೊಂದರಲ್ಲಿ ಇತ್ತೀಚೆಗೆ ಆದ ಅನುಭವ ಇದು. ಅಲ್ಲಿನ ಗಂಡಸರ ಶೌಚಾಲಯದ ಹೊರಗೆ ವ್ಯಕ್ತಿಯೊಬ್ಬರು ಚಡಪಡಿಸುತ್ತಾ ನಿಂತಿದ್ದರು. ನೈಸರ್ಗಿಕ ಕರೆ ಮುಗಿಸಲು ಹೋದ ನನ್ನನ್ನು ಒಳಹೋಗದಂತೆ ಮನವಿ ಮಾಡಿದರು. ಕಾರಣ ಕೇಳಿದಾಗ, ಒಳಗೆ ತಮ್ಮ ಮಗಳು ನೈಸರ್ಗಿಕ ಕರೆ ಮುಗಿಸಲು ಹೋಗಿರುವುದಾಗಿ ತಿಳಿಸಿದರು. ಪಕ್ಕದಲ್ಲಿ ಇದ್ದ ಹೆಂಗಸರ ಶೌಚಾಲಯಕ್ಕೆ ಬೀಗ ಹಾಕಿದ್ದ ಕಾರಣ ವಿಧಿಯಿಲ್ಲದೆ ಗಂಡಸರ ಶೌಚಾಲಯಕ್ಕೆ ತನ್ನ ತಂದೆಯ ರಕ್ಷಣೆಯಲ್ಲಿ ಆ ಹೆಣ್ಣುಮಗು ಹೋಗಬೇಕಾಯಿತು.

ಪಕ್ಕದಲ್ಲಿಯೇ ಇದ್ದ ಕಚೇರಿಯ ಮಹಿಳಾ ನೌಕರರೊಬ್ಬರನ್ನು ಹೆಂಗಸರ ಶೌಚಾಲಯಕ್ಕೆ ಬೀಗ ಹಾಕಿರುವುದು ಏಕೆ ಎಂದು ಕೇಳಿದಾಗ ‘ಹೆಂಗಸರು ಸ್ಯಾನಿಟರಿ ಪ್ಯಾಡ್‌ಗಳನ್ನು ಹಾಕಿ ಗಲೀಜು ಮಾಡುತ್ತಾರೆ, ಕಟ್ಟಿಕೊಳ್ಳುತ್ತೆ. ಹಾಗಾದಾಗ ನಾವು ಎಲ್ಲಿ ಹೋಗುವುದು’ ಎಂದರು. ಆಕೆ ಹೇಳಿದಂತೆ ಕೆಲವು ಹೆಂಗಸರು ಮಾಡಿರಬಹುದು. ಆದರೆ ಅದಕ್ಕಾಗಿ ತಮ್ಮ ವೈಯಕ್ತಿಕ ಸ್ವತ್ತಿನಂತೆ ಸರ್ಕಾರಿ ಕಚೇರಿಯ ಶೌಚಾಲಯಕ್ಕೆ ಬೀಗ ಹಾಕಿ ಇಟ್ಟುಕೊಳ್ಳುವುದು ಎಷ್ಟು ಸರಿ? ಸ್ತ್ರೀಯರ ಶೌಚಾಲಯಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ಹಾಕಲೆಂದು ಒಂದು ಡಬ್ಬ ಇಟ್ಟು ಬೋರ್ಡ್ ಹಾಕಿದಲ್ಲಿ ಈ ಸಮಸ್ಯೆ ಪರಿಹಾರವಾಗಬಹುದು. ಸಂಬಂಧಪಟ್ಟವರು ಈ ಬಗ್ಗೆ ಯೋಚಿಸಿ ಕ್ರಮ ಕೈಗೊಳ್ಳುವುದು ಒಳಿತು.

ಎಸ್.ರವಿ, ಮೈಸೂರು

ಮಾರಕ ‘ರೋಗ’

ಇದು, ಲಂಚಸೇವಾ ಆಯೋಗ!
ಕೇಳಿದಷ್ಟು ಹಣ
ಕೊಟ್ಟರೆ ಸಿಗುವುದು
ಬೇಕಾದ ಉದ್ಯೋಗ
ಪ್ರತಿಭಾವಂತರು
ಬಡವರ ಮಕ್ಕಳಿಗಿಲ್ಲ
ಇಲ್ಲಿ ನೌಕರಿ ಯೋಗ
ಇದು ಕರುನಾಡಿಗೆ
ತಗಲಿರುವ
ಮಾರಕ ರೋಗ...!

ಪ್ರೊ. ಉಮಾಮಹೇಶ್ವರ, ಹೊಸಪೇಟೆ

ರೈಲು ನಿಲ್ದಾಣ: ದಟ್ಟಣೆ ನಿರ್ವಹಿಸಬೇಕಿದೆ

ರೈಲ್ವೆ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ಜನದಟ್ಟಣೆ ನಿಯಂತ್ರಿಸಲು ಬೆಂಗಳೂರು ಸೇರಿದಂತೆ ಜನನಿಬಿಡವಾದ 60 ನಿಲ್ದಾಣಗಳಲ್ಲಿ ದೃಢೀಕೃತ ಟಿಕೆಟ್ ಇರುವವರಿಗೆ ಮಾತ್ರ ಪ್ಲ್ಯಾಟ್‌ಫಾರ್ಮ್ ಪ್ರವೇಶಿಸಲು ಅವಕಾಶ ನೀಡುವುದಾಗಿ ರೈಲ್ವೆ ಸಚಿವರು ಹೇಳಿದ್ದಾರೆ (ಪ್ರ.ವಾ., ಮಾರ್ಚ್ 8). ಟಿಕೆಟ್ ಇಲ್ಲದವರಿಗೆ ಹೊರಗೆ ಕಾಯಲು ಸ್ಥಳಾವಕಾಶ ಮಾಡಲಾಗುವುದಂತೆ. ಬೆಂಗಳೂರಿನ ಯಶವಂತಪುರ ಜಂಕ್ಷನ್ ಸ್ಟೇಷನ್‌ನಲ್ಲಿ ಉನ್ನತೀಕರಣ ಕಾಮಗಾರಿ ನಡೆಯುತ್ತಿದೆ. ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಂದ ಓಡಾಟಕ್ಕೆ ಒಂದು ಬಗೆಯ ಇಕ್ಕಟ್ಟು ಸೃಷ್ಟಿಯಾಗಿದೆ. ರೈಲ್ವೆ ಇಲಾಖೆ, ರಾಜ್ಯ ಸರ್ಕಾರ, ಮಹಾನಗರಪಾಲಿಕೆಯ ನಡುವೆ ಸಮನ್ವಯ ಕಾಣುತ್ತಿಲ್ಲ. ಈಗ ನಿಲ್ದಾಣವನ್ನು ಸಮೀಪಿಸುವುದೇ ದುಸ್ತರ (ಎರಡು ಟರ್ಮಿನಲ್‌ಗಳೂ ಹಾಗೇ). ಒಳಹೋದರೆ ಪ್ಲ್ಯಾಟ್‌ಫಾರ್ಮ್ 1,2,3ರಲ್ಲಿ ಕನಿಷ್ಠ ಸೌಕರ್ಯಗಳ ಕೊರತೆ ಇದೆ. ಘೋಷಣೆ ಸಮರ್ಪಕವಾಗಿಲ್ಲ. ಹೊರಗೆ ಪ್ರಯಾಣಿಕರು ಎಲ್ಲೆಂದರಲ್ಲಿ ಲಗೇಜ್ ಸಮೇತ ಕುಳಿತಿರುತ್ತಾರೆ.

ಬೆಂಗಳೂರು ಸಿಟಿ ರೈಲು ನಿಲ್ದಾಣದಲ್ಲಿ ದಟ್ಟಣೆ ಹೆಚ್ಚಾಯಿತೆಂದು ಕೆಲವು ರೈಲುಗಳನ್ನು ಯಶವಂತಪುರದಿಂದ ಆರಂಭಿಸಲಾಯಿತು. ಈಗ ಅಲ್ಲೇ ದಟ್ಟಣೆ ನಿರ್ವಹಿಸಲಾಗದ ಸ್ಥಿತಿ ಇದೆ. ರೈಲು ಹಿಡಿಯಲು ನಿಲ್ದಾಣ ತಲುಪಬೇಕು, ಟಿಕೆಟ್ ಪಡೆಯಬೇಕು, ಪ್ಲ್ಯಾಟ್‌ಫಾರ್ಮ್ ಯಾವುದೆಂದು ಖಚಿತಪಡಿಸಿಕೊಂಡು ಅಲ್ಲಿಗೆ ಹೋಗಿ ಕಾಯಬೇಕು- ಈ ಮೂಲ ಪ್ರಕ್ರಿಯೆಗೆ ಅಡಚಣೆ ಬಾರದ ವ್ಯವಸ್ಥೆ ಇರಬೇಕು. ಇದಕ್ಕೆ ಸಂಬಂಧಪಟ್ಟವರ ನಡುವೆ ಸತತ ಸಂಪರ್ಕ, ಸಹಕಾರ ಅತ್ಯಗತ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಜಲ ಸಂರಕ್ಷಣೆ: ತಂತ್ರಜ್ಞಾನದ ಅರಿವಿರಲಿ

ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸಮೀಪದ ಗೌರಿ ನಾಯ್ಕ ಅವರು ಗುದ್ದಲಿ, ಹಾರೆಯಂತಹ ವಸ್ತುಗಳನ್ನು ಬಳಸಿ ಏಕಾಂಗಿಯಾಗಿ ನಾಲ್ಕು ಬಾವಿಗಳನ್ನು ತೋಡಿ ಜಲವೃದ್ಧಿ ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 9). ಹೀಗೆ ಬಾವಿ ತೋಡುವವರಿಗೆ ಜಲ ಸಂರಕ್ಷಣಾ ತಂತ್ರಜ್ಞಾನದ ಬಗ್ಗೆ ತಿಳಿಸಬೇಕಾಗಿದೆ. ಮಳೆನೀರು ಸಂಗ್ರಹಿಸುವ ತಂತ್ರಜ್ಞಾನದಲ್ಲಿ ಕೃಷಿ ಹೊಂಡ ಅಥವಾ ಬಾವಿಯನ್ನು ಸರಿಯಾದ ಜಲಾನಯನ ಪ್ರದೇಶದಲ್ಲಿ ತೋಡುವುದು, ನೀರು ಭೂಮಿಯಲ್ಲಿ ಇಂಗಿ ಹೋಗುವುದನ್ನು ತಡೆಯಲು ಹೊಂಡಕ್ಕೆ ಪ್ಲಾಸ್ಟಿಕ್ ಹೊದಿಕೆ ಹಾಕುವುದು, ಹೊಂಡದ ಸುತ್ತಲೂ ಬೇಲಿ ನಿರ್ಮಾಣ ಮಾಡಿ, ಮಕ್ಕಳು ಅಥವಾ ಪ್ರಾಣಿಗಳು ಹೊಂಡಕ್ಕೆ ಬೀಳುವುದನ್ನು ತಡೆಯುವಂತಹ ಸಂಗತಿಗಳನ್ನು ತಿಳಿಸಬೇಕು. ಆಗ ವರ್ಷವಿಡೀ ನೀರು ವೃದ್ಧಿಯಾಗಿ ಜಲಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಬಹುದು.

ಎಚ್.ಆರ್.ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕರ್ನಾಟಕದ ತಲಾ ಆದಾಯ

2023-24 ₹3,39,813

2024-25 ₹3,80,906

ಜಿಲ್ಲಾವಾರು ತಲಾ ಆದಾಯ (2023-24)

(ಆವರಣದಲ್ಲಿರುವುದು ಒಟ್ಟು ರಾಜ್ಯ ಆಂತರಿಕ ಉತ್ಪನ್ನಕ್ಕೆ ಜಿಲ್ಲೆಗಳ ಕೊಡುಗೆ)

ಜಿಲ್ಲೆ	ತಲಾ ಆದಾಯ
ಬೆಂಗಳೂರು ನಗರ	₹7,38,910 (39.1%)
ದಕ್ಷಿಣ ಕನ್ನಡ	₹5,56,059 (5.4%)
ಉಡುಪಿ	₹5,33,469 (2.6%)
ಚಿಕ್ಕಮಗಳೂರು	₹4,44,472 (2.1%)
ಬೆಂಗಳೂರು ಗ್ರಾಮಾಂತರ	₹4,04,138 (1.9%)
ಶಿವಮೊಗ್ಗ	₹3,49,177 (2.8%)
ಮಂಡ್ಯ	₹3,06,448 (2.4%)
ತುಮಕೂರು	₹3,02,707 (3.6%)
ಕೊಡಗು	₹2,94,898 (0.7%)
ಹಾಸನ	₹2,94,272 (2.3%)
ಬಳ್ಳಾರಿ	₹2,93,985 (2.1%)
ರಾಮನಗರ	₹2,77,619 (1.5%)
ಉತ್ತರ ಕನ್ನಡ	₹2,66,619 (1.7%)
ಧಾರವಾಡ	₹2,61,563 (2.3%)
ಚಾಮರಾಜನಗರ	₹2,59,387 (1.2%)
ಬಾಗಲಕೋಟೆ	₹2,49,478 (2.3%)
ಮೈಸೂರು	₹2,39,296 (3.5%)
ಚಿಕ್ಕಬಳ್ಳಾಪುರ	₹2,31,154 (1.4%)
ಕೋಲಾರ	₹2,15,255 (1.6%)
ದಾವಣಗೆರೆ	₹2,09,655 (1.6%)
ಚಿತ್ರದುರ್ಗ	₹1,98,950 (1.6%)
ಗದಗ	₹1,94,453 (1.0%)
ಹಾವೇರಿ	₹1,84,111 (1.4%)
ರಾಯಚೂರು	₹1,66,371 (1.6%)
ವಿಜಯನಗರ	₹1,65,546 (1.3%)
ವಿಜಯಪುರ	₹1,63,431 (1.9%)
ಬೀದರ್	₹1,63,298 (1.4%)
ಬೆಳಗಾವಿ	₹1,62,987 (3.9%)
ಕೊಪ್ಪಳ	₹1,61,491 (1.1%)
ಯಾದಗಿರಿ	₹1,46,364 (0.9%)
ಕಲಬುರಗಿ	₹1,43,610 (1.9%)

ಸರ್ಕಾರಕ್ಕೆ ವಿತ್ತೀಯ ಶಿಸ್ತು ಕಾಯ್ದುಕೊಳ್ಳುವ ಸವಾಲು



ಕರ್ನಾಟಕ ಆರ್ಥಿಕ ಸಮೀಕ್ಷೆ 2024–25

2024–25ನೇ ಸಾಲಿನ ಕರ್ನಾಟಕದ ಆರ್ಥಿಕ ಸಮೀಕ್ಷೆಯು ರಾಜ್ಯದ ಆದಾಯ, ವೆಚ್ಚಗಳ ವಿವರಗಳನ್ನು ಒಳಗೊಂಡಿರುವುದರ ಜತೆಗೆ ಆರ್ಥಿಕ ಮುನ್ನೋಟವನ್ನೂ ನೀಡಿದೆ. ಕೋವಿಡ್ ಪರಿಸ್ಥಿತಿಯ ನಂತರ ರಾಜ್ಯದ ಆರ್ಥಿಕ ಪರಿಸ್ಥಿತಿ ಚೇತರಿಸಿಕೊಂಡಿದೆ ಎಂದು ಸಮೀಕ್ಷೆ ಹೇಳಿದೆ. ಸರ್ಕಾರದ ವೆಚ್ಚ ಹೆಚ್ಚಾಗಿ, ಆದಾಯ ಕುಸಿಯುತ್ತಿದ್ದರೂ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡಿದ್ದು, ವಿತ್ತೀಯ ಕೊರತೆಯನ್ನು ನಿಗದಿತ ಮಿತಿಯ ಒಳಗಡೆ ಇರುವಂತೆ ನೋಡಿಕೊಳ್ಳಲಾಗಿದೆ ಎಂದು ಅದು ಹೇಳಿದೆ

ಪ್ರಜಾವಾಣಿ ವಾರ್ತೆ

ದೇಶದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕರ್ನಾಟಕ ರಾಜ್ಯದ ಆರ್ಥಿಕ ಸ್ಥಿತಿಗತಿ ಉತ್ತಮವಾಗಿದೆ ಎಂದು 2024–25ನೇ ಸಾಲಿನ ರಾಜ್ಯದ ಆರ್ಥಿಕ ಸಮೀಕ್ಷೆ ಪ್ರತಿಪಾದಿಸಿದೆ. 2023-24ನೇ ಸಾಲಿನಲ್ಲಿ ರಾಷ್ಟ್ರೀಯ ಆದಾಯಕ್ಕೆ ರಾಜ್ಯ ಆದಾಯದ ಕೊಡುಗೆ ಶೇ 8.6ರಷ್ಟಿದ್ದು, ಇದು 2024–25ರಲ್ಲಿ ಶೇ 0.3ರಷ್ಟು ಹೆಚ್ಚಾಗಿ ಶೇ 8.9ಕ್ಕೆ ಏರುವ ನಿರೀಕ್ಷೆ ಇದೆ. ಗ್ಯಾರಂಟಿಗಳ ಹೊರೆಯ ನಡುವೆಯೂ ವೆಚ್ಚದ ಗುಣಮಟ್ಟ ಕೂಡ ಚೆನ್ನಾಗಿದೆ. ರಾಜ್ಯದ ಅಭಿವೃದ್ಧಿ ವೆಚ್ಚದ ಪ್ರಮಾಣವು ಶೇ 65.10 ರಷ್ಟಿದ್ದು, ಇದು ಎಲ್ಲ ರಾಜ್ಯಗಳ ಸರಾಸರಿಗಿಂತ (ಶೇ 62.50) ಹೆಚ್ಚಾಗಿದೆ ಎಂದು ಅದು ತಿಳಿಸಿದೆ.

ಕಳೆದ ಆರ್ಥಿಕ ವರ್ಷದಲ್ಲಿ (2023–24) ದಕ್ಷಿಣದ ಐದು ರಾಜ್ಯಗಳ ಪೈಕಿ ಕರ್ನಾಟಕವು ಅತ್ಯಂತ ಕಡಿಮೆ, ಶೇ 2.70ರಷ್ಟು ವಿತ್ತೀಯ ಕೊರತೆಯನ್ನು (ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರ) ಹೊಂದಿರುವ ರಾಜ್ಯವಾಗಿತ್ತು. ಈ ವರ್ಷ (2024–25) ವಿತ್ತೀಯ ಕೊರತೆ ಶೇ 3ಕ್ಕೆ ಏರಿಕೆಯಾಗಬಹುದು ಎಂದು ಅಂದಾಜಿಸಲಾಗಿದೆ. ಕರ್ನಾಟಕದ ವಿತ್ತೀಯ ಹೊಣೆಗಾರಿಕೆ ಕಾಯ್ದೆಯ- 2002 ಅಡಿ ವಿತ್ತೀಯ ಕೊರತೆಯು ಶೇ 3ರ ಒಳಗೆ ಇರಬೇಕು.


ಸರ್ಕಾರದ ವೆಚ್ಚಗಳು ಹೆಚ್ಚುತ್ತಿದ್ದು, ಆದಾಯ ಇಳಿಮುಖವಾಗುತ್ತಿದೆ. ಹೀಗಾಗಿ, ವಿತ್ತೀಯ ಕೊರತೆಯನ್ನು ಕಡಿಮೆ ಮಟ್ಟದಲ್ಲಿ ಇಡುವುದು ಅತ್ಯಂತ ಸವಾಲಿನ ಕೆಲಸವಾಗಿದೆ. ಹಾಗಿದ್ದರೂ, 2024-25ರ ಬಜೆಟ್ ಅಂದಾಜಿನಲ್ಲಿ ವಿತ್ತೀಯ ಕೊರತೆಯ ಗುರಿಯನ್ನು ಶೇ 2.95ಕ್ಕೆ ನಿಗದಿಪಡಿಸಲಾಗಿದೆ ಎಂದೂ ಅದು ಹೇಳಿದೆ.

ಜಿಎಸ್‌ಡಿಪಿ ಏರಿಕೆ: ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ)ಬೆಳವಣಿಗೆ ಕಾಣುತ್ತಿದ್ದು, 2023–24ರಲ್ಲಿ ಜಿಎಸ್‌ಡಿಪಿ ದರ ಶೇ 6ರಷ್ಟು ಇದ್ದರೆ, 2024–25ರಲ್ಲಿ ಶೇ 7.4ಕ್ಕೆ ಏರಬಹುದು ಎಂದು ಅಂದಾಜಿಸಲಾಗಿದೆ.

ರಾಷ್ಟ್ರೀಯ ತಲಾ ಆದಾಯಕ್ಕೆ ಹೋಲಿಸಿದರೆ ರಾಜ್ಯದ ತಲಾ ಆದಾಯ ಉತ್ತಮವಾಗಿದೆ. 2023–24ರಲ್ಲಿ ರಾಷ್ಟ್ರೀಯ ತಲಾ ಆದಾಯವು ₹1,84,205 ಇತ್ತು. 2024–25ರಲ್ಲಿ ಅದು ₹2,00,162ಕ್ಕೆ ಏರುವ ನಿರೀಕ್ಷೆ ಇದೆ ಸಮೀಕ್ಷೆ ಹೇಳಿದೆ.

ರಾಜ್ಯಕ್ಕೆ 3ನೇ ಸ್ಥಾನ

2023–24ನೇ ಸಾಲಿನ ತಲಾ ಆದಾಯದ ಲೆಕ್ಕಾಚಾರದಲ್ಲಿ ಕರ್ನಾಟಕವು ದೇಶದಲ್ಲಿ ಮೂರನೇ ಸ್ಥಾನ ಹೊಂದಿದೆ. ಮೊದಲ ಸ್ಥಾನದಲ್ಲಿ ದೆಹಲಿ ಇದ್ದರೆ, ಎರಡನೇ ಸ್ಥಾನದಲ್ಲಿ ನೆರೆಯ ತೆಲಂಗಾಣ ರಾಜ್ಯವಿದೆ. ಹೆಚ್ಚು ಆದಾಯ ಹೊಂದಿರುವ ರಾಜ್ಯಗಳ ಪೈಕಿ ಮುಂಚೂಣಿಯಲ್ಲಿರುವ ಮಹಾರಾಷ್ಟ್ರ (ಆದಾಯ ₹36.46 ಲಕ್ಷ ಕೋಟಿ), ತಲಾ ಆದಾಯದಲ್ಲಿ ಏಳನೇ ಸ್ಥಾನದಲ್ಲಿದೆ. ಕಳೆದ ಆರ್ಥಿಕ ವರ್ಷದಲ್ಲಿ ಕರ್ನಾಟಕದ ಆದಾಯ ₹25.57 ಲಕ್ಷ ಕೋಟಿ ಇತ್ತು.



ಆದಾಯ ಮತ್ತು ವೆಚ್ಚದ ಸ್ಥಿತಿ (ಲಕ್ಷ ಕೋಟಿ ₹ಗಳಲ್ಲಿ)

ಜಮೆಗಳು	2022-23	2023-24	2024-25*
ಆದಾಯ	2.29	2.27	2.63
ಬಂಡವಾಳ ಜಮೆ	0.45	0.85	1.05
ಒಟ್ಟು	2.74	3.12	3.68
ವೆಚ್ಚಗಳು			
ಆದಾಯ ವೆಚ್ಚ	2.16	2.41	2.90
ಬಂಡವಾಳ ವೆಚ್ಚ	0.76	0.77	0.81
ಒಟ್ಟು	2.92	3.18	3.71

*ಬಜೆಟ್ ಅಂದಾಜು

ಕೇಂದ್ರದ ಪಾಲು ಕಡಿತ

ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಬರಬೇಕಾದ ತೆರಿಗೆ ಪಾಲು ಮತ್ತು ಅನುದಾನದಲ್ಲಿ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಿದ್ದು, ಇದು ಕಳವಳಕಾರಿ ಸಂಗತಿ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ.

ಆದಾಯ ಜಮೆಗಳ ಸಂಯೋಜನೆ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಶೇಕಡ)

ವಿವರ	2019-20	2020-21	2021-22	2022-23	2023-24	2024-25*
ರಾಜ್ಯ ತೆರಿಗೆಗಳು	6.88	6.83	7.54	7.52	6.29	6.76
ಕೇಂದ್ರ ತೆರಿಗೆಗಳ ಪಾಲು	1.82	1.20	1.93	1.59	1.57	1.58
ಕೇಂದ್ರದ ಅನುದಾನಗಳು	1.18	0.90	1.22	0.76	0.51	0.54
ತೆರಿಗೆಯೇತರ ಆದಾಯ	0.45	0.44	0.68	0.64	0.47	0.48

*ಬಜೆಟ್ ಅಂದಾಜು

ತಲಾ ಆದಾಯ ಬೆಂಗಳೂರು ಮುಂದು

ರಾಜ್ಯದಲ್ಲಿ ಜಿಲ್ಲಾವಾರು ತಲಾ ಆದಾಯದಲ್ಲಿ ರಾಜಧಾನಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. 2023–24ನೇ ಸಾಲಿನಲ್ಲಿ ಬೆಂಗಳೂರಿಗರ ತಲಾ ಆದಾಯ (₹7,38,910) ಉಳಿದ ಜಿಲ್ಲೆಗಳ ಜನರಿಗಿಂತ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಕಲಬುರಗಿ ಜಿಲ್ಲೆ (₹1,43,610) ಕೊನೆಯ ಸ್ಥಾನದಲ್ಲಿದೆ.

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಎಸ್‌ಡಿಪಿ) ಜಿಲ್ಲೆಗಳು ನೀಡುತ್ತಿರುವ ಕೊಡುಗೆಯ ಪೈಕಿ ಬೆಂಗಳೂರಿನದ್ದೇ ಸಿಂಹಪಾಲು. ಉಳಿದ ಜಿಲ್ಲೆಗಳ ಕೊಡುಗೆ ಎರಡು ಅಂಕಿಯ ಹತ್ತಿರವೂ ಇಲ್ಲ. ಐಟಿ–ಬಿಟಿ ನಗರಿಯು ಒಟ್ಟು ಶೇ 39.1ರಷ್ಟು ಕೊಡುಗೆ ನೀಡುತ್ತಿದೆ. ಇದರಲ್ಲಿ ಕೈಗಾರಿಕಾ ವಲಯದ ಪಾಲು ಶೇ 28.5 ಮತ್ತು ಸೇವಾ ವಲಯದ ಕೊಡುಗೆ ಶೇ 48.9ರಷ್ಟಿದೆ. ಶೇ 5.4ರಷ್ಟು ಕೊಡುಗೆ ನೀಡಿರುವ ದಕ್ಷಿಣ ಕನ್ನಡ ಎರಡನೇ ಸ್ಥಾನದಲ್ಲಿದೆ. ಬೆಳಗಾವಿ (ಶೇ 3.9), ತುಮಕೂರು (ಶೇ 3.6) ಮತ್ತು ಮೈಸೂರು (ಶೇ 3.50) ಜಿಲ್ಲೆಗಳು ನಂತರದ ಸ್ಥಾನಗಳಲ್ಲಿವೆ. ಕೊಡಗು ಜಿಲ್ಲೆಯ ಕೊಡುಗೆ ಅತಿ ಕಡಿಮೆ ಅಂದರೆ ಶೇ 0.7ರಷ್ಟಿದೆ. ಯಾದಗಿರಿ ಕೊಡುಗೆ ಶೇ 0.9ರಷ್ಟಿದೆ.

ನಾವು ನೋಡಿದ ಸಿನಿಮಾ



ಸವಿತಾ ಪರಮೇಶ್ವರ್

ಅವಳೆಂಬ ಮಾತಿನ ಮಂಟಪದಲ್ಲಿ...

ಮದುವೆ ಎಲ್ಲರ ಬದುಕಿನ ಪ್ರಮುಖ ಘಟ್ಟ. ಮದುವೆಯಾದ ನಂತರ ಬದುಕು ಬದಲಾಗುತ್ತದೆ. ಅದರಲ್ಲಿಯೂ ಹೆಣ್ಣುಮಕ್ಕಳ ಬದುಕು ಗಂಡ, ಮನೆ, ಮಕ್ಕಳು ಮುಂತಾದ ವಿಷಯಗಳಿಗೆ ಸೀಮಿತವಾಗುತ್ತದೆ. ಮೂವರು ಭಿನ್ನ ಮನಸ್ಥಿತಿಯ ಹೆಣ್ಣುಮಕ್ಕಳ ಕಥೆಯನ್ನು ಹೊಂದಿರುವ ಕಿರುಚಿತ್ರ ಅವಳು. ಕಲಾಮಾಧ್ಯಮ ಯೂಟ್ಯೂಬ್ ಚಾನೆಲ್ ಮೂಲಕ ಜನಪ್ರಿಯರಾಗಿರುವ ಪರಮೇಶ್ವರ್ ಕೆ ಚೊಚ್ಚಲ ನಿರ್ದೇಶನದ ಕಿರುಚಿತ್ರವಿದು.

ಕಾಲೇಜಿನಲ್ಲಿ ಓದುತ್ತಿರುವಾಗ ಎಷ್ಟೊಂದು ಜನ ಹೆಣ್ಣು ಮಕ್ಕಳು ಹಾಡು, ನೃತ್ಯ, ನಾಟಕ, ಓದು ಎಲ್ಲದರಲ್ಲಿಯೂ ಮುಂದೆ ಇರುತ್ತಾರೆ. ಕಾಲೇಜು ಮುಗಿದು ಹತ್ತು ವರ್ಷಗಳ ಬಳಿಕ ಅವರನ್ನು ಭೇಟಿ ಮಾಡಿದರೆ ಶೇಕಡ 70ರಷ್ಟು ಜನ ಮದುವೆಯಾಗಿ ಗೃಹಿಣಿಯಾಗಿರುವೆ ಎನ್ನುತ್ತಾರೆ. ಅದೇ ಸಾಲಿಗೆ ಸೇರುವ ಗೃಹಿಣಿ ರಾಜೇಶ್ವರಿಯಿಂದ ಕಥೆ ಪ್ರಾರಂಭವಾಗುತ್ತದೆ. ಮದುವೆಯಾದ ನಂತರವೂ ದೇಶ ಸುತ್ತಿಕೊಂಡು ವಿಡಿಯೋಗಳನ್ನು ಮಾಡಿಕೊಂಡಿರುವ ಅಶ್ವಿನಿ ತನ್ನ ಗೆಳತಿ ರಾಜೇಶ್ವರಿಯನ್ನು ಹುಡುಕಿಕೊಂಡು ಆಕೆಯ ಮನೆಗೆ ಬರುತ್ತಾಳೆ. ಮಗು ಮಾಡಿಕೊಳ್ಳಬೇಕೆಂಬ ಬಯಕೆಯಲ್ಲಿರುವ ಅಶ್ವಿನಿ ಅದರ ಬಗ್ಗೆ ಆಕೆಯನ್ನು ಕೇಳಿದರೆ, ಆಕೆಯ ಮನೆಯ ದೃಶ್ಯಗಳೊಂದಿಗೆ ಮಕ್ಕಳನ್ನು ಬೆಳೆಸುವ ಕಷ್ಟ, ಆತಂಕ, ಒತ್ತಡಗಳನ್ನು ನಿರ್ದೇಶಕರು ತೋರಿಸುತ್ತ ಹೋಗುತ್ತಾರೆ.

ಇನ್ನೊಂದು ಟ್ರ್ಯಾಕ್‌ನಲ್ಲಿ 36 ವರ್ಷ ಕಳೆದರೂ ಮದುವೆಯಾಗದೇ ಕನ್‌ಸ್ಟ್ರಕ್ಷನ್ ಕಂಪನಿ ಕಟ್ಟಿ ಯಶಸ್ವಿಯಾದ ಸುಧಾಳ ಕಥೆ. ಮದುವೆ ವೃತ್ತಿ ಬದುಕಿನ ಸಾಧನೆಗೆ ಅಡ್ಡಿಯಾಗುತ್ತದೆ ಎಂಬ ಭಾವದಲ್ಲಿರುವ ಸುಧಾಗೆ ಈಗ ಮದುವೆಯಾಗದೆ ತಪ್ಪು ಮಾಡಿದೆ ಎಂಬ ಭಾವ ಕಾಡಲು ಪ್ರಾರಂಭವಾಗಿದೆ. ಒಂದು ಕಡೆ ಮದುವೆಯಾಗಿ ಕನಸುಗಳನ್ನು ಚೂರು ಮಾಡಿಕೊಂಡ ರಾಜೇಶ್ವರಿ, ಮಗುವಿನೊಂದಿಗೆ ಹೊಸ ಕನಸಿನಲ್ಲಿರುವ ಅಶ್ವಿನಿ, ಮತ್ತೊಂದೆಡೆ ಜೀವನದಲ್ಲಿ ಸಂಗಾತಿಗಾಗಿ ಹಾತೊರೆಯುತ್ತಿರುವ ಸುಧಾ ಈ ಮೂವರ ಭಾವ ತೊಳಲಾಟದ ನಡುವೆ ಕಥೆ ಸಾಗುತ್ತದೆ. ಈಗಾಗಲೇ ಕೆಲ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪಡೆದಿರುವ ಈ ಕಿರುಚಿತ್ರದ ಕಥಾಹಂದರ ಕೇವಲ ಅವಳದ್ದು ಮಾತ್ರವಲ್ಲ, ಅವನ ಬದುಕಿನ ಕಥೆಯೂ ಹೌದು ಎಂಬಷ್ಟು ಗಟ್ಟಿಯಾಗಿದೆ.

ಗೃಹಿಣಿ ರಾಜೇಶ್ವರಿಯಾಗಿ ಸವಿತಾ ಪರಮೇಶ್ವರ್ ಇಷ್ಟವಾಗುತ್ತಾರೆ. ಆದರೆ ಉಳಿದ ಕಲಾವಿದರ ನಟನೆ ಸುಧಾರಣೆಗೆ ಅವಕಾಶವಿತ್ತು. ಚಿತ್ರದಲ್ಲಿ ಮಾತಿಗಿಂತ ದೃಶ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸುವಲ್ಲಿ ನಿರ್ದೇಶಕರು ಇನ್ನಷ್ಟು ಶ್ರಮ ಹಾಕಬಹುದಿತ್ತು. ಸಾಕಷ್ಟು ಕಡೆ ಮಾತಿಗೆ ಕಡಿವಾಣ ಹಾಕಿ ದೃಶ್ಯ ರೂಪದಲ್ಲಿ ತೋರಿಸುವ ಅವಕಾಶವಿತ್ತು.

ಕೆಲ ದೃಶ್ಯಗಳಲ್ಲಿ ಹಿನ್ನೆಲೆ ಸಂಗೀತ ನಡೆಯುತ್ತಿರುವ ದೃಶ್ಯಗಳಿಗೆ ಪೂರಕ ಎನಿಸುವುದಿಲ್ಲ. ಮನೆ ಮತ್ತು ನಾಲ್ಕು ಕಲಾವಿದರನ್ನು ಬಿಟ್ಟು ಬಾರದ ಛಾಯಾಚಿತ್ರಗ್ರಹಣವು ಧಾರಾವಾಹಿ ಎಂಬ ಭಾವನೆ ಮೂಡಿಸುತ್ತದೆ. ಸಾಂಬಾರ್ ಬಿಸಿ ಮಾಡುತ್ತಿರುವಾಗ ಒಲೆ ಉರಿಯದೇ ಇರುವಂತಹ ಚಿತ್ರೀಕರಣದ ದೋಷಗಳಿಗೆ ಸಂಕಲನದಲ್ಲಿ ಕತ್ತರಿ ಹಾಕಬಹುದಿತ್ತು.

ವಿನಾಯಕ ಕೆ.ಎಸ್

ಅವಳು (ಕಿರುಚಿತ್ರ)
- ನಿರ್ಮಾಣ: ಕಲಾಮಾಧ್ಯಮ ಮೀಡಿಯಾ ವರ್ಕ್ಸ್
- ನಿರ್ದೇಶನ: ಪರಮೇಶ್ವರ್ ಕೆ
- ತಾರಾಗಣ: ಸವಿತಾ ಪರಮೇಶ್ವರ್, ನಿಖಿತಾ, ರಾಹುಲ್ ದಾಸ್ ಮತ್ತಿತರರು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ವಿಮಾನ ನಿಲ್ದಾಣವೊಂದರ ಚಿತ್ರವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಉತ್ತರ ಪ್ರದೇಶವು ಚರಿತ್ರೆ ಸೃಷ್ಟಿಸಿದ್ದು, 21 ವಿಮಾನ ನಿಲ್ದಾಣಗಳನ್ನು ಹೊಂದಿರುವ ಮೊದಲ ರಾಜ್ಯವಾಗಿದೆ ಎಂದು ಆ ಚಿತ್ರವನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಚಿತ್ರವನ್ನು ಗೂಗಲ್ ಲೆನ್ಸ್ ಮೂಲಕ ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಈ ಚಿತ್ರವು 'ಕಾಂಡೆ ನಾಸ್ಟ್ ಟ್ರಾವೆಲರ್' ಎನ್ನುವ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಕಂಡುಬಂತು. ಇದು ಟರ್ಕಿಯ ಇಸ್ತಾಂಬುಲ್‌ನ ವಿಮಾನ ನಿಲ್ದಾಣವಾಗಿದ್ದು, ಜಗತ್ತಿನ ಅತ್ಯುತ್ತಮ ವಿಮಾನ ನಿಲ್ದಾಣ ಎಂದು ಹೆಸರಾಗಿದೆ ಎಂಬುದಾಗಿ ಪತ್ರಿಕೆಯ ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಈ ಲೇಖನವನ್ನು 2024ರ ನ.26ರಂದು ಇಸ್ತಾಂಬುಲ್ ವಿಮಾನ ನಿಲ್ದಾಣದ 'ಎಕ್ಸ್' ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರವನ್ನು ಇಸ್ತಾಂಬುಲ್ ವಿಮಾನ ನಿಲ್ದಾಣದ ಇನ್‌ಸ್ಟಾಗ್ರಾಂ ಖಾತೆಯಲ್ಲಿ 2021ರಲ್ಲಿ ಹಂಚಿಕೊಳ್ಳಲಾಗಿರುವ ವಿಡಿಯೊದಿಂದ ತೆಗೆದುಕೊಳ್ಳಲಾಗಿದೆ. ಉತ್ತರ ಪ್ರದೇಶದಲ್ಲಿ 14 ವಿಮಾನ ನಿಲ್ದಾಣಗಳು ಕಾರ್ಯಾಚರಣೆ ನಡೆಸುತ್ತಿವೆ ಎಂದು ವರದಿಯೊಂದು ತಿಳಿಸಿರುವುದಾಗಿ ಬೂಮ್ ಫ್ಯಾಕ್ಟ್ ಚೆಕ್ ತಿಳಿಸಿದೆ.

ಗುಂಡಣ್ಣ



ಈಸಬೇಕು, ಜೈಸಬೇಕು!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

148

ನಿಸರ್ಗ ನೀಡಿದ ಈ ಭೂಮಿಯಲ್ಲಿ ಆನಂದವಾಗಿ ಬದುಕದೇ ಇದ್ದವರು ಬಡವರು. ಬಡವ- ಶ್ರೀಮಂತ ಎನ್ನುವುದು ನಮ್ಮ ತಲೆಯಲ್ಲಿ ಇದೆಯಷ್ಟೆ. ಭೂಮಿ ಬಡವ ಶ್ರೀಮಂತ ಅಂತ ಭೇದಮಾಡಿಲ್ಲ. ದಿನವೂ ಉದಯಿಸುವ ಸೂರ್ಯ ಇವ ಬಡವ, ಇವ ಶ್ರೀಮಂತ ಎಂದು ತಾರತಮ್ಯ ಮಾಡಿಲ್ಲ. ಬಡ ಮನ ನಮ್ಮದು ಅಷ್ಟೆ. ಬಡತನ, ಶ್ರೀಮಂತಿಕೆ ಎಲ್ಲಾ ಆವರ್ತನ.

ನಿರ್ಜೀವ ಆಗಿರುವ ಬೀಜದಿಂದ ಒಂದು ಲತೆ ಬರುತ್ತದೆ. ಅಂದರೆ ಬೀಜದ ಸಾವಿನಿಂದ ಸಸಿಯ ಜನನ. ಸಾವಿನಲ್ಲಿ ಹುಟ್ಟು, ಹುಟ್ಟಿನಲ್ಲಿ ಸಾವು. ಇದು ವಿಶ್ವದ ಚಮತ್ಕಾರ. ಮನುಷ್ಯ ಎಂದು ಹುಟ್ಟಿದ್ದಾನೋ ಅಂದೇ ಅವನ ಸಾವೂ ಪ್ರಾರಂಭವಾಗುತ್ತದೆ. ನಮ್ಮ ಡೇಟ್ ಆಫ್ ಬರ್ತ್‌ನಲ್ಲಿ ನಮ್ಮ ಡೇಟ್ ಆಫ್ ಡೆತ್ ಕೂಡಾ ಸೇರಿಕೊಂಡಿದೆ. ಅದು ನಮಗೆ ಕಂಡಿಲ್ಲ ಅಷ್ಟೆ. ಹುಟ್ಟು ಸಾವು ಎನ್ನುವುದು ಆವರ್ತನ ಎನ್ನುವುದನ್ನು ಅರಿಯಬೇಕಾಗಿದೆ. ಆವರ್ತನವನ್ನು ಅರಿತು ಬದುಕುವವರಿಗೆ ಸಂತರು ಎನ್ನುತ್ತಾರೆ. ತಾಪ ಕೊಡುವ ಜಗತ್ತಿನಲ್ಲಿ ತಾಪ ಮಾಡಿಕೊಳ್ಳದೆ ಬದುಕಿದರೆ ಅವನಿಗೆ ತಪಸ್ವಿ ಎನ್ನುತ್ತಾರೆ. ತಾಳಿದವನು ತಪಸ್ವಿ. ಪ್ರತಿಯೊಬ್ಬರೂ ತಪಸ್ವಿಗಳಾಗಬೇಕು.

ಕಾಡಿನಲ್ಲಿ ಮನೆ ಮಾಡಿದ ಮೇಲೆ ಕಾಡು ಪ್ರಾಣಿಗಳಿರುತ್ತವೆ. ನಾಡಿನಲ್ಲಿ ಕಾಡುವ ಪ್ರಾಣಿಗಳಿರುತ್ತವೆ. ಸಂತೆಯಲ್ಲಿ ಮನೆ ಕಟ್ಟಿದರೆ ಶಬ್ದ ಇರುತ್ತದೆ. ಸಮುದ್ರದ ದಂಡೆ ಮೇಲೆ ಮನೆ ಕಟ್ಟಿದರೆ ತೆರೆಗಳು ಬಂದು ಬಡಿಯುತ್ತವೆ. ಇವೆಲ್ಲ ಬಂದೇ ಬರುತ್ತವೆ. ಏನು ಬಂದರೂ ಸಮಾಧಾನದಿಂದ ಇರಬೇಕು. ಇದೇ ಸಮಾಧಾನ ಯೋಗ. ಜೀವನದಲ್ಲಿ ನೀವು ಬೇರೆ ಯಾವುದೇ ಯೋಗಾಭ್ಯಾಸ ಮಾಡದೇ ಇದ್ದರೂ ಪರವಾಗಿಲ್ಲ. ಸಮಾಧಾನ ಯೋಗವನ್ನು ಮಾತ್ರ ಕಲಿಯಲೇ ಬೇಕು. ಸಮಾಧಾನ ಯೋಗ ಮಾಡದೇ ಇದ್ದರೆ ಉಳಿದ ಯಾವುದೇ ಯೋಗವೂ ಪರಿಣಾಮಕಾರಿಯಾಗಲ್ಲ.

ಮಹಾಭಾರತದ ಯುದ್ಧ ಆರಂಭವಾಗಿದೆ. ಲಕ್ಷಾಂತರ ಸೈನಿಕರು ಎದುರುಬದುರು ನಿಂತಿದ್ದಾರೆ. ಕೃಷ್ಣನ ಸಾರಥ್ಯದಲ್ಲಿ ಅರ್ಜುನ ಕೂಡಾ ಯುದ್ಧಭೂಮಿಗೆ ಬಂದಿದ್ದಾನೆ. ಇನ್ನೇನು ಯುದ್ಧ ಶುರುವಾಗಬೇಕು ಅಂದಾಗ ಅರ್ಜುನ, ತಾನು ಯುದ್ಧ ಮಾಡುವುದಿಲ್ಲ ಎಂದ. ಅದಕ್ಕೆ ಕೃಷ್ಣ 'ಯಾಕೆ ಏನಾತು' ಎಂದು ಕೇಳಿದ. 'ಯುದ್ಧವೆಂದರೆ ಬರೀ ಹೊಡಿ ಬಡಿ ಕಡಿ ರಕ್ತ ಅಷ್ಟೆ' ಎಂದ ಅರ್ಜುನ. 'ಇದು ಮೊದಲೇ ಗೊತ್ತಾಗಬೇಕಿತ್ತು ನಿಮಗೆ' ಎಂದ ಕೃಷ್ಣ. 'ಮೊದಲೇ ಅಂದರೆ ಯಾವಾಗ' ಎಂದು ಕೇಳಿದ ಅರ್ಜುನ. 'ಅವಾಗ ಬಹಳ ಹಿಂದೆ ನೀವು ಜೂಜಾಡಿದಿರಲ್ಲ. ಆಗಲೇ ಗೊತ್ತಾಗಬೇಕಿತ್ತು. ಆಗ ನಿಮಗೆ ಗೊತ್ತಾಗದೇ ಇದ್ದಿದ್ದರಿಂದ ಈಗ ಯುದ್ಧ ನಡೆದಿದೆ' ಎಂದು ತಿಳಿಸಿದ ಕೃಷ್ಣ. 'ಯುದ್ಧದ ಮಧ್ಯದಲ್ಲಿ ನಿಂತು ಯುದ್ಧ ಬೇಡ ಅಂದರೆ ಹೇಗೆ?' ಎಂದು ಪ್ರಶ್ನೆ ಮಾಡಿದ ಕೃಷ್ಣ.

ಮದುವೆಯಾಗಿದೆ. ಹೆಂಡತಿ ಇದ್ದಾಳೆ. ಮಕ್ಕಳು ಇದ್ದಾರೆ. ಈಗ ಸಂಸಾರ ಅಂದ್ರೆ ತಾಪತ್ರಯ. ಸಿಂಗಲ್ ಇದ್ದರೆ ಒಳ್ಳೆದಿತ್ತು ಅಂದ್ರೆ ಆಗತೈತೇನು? ಮೊದಲೇ ಯೋಚನೆ ಮಾಡಬೇಕು. ಸಿಂಗಲ್ ಇದ್ದಾಗ ಮಿಂಗಲ್ ಆಗುವ ಬಯಕೆ. ಈಗ ಸಿಂಗಲ್ ಆಗಬೇಕು ಅಂದ್ರೆ ಹೇಗೆ? ನಾವೆಲ್ಲ ಪ್ರವಾಹದ ಮಧ್ಯದಲ್ಲಿ ಬಂದು ನಿಂತಿದ್ದೇವೆ. ಆ ಕಡೆಗಾದರೂ ಈಜಬೇಕು. ಈ ಕಡೆಗಾದರೂ ಈಜಬೇಕು. ಈಜದೇ ಇದ್ದರೆ ಮುಳಗಬೇಕಾಗುತ್ತದೆ. ಅದನ್ನು ಬಿಟ್ಟು ಬೇರೆ ದಾರಿಯೇ ಇಲ್ಲ. ನಾವು ಈಜುವುದನ್ನು ಕಲಿಯಬೇಕು. ಇಲ್ಲಿಯೇ ಜೈಸಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮಾರ್ಚ್ 10, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಏಕಾದಶಿ ಗಂ. 07-45 ನಕ್ಷತ್ರ: ಪುಷ್ಯ ಗಂ. 24-52 ಯೋಗ: ಶೋಭನ ಗಂ. 13-57 ಕರಣ: ವಿಷ್ಟಿ ಗಂ. 07-45, ಕುಂಭ ಮಾಸದ 26 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 2.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-45 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 09 ರಂಜಾನ್
ದಿನ ವಿಶೇಷ : ಆಮಲಕಿ ಏಕಾದಶಿ, ಅದೃಷ್ಟ ಸಂಖ್ಯೆ : 1, 5

ಮೇಷ: ಅನಿವಾರ್ಯತೆಗೆ ಬಂಧು ಮಿತ್ರರಿಂದ ಸಹಕಾರ ಲಭ್ಯವಾಗುವುದು. ಆತ್ಮಸ್ಥೈರ್ಯ ಹೆಚ್ಚಿ ಕೆಲಸ ಕಾರ್ಯಗಳು ಹುರುಪಿನಿಂದ ಸಾಗುವುದು. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ವೃಷಭ: ಕೆಲಸದ ಹೊರತಾಗಿ ಇತರೆ ಸಂಗತಿಗಳ ಬಗ್ಗೆ ಗಮನ ಕೊಡುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುವುದು. ದಾಂಪತ್ಯ ಜೀವನ ಸುಖಮಯವಾಗಿರುವುದು.

ಮಿಥುನ: ಬೇಸರದ ಸಂಗತಿಗಳನ್ನು ಮರೆತು ಹೊಸ ಜೀವನವನ್ನು ಶುರು ಮಾಡುವಲ್ಲಿ ದಿನಚರಿಯನ್ನು ಹಾಕಿಕೊಳ್ಳಿ. ಮದುವೆ ಅಥವಾ ಮದುವೆಗೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಕರ್ಕಾಟಕ: ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಾಗುತ್ತಿರುವುದು ದೇಹದ ಮೇಲೆ ಹೆಚ್ಚಿನ ಪರಿಣಾಮ ಬೀರುವುದರಿಂದ ದೇಹವನ್ನು ನಿರ್ಜಲೀಕರಣ ಹೊಂದದಂತೆ ನೋಡಿಕೊಳ್ಳಿ. ಗುರುವಿನ ಅನುಗ್ರಹ ಉಂಟಾಗಲಿದೆ.

ಸಿಂಹ: ಮನೆಯ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಸಮರ್ಥರಾಗಿದ್ದರೂ ಇಬ್ಬಂದಿಯ ಪರಿಸ್ಥಿತಿಗೆ ತಲುಪುವಿರಿ. ಮಾತುಗಳನ್ನು ಆಡುವ ಬದಲು ಸಾಮರ್ಥ್ಯವನ್ನು ಪ್ರಸ್ತುತ ಪಡಿಸಿ.

ಕನ್ಯಾ: ಉದ್ಯೋಗದಲ್ಲಿ ಮುಂಬಡ್ತಿಯ ವಿಚಾರವಾಗಿ ಹೋರಾಟ ನಡೆಸುವುದು ವ್ಯರ್ಥ. ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳಿ.

ತುಲಾ: ದೈಹಿಕ ಪರಿಸ್ಥಿತಿಯಿಂದಾಗಿ ಕೆಲಸದಲ್ಲಿ ಆಸಕ್ತಿ ಇಲ್ಲದಾಗುತ್ತದೆ. ಬಿಡುವಾದ ಸಂದರ್ಭದಲ್ಲಿ ಹತ್ತಿರದ ಶಿವನ ದೇವಾಲಯಕ್ಕೆ ಭೇಟಿ ಕೊಡಿ.

ವೃಶ್ಚಿಕ: ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರವನ್ನು ಪಡೆದುಕೊಳ್ಳುವಿರಿ. ಕೆಲಸ ಕಾರ್ಯಗಳು ಈಡೇರಿದರೂ ಅದಕ್ಕಾಗಿ ಬಹಳ ಹಣ ವ್ಯಯಿಸಬೇಕಾಗಬಹುದು. ತಂದೆಯಾಗಲಿರುವ ಸುದ್ದಿ ಕೇಳಿ ಸಂಭ್ರಮಿಸುವಿರಿ.

ಧನು: ವ್ಯವಹಾರದಲ್ಲಿ ಉಂಟಾಗಿರುವ ಸಮಸ್ಯೆಗೆ ಸ್ನೇಹಿತರಿಂದ ಸೂಕ್ತ ಸಲಹೆ ಬರುವುದು. ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ. ಕೌಟುಂಬಿಕ ಸಮಸ್ಯೆಯ ಸರಪಳಿಯಿಂದ ಹೊರಬರಲು ಕಷ್ಟವಾಗಲಿದೆ.

ಮಕರ: ಕೆಲಸ ಕಾರ್ಯಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ನೈತಿಕ ಧೈರ್ಯ ಹೆಚ್ಚುತ್ತದೆ. ಅನಗತ್ಯ ಖರ್ಚುವೆಚ್ಚಗಳಿಗೆ ಕಡಿವಾಣ ಹಾಕಿ. ಕಾಗದ ಕಾರ್ಖಾನೆಯವರಿಗೆ ಆಕಸ್ಮಿಕ ಲಾಭ.

ಕುಂಭ: ಸರ್ಕಾರಿ ನೌಕರಿಯಲ್ಲಿರುವವರಿಗೆ ಅಪೇಕ್ಷಿತ ಸ್ಥಳಕ್ಕೆ ವರ್ಗಾವಣೆ ದೊರೆಯುವ ಸಂಭವವಿದೆ. ಆರೋಗ್ಯದಲ್ಲಿ ಜೀರ್ಣಕ್ರಿಯೆಗೆ ಸಂಬಂಧಿಸಿದಂತೆ ಕಿರಿಕಿರಿ ಎನಿಸಲಿದೆ. ಇದರಿಂದ ಅನಾರೋಗ್ಯ ಭೀತಿ ಉಂಟಾಗುವುದು.

ಮೀನ: ಪ್ರಯತ್ನಗಳು ವ್ಯರ್ಥವಾಗದೆ ಸರಿಯಾಗಿ ಫಲಿತಾಂಶವನ್ನು ಪಡೆಯಲು ಮನೆ ದೇವರ ಹಾಗೂ ಗುರುಹಿರಿಯರ ಆಶೀರ್ವಾದ ಪಡೆಯಿರಿ. ಸಂಜೆಯ ತಿಳಿ ವಾತಾವರಣ ಮನಸ್ಸಿನ ಹಾಗೂ ದೇಹದ ಆಯಾಸವನ್ನು ಇಂಗಿಸಲಿದೆ.

ಪದಬಂಧ 5977

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೊದಲಸಲ ನೋಡಿದ ಮಾತ್ರದಿಂದಲೇ ಉಂಟಾಗುವ ಪ್ರೀತಿ (4)
4.ಸವಿಯಾದುದನ್ನು ಹೀಗೆ ಹೇಳಿ (4)
6.ಚಾರ ಕೊನೆಗಿದ್ದು ಮಾಡಿದ ಆಲೋಚನೆ (3)
7.ಕಾಗದ ಪತ್ರಗಳ ಕಟ್ಟು (3)
8.ಪ್ರಜ್ವಲಿಸುತ್ತಿರುವ ಬೆಂಕಿಯಿದು (3)
10.ಕೈಯಲ್ಲಿರುವ ಹಣ (3)
12.ಬೇಡುವವ ಇಲ್ಲಿದ್ದಾನೆ (3)
14.ಜುಲುಮೆಯಿಂದ ಮೂಡಿದ ಪ್ರೀತಿ (3)
15.ಹುಚ್ಚನಿಲ್ಲಿ ಉಲ್ಟಾ ನಿಂತಿದ್ದಾನೆ (4)
17.ತಿರುಗಿದಾಗಲೇ ಸಿಕ್ಕಿರುವ ಬಿಡುವು! (4)

ಮೇಲಿಂದ ಕೆಳಕ್ಕೆ
1. ಆತುರಾತುರವಾಗಿ ಬಂದು ನಿಂತಿರುವ ಜಾಣ! (3)
2.ತಿರುಕ ಹಿಡಿದಿರುವ ಬಿಲ್ಲಿನ ಹಗ್ಗ (2)
3.ಸೌಟನ್ನು ಹೀಗೂ ಹೇಳುತ್ತಾರೆ (3)
5.ಇದು ಶಾಶ್ವತವಾದುದು (4)
6.ವಿಷಯ ತಿಳಿದಾಗ ಆದ ದುಃಖ (3)
7.ತಿರುಗಿಸಿ ನೋಡಿದರೂ ಇದು ಚಿನ್ನ (3)
9.ಯತಿಗೆ ಸಿಕ್ಕಿರುವ ಸೋಡಿ (4)
11.ಸಂಪಾದನೆಗೊಂದು ಪರ್ಯಾಯ ಪದ (3)
13.ಹೆಣ್ಣು ಮಂಗ ಇಲ್ಲಿದೆ (3)
14.ನೆನಪು ಮಾಡಿಕೊಂಡು ತೋರಿದ ಬಿನ್ನಾಣ (3)
16.ಅಮಲು ಹೀಗೆ ಬಂದಿದೆ (2)



5976ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ವಕ್ರದೃಷ್ಟಿ 4.ನಾಣ್ಣುಡಿ 5.ಏಮಾರು 6.ಕದನ 8.ವ್ಯವಕಲನ 11.ಗುಲಾಬಿ 13.ಮರಣ 14.ಜರಡಿ 15.ಅಹವಾಲು

ಮೇಲಿಂದ ಕೆಳಕ್ಕೆ
1.ತಕ್ರ 2.ಅಡಿಯಾಳು 3.ವರ್ತಕ 4.ನಾರು 5.ಏಕೀಕರಣ 7.ನವ್ಯ 9.ನಗು 10.ಮೃಗಜಲ 12.ಬಿಸಿಲು 13.ಮಡಿ 16.ವಾಕ್ಯ

ಸುಡೊಕು 6362

7	5			1			8	
		6			9			7
4			7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6361 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

500 ನಗರಗಳಿಗೆ ರ್‍ಯಾಪಿಡೊ ಸೇವೆ ವಿಸ್ತರಣೆ ಗುರಿ

ನವದೆಹಲಿ (ಪಿಟಿಐ): ದೇಶದಾದ್ಯಂತ 500 ನಗರಗಳಲ್ಲಿ ರ್‍ಯಾಪಿಡೊ ಸೇವೆ ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದು ಕಂಪನಿಯ ಸಹ ಸಂಸ್ಥಾಪಕ ಪವನ್ ಗುಂಟುಪಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ಮೊದಲಿಗ ಸೇವೆಯ ವಿಸ್ತಾರ ಹೆಚ್ಚಿದೆ. ಸೇವೆ ವಿಸ್ತರಣೆಯಿಂದ ಕಂಪನಿಯು ಹೆಚ್ಚಿನ ಲಾಭ ಗಳಿಸಲಿದೆ ಎಂದು ಟಿಟಿಐಗೆ ತಿಳಿಸಿದ್ದಾರೆ.

ಕಂಪನಿಯ ಬೆಳವಣಿಗೆ ಉತ್ತಮವಾಗಿದೆ. ಬಂಡವಾಳವನ್ನು ಸದ್ಬಳಕೆ ಮಾಡಲಾಗಿದೆ. ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ಬಂಡವಾಳ ಸಂಗ್ರಹಕ್ಕೆ ನಿರ್ಧರಿಸಲಾಗಿದೆ. ಐಪಿಒ ಪ್ರಕ್ರಿಯೆ ಆರಂಭಿಸಲು ದಿನಗಳು ದೂರವಿಲ್ಲ ಎಂದು ಹೇಳಿದ್ದಾರೆ.

ಪ್ರತಿ ದಿನ ಆ್ಯಪ್ ಆಧರಿತ ಆಟೊ, ಬೈಕ್ ಟ್ಯಾಕ್ಸಿ ಮತ್ತು ಕ್ಯಾಬ್‌ಗಳ ಮೂಲಕ 33 ಲಕ್ಷ ರೈಡ್ ಸೇವೆ ಒದಗಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಈಗಾಗಲೇ, ಕಂಪನಿಯು ಆ್ಯಪ್ ಆಧರಿತ ದ್ವಿಚಕ್ರ ಮತ್ತು ತ್ರಿಚಕ್ರವಾಹನ ಸೇವೆ ಒದಗಿಸುವಲ್ಲಿ ಮಾರುಕಟ್ಟೆಯಲ್ಲಿ ಮುಂಚೂಣಿ ಸ್ಥಾನದಲ್ಲಿದೆ. ಹಾಗಾಗಿ, ಹಲವು ನಗರಗಳಿಗೆ ಸೇವೆ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಸೆಬಿ 'ಮಿತ್ರ' ಹೂಡಿಕೆದಾರರಿಗೆ ಆಪ್ತ


ಬಂಡವಾಳ ಮಾರುಕಟ್ಟೆ
ಕಾವ್ಯ ಡಿ.

ಹೂಡಿಕೆ ಮಾಡಿ ಮರೆತು ಹೋಗಿರುವ, ಚಾಲ್ತಿಯಲ್ಲಿ ಇರದೆ ನಿಷ್ಕ್ರಿಯಗೊಂಡಿರುವ ಹಾಗೂ ವಾರಸುದಾರರನ್ನು ಪತ್ತೆ ಹಚ್ಚಲು ಸಾಧ್ಯವಾಗದ ಮ್ಯೂಚುವಲ್ ಫಂಡ್ (ಎಂಎಫ್) ಹೂಡಿಕೆ ಖಾತೆಗಳ ಪತ್ತೆಗೆ ಅನುವಾಗುವಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) 'ಮಿತ್ರ' ಹೆಸರಿನ ವೇದಿಕೆಯನ್ನು ರೂಪಿಸಿದೆ.

ಮ್ಯೂಚುವಲ್ ಫಂಡ್ 'ಇನ್‌ವೆಸ್ಟ್‌ಮೆಂಟ್ ಟ್ರೇಸಿಂಗ್ ಮತ್ತು ರಿಟ್ರೀವಲ್ ಅಸಿಸ್ಟೆಂಟ್' ಎಂಬುದು 'ಮಿತ್ರ'ದ ವಿಸ್ತೃತ ರೂಪ. ಹಲವಾರು ಹಳೆಯ ಮ್ಯೂಚುವಲ್ ಫಂಡ್ ಖಾತೆಗಳು ಚಾಲ್ತಿಯಲ್ಲಿರದ ಕಾರಣ ಹೂಡಿಕೆದಾರರು ಅಥವಾ ಅವರ ವಾರಸುದಾರರು ಹಣ ಪಡೆಯುವುದು ಕಷ್ಟಕರವಾಗಿದೆ. ಸೆಬಿ ಪ್ರಕಾರ ಬರೋಬ್ಬರಿ ₹500 ಕೋಟಿ ಮೊತ್ತವು ಯಾರೂ ದಿಕ್ಕಿಲ್ಲದೆ ಮ್ಯೂಚುವಲ್ ಫಂಡ್ ಕಂಪನಿಗಳ ಬಳಿ ಕೊಳೆಯುತ್ತಿದೆ.

ಅಂತಹ ಕ್ಲೇಮು ಮಾಡದ ಮ್ಯೂಚುವಲ್ ಫಂಡ್ ಹೂಡಿಕೆಗಳನ್ನು ಪತ್ತೆ ಹಚ್ಚಲು ಮತ್ತು ದುಡ್ಡನ್ನು ಅರ್ಹರು ಮರಳಿ ಪಡೆದುಕೊಳ್ಳಲು 'ಮಿತ್ರ' ನೆರವಿಗೆ ಬರುತ್ತದೆ. ಅಲ್ಲದೆ, ಕೆವೈಸಿ ಪೂರ್ಣಗೊಳಿಸದ, ಮ್ಯೂಚುವಲ್ ಫಂಡ್ ಖಾತೆಗಳನ್ನು ಅಪ್‌ಡೇಟ್ ಮಾಡಿ ಸಂಭಾವ್ಯ ವಂಚನೆ ತಪ್ಪಿಸಲು ಸಹ ಸಹಾಯ ಮಾಡಲಿದೆ.

ಮಿತ್ರ ಪೋರ್ಟಲ್ ಏಕೆ ಅಗತ್ಯ?: ಆರಂಭಿಕ ಹಂತಗಳಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆಗಳ ಡಿಜಿಟಲೀಕರಣ ಆಗಿರಲಿಲ್ಲ. ಪತ್ರದ ರೂಪದಲ್ಲಿ ಹೂಡಿಕೆ ದಾಖಲೆಗಳನ್ನು ಹೂಡಿಕೆದಾರರಿಗೆ ನೀಡಲಾಗುತ್ತಿತ್ತು. ತಂತ್ರಜ್ಞಾನದ ಬೆಳವಣಿಗೆ ಮತ್ತು ಕೆವೈಸಿ ಪದ್ಧತಿ ಪರಿಚಯಿಸಿದ ನಂತರ ಮ್ಯೂಚುವಲ್ ಫಂಡ್ ಹೂಡಿಕೆ ಕಂಪನಿಗಳು ಡಿಜಿಟಲ್ ದಾಖಲೆಗಳ ವಿತರಣೆಗೆ ಮುಂದಾದವು.

ಆದರೆ, ಅನೇಕರು ತಂತ್ರಜ್ಞಾನದ ಅಳವಡಿಕೆ ನಂತರವೂ ಮ್ಯೂಚುವಲ್ ಫಂಡ್ ಹೂಡಿಕೆಗಳ ಕೆವೈಸಿ ಮತ್ತು ಡಿಜಿಟಲೀಕರಣ ಮಾಡಿಕೊಳ್ಳಲಿಲ್ಲ. ಇದರ ಪರಿಣಾಮ ಹಲವರಿಗೆ ಮ್ಯೂಚುವಲ್ ಫಂಡ್ ಹೂಡಿಕೆ ವಿವರವನ್ನು ಟ್ರ್ಯಾಕ್ ಮಾಡಲು ಸಾಧ್ಯವಾಗುತ್ತಿಲ್ಲ. ಅಲ್ಲದೆ, 10 ವರ್ಷಕ್ಕಿಂತಲೂ ಹೆಚ್ಚಿನ ಕಾಲದಿಂದ ವಹಿವಾಟು ನಡೆಸದ ಹಲವು ಮ್ಯೂಚುವಲ್ ಫಂಡ್ ಖಾತೆಗಳು ನಿಷ್ಕ್ರಿಯವಾಗಿವೆ. ಅವೆಲ್ಲವನ್ನೂ ಪತ್ತೆ ಮಾಡಬೇಕಾದರೆ 'ಮಿತ್ರ' ಪೋರ್ಟಲ್ ನೆರವಾಗುತ್ತದೆ.

ಹೂಡಿಕೆ ಪತ್ತೆ ಹೇಗೆ?: ಮ್ಯೂಚುವಲ್ ಫಂಡ್ ಸೆಂಟ್ರಲ್ ಡಾಟ್ ಕಾಂಗೆ (https://www.mfcentral.com/) ಭೇಟಿ ನೀಡಿದರೆ ಅಲ್ಲಿ 'ಮಿತ್ರ' ಎನ್ನುವ ಹೈಪರ್ ಲಿಂಕ್ ಇದೆ. ಅದರ ಮೇಲೆ ಕ್ಲಿಕ್ ಮಾಡಿದರೆ ನಿಮ್ಮ ಪ್ಯಾನ್ ಕಾರ್ಡ್ ನಂಬರ್ ಮತ್ತು ಮೊಬೈಲ್ ನಂಬರ್ ನಮೂದಿಸುವಂತೆ ಕೇಳುತ್ತದೆ. ಮೊಬೈಲ್ ನಂಬರ್ ನಮೂದಿಸಿದ ನಂತರ ನಿಮ್ಮ ಮೊಬೈಲ್‌ಗೆ ಬರುವ ಒಟಿಪಿ ನಮೂದಿಸಿದರೆ 'ಮಿತ್ರ' ಪೋರ್ಟಲ್‌ಗೆ ನೀವು ಲಾಗಿನ್ ಆಗುತ್ತೀರಿ.

ಮೊದಲನೇ ಬಾಕ್ಸ್‌ನಲ್ಲಿ ಹೂಡಿಕೆದಾರ ಹೆಸರನ್ನು ಬರೆಯ ಬೇಕಾಗುತ್ತದೆ. ಹೂಡಿಕೆದಾರ ಪ್ಯಾನ್ ನಂಬರ್, ಇ-ಮೇಲ್ ವಿಳಾಸ, ಮೊಬೈಲ್ ನಂಬರ್, ಹುಟ್ಟಿದ ದಿನಾಂಕ, ಬ್ಯಾಂಕ್ ಖಾತೆ ಸಂಖ್ಯೆ, ಪ್ಯಾನ್ ಎಕ್ಸೆಮ್ಟ್ ಕೆವೈಸಿ ರೆಫರೆನ್ಸ್ ನಂಬರ್ (ಪಿಇಕೆಆರ್‌ಎನ್) ಬಳಸಿ ಹುಡುಕಲು ಸಾಧ್ಯವಿದೆ.

ಹೂಡಿಕೆದಾರರ ವಿಳಾಸ ಗೊತ್ತಿದ್ದರೆ ವಿಳಾಸ, ಇಲ್ಲ ನಾಮಿನಿ ಹೆಸರು, ಅಂಚೆ ಸಂಖ್ಯೆ ಅಂದರೆ ನಗರ ಅಥವಾ ಪಿನ್‌ಕೋಡ್ ನಮೂದಿಸಬಹುದಾಗಿದೆ. ಒಂದೊಮ್ಮೆ ಮ್ಯೂಚುವಲ್ ಫಂಡ್ ಹೂಡಿಕೆಯ ಫೋಲಿಯೊ ನಂಬರ್ ಇದ್ದರೆ ಅಥವಾ ಮ್ಯೂಚುವಲ್ ಫಂಡ್ ಹೂಡಿಕೆ ಮಾಡಿರುವ ಕಂಪನಿಯ ಹೆಸರು ಗೊತ್ತಿದ್ದರೆ ನಮೂದಿಸಬಹುದಾಗಿದೆ. 'ಮಿತ್ರ'ದಲ್ಲಿ ಕಳೆದು ಹೋಗಿರುವ, ನಿಷ್ಕ್ರಿಯವಾಗಿರುವ ನಿಮ್ಮದೇ ಮ್ಯೂಚುವಲ್ ಫಂಡ್ ಹೂಡಿಕೆಗಳು ಅಥವಾ ಬೇರೆಯವರು ಕಳೆದುಕೊಂಡಿರುವ ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಹುಡುಕಲು ಸಾಧ್ಯವಿದೆ.

ಒಬ್ಬ ವ್ಯಕ್ತಿ ಲಾಗಿನ್ ಆದರೆ ಗರಿಷ್ಠ 25 ಬಾರಿ ಹುಡುಕಾಟ ನಡೆಸಲು ಅವಕಾಶ ನೀಡಲಾಗಿದೆ. ನಿಮ್ಮ ಅಥವಾ ನಿಮ್ಮವರ ಹೆಸರಿನಲ್ಲಿ ಮ್ಯೂಚುವಲ್ ಫಂಡ್ ಇದೆ ಎನ್ನುವ ಸಂದೇಶ ಬಂದರೆ ಪ್ಯಾನ್ ನಂಬರ್, ವಿಳಾಸ ದೃಢೀಕರಣ, ಆಧಾರ್, ಫೋಟೊ, ಬ್ಯಾಂಕ್ ಪಾಸ್‌ಬುಕ್ ಸೇರಿದಂತೆ ಇನ್ನಿತರ ಸೂಚಿತ ದಾಖಲೆಗಳೊಂದಿಗೆ ಮ್ಯೂಚುವಲ್ ಫಂಡ್ ಕಚೇರಿ, ಕೇಫಿನ್ ಕಚೇರಿ ಅಥವಾ ಕ್ಯಾಮ್ಸ್ ಕಚೇರಿಗೆ ಭೇಟಿ ನೀಡಬೇಕಾಗುತ್ತದೆ. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ನಿಮ್ಮ ಹೂಡಿಕೆಯಿಂದ ಬರಬೇಕಾದ ಮೊತ್ತ ನಿಮಗೆ ಲಭಿಸುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಗಳಿಕೆ ದಾಖಲಿಸಿದ ಷೇರುಪೇಟೆ



ಮಾರ್ಚ್ 7ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 74,332 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.55ರಷ್ಟು ಗಳಿಸಿಕೊಂಡಿದೆ. 22,552 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.93ರಷ್ಟು ಹೆಚ್ಚಳವಾಗಿದೆ.

ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕ ಶೇ 2.66ರಷ್ಟು ಗಳಿಸಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 5.47ರಷ್ಟು ಹೆಚ್ಚಳ ಕಂಡಿದೆ. ಪ್ರಸಕ್ತ ವರ್ಷದ ಆರಂಭದಿಂದ ಈವರೆಗೆ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ವಾರದ ಅವಧಿಯಲ್ಲಿ ಕಂಡಿರುವ ಗರಿಷ್ಠ ಜಿಗಿತ ಇದಾಗಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡು ಬರುತ್ತಿರುವ ಮಂದಗತಿಯ ವಹಿವಾಟು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೆನಡಾ, ಮೆಕ್ಸಿಕೊ ಮತ್ತು ಚೀನಾ ಮೇಲೆ ಸುಂಕ ಸಮರ ಸಾರಿರುವುದು, ಅದಕ್ಕೆ ಪ್ರತಿಯಾಗಿ ಚೀನಾ, ಕೆನಡಾ ದೇಶಗಳು ಅಮೆರಿಕದ ಮೇಲೆ ಸುಂಕ ಹಾಕಿರುವುದು ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತಿವೆ.

ವಲಯವಾರು ಪ್ರಗತಿಯಲ್ಲಿ ಲೋಹ ಶೇ 8.61, ಮಾಧ್ಯಮ ಶೇ 7.36, ಎನರ್ಜಿ ಶೇ 5.9, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.94, ಫಾರ್ಮಾ ಶೇ 2.85, ಆಟೊ ಶೇ 2.49, ಎಫ್‌ಎಂಸಿಜಿ ಶೇ 2.37, ರಿಯಲ್ ಎಸ್ಟೇಟ್ ಶೇ 2.31, ಮಾಹಿತಿ ತಂತ್ರಜ್ಞಾನ ಶೇ 1.35, ಸರ್ವಿಸಸ್ ಶೇ 0.88, ಫೈನಾನ್ಸ್ ಶೇ 0.47 ಮತ್ತು ಬ್ಯಾಂಕ್ ಶೇ 0.32ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಗಳಿಕೆ: ವಾರದ ಲೆಕ್ಕಾಚಾರ ನೋಡಿದಾಗ ನಿಫ್ಟಿಯಲ್ಲಿ ಇಂಡಸ್ ಇಂಡ್ ಬ್ಯಾಂಕ್ ಶೇ 5.27, ಬಜಾಜ್ ಆಟೊ ಶೇ 4.34, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.55, ಮಾರುತಿ ಸುಜುಕಿ ಶೇ 2.23, ಬಜಾಜ್ ಫಿನ್‌ಸರ್ವ್ ಶೇ 1.73, ಹೀರೊ ಮೋಟೊಕಾರ್ಪ್ ಶೇ 1.64, ಬಜಾಜ್ ಫೈನಾನ್ಸ್ ಶೇ 1.63, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 1.08, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 0.91, ಟೈಟನ್ ಕಂಪನಿ ಶೇ 0.15 ಮತ್ತು ಇನ್ಫೊಸಿಸ್ ಶೇ 0.14ರಷ್ಟು ಕುಸಿದಿವೆ.

ಭಾರತ್ ಎಲೆಕ್ಟ್ರಾನಿಕ್ಸ್ ಶೇ 12.42, ಟಾಟಾ ಸ್ಟೀಲ್ ಶೇ 10.46, ಬಿಪಿಸಿಎಲ್ ಶೇ 9.96, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 8.63, ಅದಾನಿ ಎಂಟರ್ ಪ್ರೈಸಸ್ ಶೇ 7.35, ಅದಾನಿ ಪೋರ್ಟ್ಸ್ ಶೇ 6.94, ಐಷರ್ ಮೋಟರ್ಸ್ ಶೇ 6.9, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 6.47, ಎನ್‌ಟಿಪಿಸಿ ಶೇ 5.92, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 5.77, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 5.69 ಮತ್ತು ಪವರ್ ಗ್ರಿಡ್ ಕಾರ್ಪೊರೇಷನ್ ಶೇ 4.99ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಅಮೆರಿಕದ ಸುಂಕ ಸಮರದಿಂದ ಜಾಗತಿಕವಾಗಿ ಮಾರುಕಟ್ಟೆಗಳು ಅನಿಶ್ಚಿತ ಸ್ಥಿತಿ ಎದುರಿಸುತ್ತಿವೆ. ಈ ಕಾರಣದಿಂದಾಗಿ ಹೂಡಿಕೆದಾರರು ಷೇರುಗಳ ಮೇಲೆ ತೊಡಗಿಸಲು ಹಿಂದೇಟು ಹಾಕುತ್ತಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಭಾರತದ ಮಾರುಕಟ್ಟೆಗಳು ಒಂದಷ್ಟು ಚೇತರಿಕೆ ಕಂಡಿದ್ದರೂ ಅನಿಶ್ಚಿತ ವಾತಾವರಣ ಹೂಡಿಕೆದಾರರನ್ನು ಆತಂಕಕ್ಕೆ ತಳ್ಳಿದೆ. ಮುಂದಿನ ದಿನಗಳಲ್ಲಿ ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ಸಕಾರಾತ್ಮಕವಾಗಿ ಕಂಡುಬಂದರೆ ಪರಿಸ್ಥಿತಿ ಸುಧಾರಿಸುವ ಸಾಧ್ಯತೆಯಿದೆ.

ಎಫ್‌ಪಿಐ ₹24,753 ಕೋಟಿ ವಾಪಸ್

ನವದೆಹಲಿ (ಪಿಟಿಐ): ಪ್ರಸಕ್ತ ತಿಂಗಳ ಮೊದಲ ವಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಈಕ್ವಿಟಿ ಮಾರುಕಟ್ಟೆಯಿಂದ ₹24,753 ಕೋಟಿ ಮೊತ್ತವನ್ನು ವಾಪಸ್ ಪಡೆದಿದ್ದಾರೆ.

ಜನವರಿಯಲ್ಲಿ ₹78,027 ಕೋಟಿ ಮತ್ತು ಫೆಬ್ರುವರಿಯಲ್ಲಿ ₹34,574 ಕೋಟಿ ಬಂಡವಾಳ ಹಿಂಪಡೆಯಲಾಗಿದೆ. ಜನವರಿಯಿಂದ ಇಲ್ಲಿಯವರೆಗೆ ಷೇರುಪೇಟೆಯಿಂದ ಒಟ್ಟು ₹1.37 ಲಕ್ಷ ಕೋಟಿ ಬಂಡವಾಳ ಹಿಂಪಡೆಯಲಾಗಿದೆ. ಕಳೆದ ವರ್ಷದ ಡಿಸೆಂಬರ್ 13ರಿಂದ ಇಲ್ಲಿಯವರೆಗೆ ಒಟ್ಟು ₹1.49 ಲಕ್ಷ ಕೋಟಿ ಬಂಡವಾಳ ಹೊರಹೋಗಿದೆ.

'ಮೆಕ್ಸಿಕೊ, ಕೆನಡಾ, ಚೀನಾದ ಮೇಲೆ ಅಮೆರಿಕವು ಅತಿಹೆಚ್ಚು ಸುಂಕ ವಿಧಿಸುತ್ತಿದೆ. ಇದಕ್ಕೆ ಪ್ರತಿಯಾಗಿ ಅಮೆರಿಕದ ಸರಕುಗಳ ಮೇಲೆ ಈ ರಾಷ್ಟ್ರಗಳು ಪ್ರತಿಸುಂಕ ವಿಧಿಸಲು ಮುಂದಾಗಿವೆ. ಭಾರತವು ಅತಿಹೆಚ್ಚು ಸುಂಕ ಹೇರಿದೆ. ಇದು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ' ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ವ್ಯವಸ್ಥಾಪಕ (ಸಂಶೋಧನೆ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹503-672
ದ್ವಿತಳಿ (ಬಿ.ವಿ)	₹360-912

ಇ-ಶ್ರಮ್‌ನಡಿ ನೋಂದಣಿ ಗಿಗ್ ಕಾರ್ಮಿಕರಿಗೆ ಸೂಚನೆ



ನವದೆಹಲಿ (ಪಿಟಿಐ): ಗಿಗ್ ಮತ್ತು ಆನ್‌ಲೈನ್ ವೇದಿಕೆಯಡಿ ಕೆಲಸ ನಿರ್ವಹಿಸುವ ಕಾರ್ಮಿಕರು ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯಡಿ (ಎಬಿ–ಪಿಎಂಜೆಎವೈ) ಸೌಲಭ್ಯ ಪಡೆಯಲು ಇ-ಶ್ರಮ್ ಪೋರ್ಟಲ್‌ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬೇಕಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಟ್ಯಾಕ್ಸಿ, ಆಹಾರ ವಿತರಣೆ, ಸರಕು ಸಾಗಣೆ ಮತ್ತು ವೃತ್ತಿಪರ ಸೇವಾ ವಲಯದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿದ್ದು, ಗಿಗ್, ಆನ್‌ಲೈನ್ ವೇದಿಕೆಯ ಆರ್ಥಿಕತೆ ವಿಸ್ತರಣೆಗೊಳ್ಳುತ್ತಿದೆ ಎಂದು ಸಚಿವಾಲಯ ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗಿಗ್ ವಲಯದಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆ 1 ಕೋಟಿಗೆ ತಲುಪಲಿದೆ. 2029–30ರ ವೇಳೆಗೆ ಈ ಸಂಖ್ಯೆಯು 2.35 ಕೋಟಿಗೆ ತಲುಪಲಿದೆ ಎಂದು ನೀತಿ ಆಯೋಗವು ಅಂದಾಜಿಸಿದೆ.

ಗಿಗ್ ಕಾರ್ಮಿಕರಿಗೆ ಅನುಕೂಲ ಕಲ್ಪಿಸುವ ಬಗ್ಗೆ 2025–26ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಕಾರ್ಮಿಕರಿಗೆ ಗುರುತಿನ ಚೀಟಿ ನೀಡುವುದಾಗಿ ಸರ್ಕಾರ ಹೇಳಿದೆ. ಅಲ್ಲದೆ, ಎಬಿ–ಪಿಎಂಜೆಎವೈ ಅಡಿ ಪ್ರತಿ ಕುಟುಂಬಕ್ಕೆ ₹5 ಲಕ್ಷ ಮೊತ್ತದ ಆರೋಗ್ಯ ವಿಮಾ ಸೌಲಭ್ಯ ನೀಡುವುದಾಗಿ ತಿಳಿಸಿದೆ. ದೇಶದಾದ್ಯಂತ ಸರ್ಕಾರಿ ಮತ್ತು ಯೋಜನೆಯಡಿ ನೋಂದಾಯಿಸಿರುವ ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಮಿಕರ ಕುಟುಂಬಗಳಿಗೆ ಚಿಕಿತ್ಸಾ ಸೌಲಭ್ಯ ದೊರೆಯಲಿದೆ. ಇದನ್ನು ಪಡೆಯಲು ಕಾರ್ಮಿಕರು ಇ-ಶ್ರಮ್ ಪೋರ್ಟಲ್‌ನಡಿ ಹೆಸರು ನೋಂದಣಿ ಮಾಡಿಕೊಳ್ಳಬೇಕಿದೆ ಎಂದು ಸಚಿವಾಲಯ ತಿಳಿಸಿದೆ.

ಐಪಿಒ ಮಾರುಕಟ್ಟೆ ಮಂದಗತಿ

ನವದೆಹಲಿ (ಪಿಟಿಐ): ಕಳೆದ ವರ್ಷ 91 ಕಂಪನಿಗಳು ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ಬಂಡವಾಳ ಸಂಗ್ರಹಿಸಿದ್ದು ದಾಖಲೆಯಾಗಿತ್ತು. ಆದರೆ, ಈ ಬಾರಿ ಐಪಿಒ ಮೂಲಕ ಬಂಡವಾಳ ಸಂಗ್ರಹ ಪ್ರಮಾಣ ಕಡಿಮೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತದಿಂದಾಗಿ ಕಳೆದ ಮೂರು ವಾರಗಳಿಂದ ಯಾವುದೇ ಕಂಪನಿಯು ಐಪಿಒ ಘೋಷಿಸಿಲ್ಲ ಎಂದು ಹೇಳಿದ್ದಾರೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಒಟ್ಟು 16 ಕಂಪನಿಗಳು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಿದ್ದವು. ಪ್ರಸಕ್ತ ವರ್ಷದ ಜನವರಿಯಲ್ಲಿ ಐದು ಮತ್ತು ಫೆಬ್ರುವರಿಯಲ್ಲಿ ನಾಲ್ಕು ಕಂಪನಿಗಳಷ್ಟೇ ಐಪಿಒ ಮೂಲಕ ಷೇರುಪೇಟೆ ಪ್ರವೇಶಿಸಿವೆ.

ಕಳೆದ ವರ್ಷ ಕಂಪನಿಗಳು ಸಾರ್ವಜನಿಕ ಷೇರು ಹಂಚಿಕೆ ಮೂಲಕ ₹1.6 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿದ್ದವು. ಐಪಿಒಗಳ ಸಂಖ್ಯೆ ಹೆಚ್ಚಳವು ಸಣ್ಣ ಹೂಡಿಕೆದಾರರು ಷೇರುಪೇಟೆಯಲ್ಲಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸಿತ್ತು. ಅಲ್ಲದೆ, ಖಾಸಗಿ ಬಂಡವಾಳ ವೆಚ್ಚದ ಏರಿಕೆ ಜೊತೆಗೆ ದೇಶದ ಆರ್ಥಿಕತೆ ಬೆಳವಣಿಗೆಗೂ ಬಲ ನೀಡಿತ್ತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ಕಳೆದ ಎರಡು ತಿಂಗಳಿನಲ್ಲಿ ದೇಶೀಯ ಷೇರುಪೇಟೆಯು ಕುಸಿದಿದೆ. ಕಂಪನಿಗಳ ಷೇರಿನ ಮೌಲ್ಯವೂ ಇಳಿದಿದೆ. ಹೂಡಿಕೆದಾರರು ಹೊಸ ಹೂಡಿಕೆಯತ್ತ ಚಿತ್ತ ನೆಟ್ಟಿಲ್ಲ' ಎಂದಿದ್ದಾರೆ.

ಬಂಪರ್ ಬೆಲೆ: ರಾಜ್ಯದ ತೋಟಗಳಿಗೆ ಮಹಾರಾಷ್ಟ್ರ ವ್ಯಾಪಾರಿಗಳ ದಾಂಗುಡಿ

ದ್ರಾಕ್ಷಿ ಬೆಳೆಗಾರರಿಗೆ ಸಿಹಿ ಸುಗ್ಗಿ

• ಬಸವರಾಜ್ ಸಂಪಳ್ಳಿ


ವಿಜಯಪುರ ಜಿಲ್ಲೆಯ ಘೋಣಸಗಿ ಗ್ರಾಮದ ಬೆಳೆಗಾರರೊಬ್ಬರ ತೋಟದಲ್ಲಿ ಕೊಯ್ಲಿಗೆ ಬಂದಿರುವ ದ್ರಾಕ್ಷಿ ಹಣ್ಣುಗಳು ಪ್ರಜಾವಾಣಿ ಚಿತ್ರ

ವಿಜಯಪುರ: ಕರ್ನಾಟಕ ಮತ್ತು ನೆರೆಯ ಮಹಾರಾಷ್ಟ್ರ ಮಾರುಕಟ್ಟೆಯಲ್ಲಿ ಹಸಿ ಮತ್ತು ಒಣ ದ್ರಾಕ್ಷಿಗೆ ಬಂಪರ್ ಬೆಲೆ ಲಭಿಸತೊಡಗಿದ್ದು, ಹಲವು ವರ್ಷಗಳ ಬಳಿಕ ರಾಜ್ಯದ ದ್ರಾಕ್ಷಿ ಬೆಳೆಗಾರರು ಕೈತುಂಬ ಹಣ ಸಂಪಾದಿಸುತ್ತಿದ್ದಾರೆ.

ಉತ್ತಮ ಗುಣಮಟ್ಟದ ಪ್ರತಿ ಕೆ.ಜಿ ಹಸಿ ದ್ರಾಕ್ಷಿಗೆ (ಟೇಬಲ್ ಗ್ರೇಪ್) ಕನಿಷ್ಠ ₹50 ರಿಂದ ಗರಿಷ್ಠ ₹70 ದರವಿದೆ. ಒಣ ದ್ರಾಕ್ಷಿ ಬೆಲೆಯು ಕೆ.ಜಿ.ಗೆ ಕನಿಷ್ಠ ₹180ರಿಂದ ಗರಿಷ್ಠ ₹280ರ ವರೆಗೂ ತಲುಪಿದ್ದು, ಬೆಳೆಗಾರರ ಪಾಲಿಗೆ ಪ್ರಸಕ್ತ ಸಾಲಿನ ಸುಗ್ಗಿಯು ಸಿರಿ ತಂದಿದೆ.

'ಒಣ ದ್ರಾಕ್ಷಿಗೆ ಮಾರುಕಟ್ಟೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೆ.ಜಿ.ಗೆ ಗರಿಷ್ಠ ₹130ರಿಂದ ₹140 ದರ ಸಿಕ್ಕಿತ್ತು. ತಿನ್ನುವ ಹಸಿ ದ್ರಾಕ್ಷಿಯು ಕೆ.ಜಿ.ಗೆ ₹25ರಿಂದ ₹30ಕ್ಕೆ ಮಾರಾಟವಾಗಿತ್ತು. ಈ ವರ್ಷ ಎರಡಕ್ಕೂ ದುಪ್ಪಟ್ಟು ಬೆಲೆ ಸಿಗುತ್ತಿದೆ' ಎಂದು ವಿಜಯಪುರ ಜಿಲ್ಲಾ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಡಾ.ಕೆ.ಎಚ್. ಮುಂಬಾರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.



'ಕೋವಿಡ್ ನಂತರದ ನಾಲ್ಕೈದು ವರ್ಷಗಳಿಂದ ಉತ್ತಮ ದರ ಸಿಗದ ಕಾರಣ ಶೇ 20ರಷ್ಟು ರೈತರು ದ್ರಾಕ್ಷಿ ಗಿಡಗಳನ್ನು ತೋಟಗಳಿಂದ ತೆರವುಗೊಳಿಸಿದ್ದಾರೆ. ಅಲ್ಲದೆ, 2023–24ನೇ ಸಾಲಿನಲ್ಲಿ ತೀವ್ರ ಬರದಿಂದಾಗಿ ನೀರಿಲ್ಲದೇ ದ್ರಾಕ್ಷಿ ಗಿಡಗಳು ನಾಶವಾಗಿವೆ. ಕಳೆದ ವರ್ಷ ಭಾರಿ ಮಳೆಯಾಗಿದ್ದರಿಂದ ಈ ವರ್ಷ ಇಳುವರಿ ಕುಂಠಿತವಾಗಿದ್ದು, ದ್ರಾಕ್ಷಿ ಉತ್ಪಾದನೆ ಕಡಿಮೆಯಾಗಿದೆ. ಇದರಿಂದ ರೈತರಿಗೆ ಮಾರುಕಟ್ಟೆಯಲ್ಲಿ ಗರಿಷ್ಠ ದರ ದೊರೆಯುತ್ತಿದೆ' ಎಂದು ಹೇಳಿದರು.

ಮಹಾರಾಷ್ಟ್ರದಿಂದ ಬೇಡಿಕೆ: 'ಅತ್ಯಧಿಕ ಪ್ರಮಾಣದಲ್ಲಿ ದ್ರಾಕ್ಷಿ ಬೆಳೆಯುವ ನೆರೆಯ ಮಹಾರಾಷ್ಟ್ರದಲ್ಲೂ ಈ ವರ್ಷ ಶೇ 50ರಷ್ಟು ಬೆಳೆ ಕೈಕೊಟ್ಟಿರುವುದರಿಂದ ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಯ ದ್ರಾಕ್ಷಿ ಬೆಳೆಗಾರರ ಹೊಲಕ್ಕೆ ದಾಂಗುಡಿ ಇಟ್ಟಿರುವ ಮಹಾರಾಷ್ಟ್ರದ ವ್ಯಾಪಾರಸ್ಥರು ಸ್ಪರ್ಧಾತ್ಮಕ ಬೆಲೆ ನೀಡಿ ಹಸಿ ದ್ರಾಕ್ಷಿಯನ್ನೇ ಕೊಂಡೊಯ್ಯುತ್ತಿದ್ದಾರೆ' ಎಂದು ಕರ್ನಾಟಕ ರಾಜ್ಯ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಅಭಯಕುಮಾರ್ ನಾಂದ್ರೇಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದ ಒಂದು ದಶಕದಿಂದ ಈಚೆಗೆ ರೈತರು ತಾವು ಬೆಳೆದ ದ್ರಾಕ್ಷಿಯನ್ನು ಸಂಗ್ರಹಿಸಿಡಲು ಶೈತ್ಯಾಗಾರಗಳಲ್ಲಿ ಜಾಗ ಸಿಗದೆ ಅರ್ಧ ಬೆಲೆಗೆ ಮಾರಾಟ ಮಾಡಿ ನಷ್ಟ ಅನುಭವಿಸಿದ್ದರು. ಈ ವರ್ಷ ದ್ರಾಕ್ಷಿ ಇಲ್ಲದೇ ಶೈತ್ಯಾಗಾರಗಳು ಭಣಗುಡುತ್ತಿವೆ' ಎಂದು ಹೇಳಿದರು.


₹6 ಸಾವಿರ ಕೋಟಿ ವಹಿವಾಟು

ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಸುಮಾರು 40 ಸಾವಿರ ಹೆಕ್ಟೇರ್‌ನಲ್ಲಿ ದ್ರಾಕ್ಷಿ ಬೆಳೆಯಲಾಗುತ್ತದೆ. ಈ ಪೈಕಿ 30 ಸಾವಿರ ಹೆಕ್ಟೇರ್‌ನಲ್ಲಿ ಒಣ ದ್ರಾಕ್ಷಿ ಉತ್ಪಾದನೆ ಮಾಡಲಾಗುತ್ತದೆ. 2.25 ಲಕ್ಷ ಟನ್‌ಗೂ ಹೆಚ್ಚು ಒಣ ದ್ರಾಕ್ಷಿ ಉತ್ಪಾದನೆಯಾಗುತ್ತಿದ್ದು, ಇದರ ಒಟ್ಟಾರೆ ಮೌಲ್ಯ ₹6 ಸಾವಿರ ಕೋಟಿ ಆಗಿದೆ.

'ವಿಜಯಪುರ ಜಿಲ್ಲೆಯಲ್ಲಿ ಸುಮಾರು 70 ಸಾವಿರ ಎಕರೆ, ಬಾಗಲಕೋಟೆ ಜಿಲ್ಲೆ 18 ಸಾವಿರ ಎಕರೆ ಮತ್ತು ಬೆಳಗಾವಿ ಜಿಲ್ಲೆಯ 16 ಸಾವಿರ ಎಕರೆಯಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ' ಎಂದು ವಿಜಯಪುರ ಜಿಲ್ಲಾ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ರಾಹುಲ್ ಭಾವಿದೊಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

> ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ದ್ರಾಕ್ಷಿ ಬೆಳೆಯುವ ಕ್ಷೇತ್ರ ಕುಗ್ಗತೊಡಗಿದೆ. ಇದರಿಂದ ಬೆಲೆ ಹೆಚ್ಚಳವಾಗಿದೆ
> **ರಾಹುಲ್ ಭಾವಿದೊಡ್ಡಿ,** ಉಪ ನಿರ್ದೇಶಕ, ಜಿಲ್ಲಾ ತೋಟಗಾರಿಕೆ ಇಲಾಖೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ಕ್ಯಾಲಿಫೋರ್ನಿಯಾ: ಮತ್ತೊಂದು ಹಿಂದೂ ದೇಗುಲ ವಿರೂಪ

ನ್ಯೂಯಾರ್ಕ್ (ಪಿಟಿಐ): ಕ್ಯಾಲಿಫೋರ್ನಿಯಾದ ಪ್ರಮುಖ ಹಿಂದೂ ದೇವಾಲಯವನ್ನು ವಿರೂಪಗೊಳಿಸಲಾಗಿದೆ. ದೇವಾಲಯದ ಮೇಲೆ ಭಾರತ ವಿರೋಧಿ ಬರಹಗಳನ್ನು ಬರೆಯುವ ಮೂಲಕ ದೇವಾಲಯವನ್ನು ಕೆಲ ದುಷ್ಕರ್ಮಿಗಳು ವಿರೂಪ ಮಾಡಿದ್ದಾರೆ.

ಸ್ಯಾನ್ ಬರ್ನಾರ್ಡಿನೊ ಕೌಂಟಿಯ ಚಿನೋ ಹಿಲ್ಸ್ ನಗರದಲ್ಲಿರುವ ತನ್ನ ಶ್ರೀಸ್ವಾಮಿನಾರಾಯಣ ಮಂದಿರವು ಅಪವಿತ್ರಗೊಂಡಿದೆ ಎಂದು ಬೋಚಾಸನವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ (ಬಿಎಪಿಎಸ್) ತಿಳಿಸಿದೆ. ಚಿನೋ ಹಿಲ್ಸ್ ಪ್ರದೇಶವು ಲಾಸ್ ಏಂಜಲೀಸ್ ಕೌಂಟಿಯ ಗಡಿಯಲ್ಲಿ ಬರುತ್ತದೆ.

'ಈ ಬಾರಿ ಮತ್ತೊಂದು ಮಂದಿರವನ್ನು ಗುರಿಯಾಗಿಸಿ ಅಪವಿತ್ರಗೊಳಿಸಲಾಗಿದೆ. ದ್ವೇಷ ಬಿತ್ತುವವರ ವಿರುದ್ಧ ಹಿಂದೂ ಸಮುದಾಯ ದೃಢವಾಗಿ ನಿಂತಿದೆ. ದ್ವೇಷ ಬೇರೂರಲು ನಾವು ಎಂದಿಗೂ ಬಿಡುವುದಿಲ್ಲ' ಎಂದು ಬಿಎಪಿಎಸ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ನ್ಯೂಯಾರ್ಕ್‌ನಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಕಚೇರಿ ಈ ಘಟನೆಯನ್ನು ತೀವ್ರವಾಗಿ ಖಂಡಿಸಿದೆ.

ತನಿಖೆಗೆ ಆಗ್ರಹ: ಘಟನೆಯನ್ನು ಖಂಡಿಸಿರುವ 'ಹಿಂದೂ ಅಮೆರಿಕನ್ ಫೌಂಡೇಷನ್', 'ಕ್ಯಾಲಿಫೋರ್ನಿಯಾದ ಅತಿ ದೊಡ್ಡ ಹಿಂದೂ ದೇಗುಲಕ್ಕೆ ಹಾನಿ ಆಗಿರುವ ಕುರಿತು ಎಫ್‌ಬಿಐ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದೆ.

ಉತ್ತರ ಅಮೆರಿಕದ ಹಿಂದೂಗಳ ಒಕ್ಕೂಟವೂ ಘಟನೆಯ ಸಮಗ್ರ ತನಿಖೆಗೆ ಒತ್ತಾಯ ಮಾಡಿದೆ. 'ಕೆಲ ವರ್ಷಗಳಲ್ಲಿ ಅಮೆರಿಕದ 10 ದೇಗುಲಗಳ ಮೇಲೆ ದಾಳಿ ನಡೆದಿದೆ. ಇದರಲ್ಲಿ ಕೆಲವನ್ನು ಧ್ವಂಸಗೊಳಿಸಿದ್ದರೆ, ಕೆಲವೆಡೆ ಕಳ್ಳತನ ಎಸಗಲಾಗಿದೆ' ಎಂದು ಅದು ಹೇಳಿದೆ.


ಸೆಪ್ಟೆಂಬರ್‌ನಲ್ಲಿ ಕ್ಯಾಲಿಫೋರ್ನಿಯಾದ ಸ್ಯಾಕ್ರಮೆಂಟೊದ ಬಿಎಪಿಎಸ್ ದೇಗುಲದಲ್ಲಿ 'ಹಿಂದೂಗಳೇ ಹಿಂತಿರುಗಿ' ಎಂದು ಬರೆಯುವ ಮೂಲಕ ಮಂದಿರವನ್ನು ಅಪವಿತ್ರಗೊಳಿಸಲಾಗಿತ್ತು. ಅದಕ್ಕೂ 10 ದಿನ ಮೊದಲು ನ್ಯೂಯಾರ್ಕ್‌ನ ಬಿಎಪಿಎಸ್ ಮಂದಿರವನ್ನು ಅಪವಿತ್ರಗೊಳಿಸಲಾಗಿತ್ತು.

ಕಠಿಣ ಕ್ರಮಕ್ಕೆ ಭಾರತ ಆಗ್ರಹ

ನವದೆಹಲಿ (ಪಿಟಿಐ): ಕ್ಯಾಲಿಫೋರ್ನಿಯಾದ ಹಿಂದೂ ದೇಗುಲವನ್ನು ವಿರೂಪಗೊಳಿಸಿದ್ದ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಭಾರತ, ಈ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದೆ. ಪ್ರಾರ್ಥನಾ ಮಂದಿರಗಳಿಗೆ ಸೂಕ್ತ ಭದ್ರತೆ ಒದಗಿಸುವಂತೆ ಭಾರತ ಸರ್ಕಾರವು ಅಮೆರಿಕವನ್ನು ಒತ್ತಾಯಿಸಿದೆ.

'ತನಿಖೆ ನಡೆಸಿ ಕೃತ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಮತ್ತು ದೇಗುಲಗಳಿಗೆ ಭದ್ರತೆಯನ್ನು ಖಚಿತಪಡಿಸಬೇಕು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಕೆನಡಾ: ಲಿಬರಲ್ ಪಾರ್ಟಿ ನಾಯಕರಾಗಿ ಮಾರ್ಕ್ ಕಾರ್ನೆ?



ಒಟ್ಟಾವ (ಎಎಫ್‌ಪಿ): ಕೆನಡಾದ ಲಿಬರಲ್ ಪಾರ್ಟಿ ಹೊಸ ನಾಯಕನಾಗಿ ಮಾರ್ಕ್ ಕಾರ್ನೆ ಆಯ್ಕೆಯಾಗುವ ಸಾಧ್ಯತೆ ಇದೆ. ಆಯ್ಕೆಯಾದಲ್ಲಿ ಇವರು ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಬದಲಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

ಮಾರ್ಕ್ ಕಾರ್ನೆ ಅವರು ಬ್ಯಾಂಕ್ ಆಫ್ ಕೆನಡಾ ಹಾಗೂ ಬ್ಯಾಂಕ್ ಆಫ್ ಇಂಗ್ಲೆಂಡ್‌ನ ಗವರ್ನರ್ ಆಗಿ ಕಾರ್ಯ-ನಿರ್ವಹಿಸಿದ್ದು, ರಾಜಕೀಯವಾಗಿ ಅನನುಭವಿ ಆಗಿದ್ದಾರೆ.

ಹೊಸ ನಾಯಕನ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಪಕ್ಷದ ಸುಮಾರು 4 ಲಕ್ಷ ಸದಸ್ಯರು ಮತದಾನ ಮಾಡಿದ್ದಾರೆ.

ಜತೆಗೆ ಮಾಜಿ ಉಪ ಪ್ರಧಾನಿ ಕ್ರಿಸ್ಟಿಯಾ ಫ್ರೀಲ್ಯಾಂಡ್ ಕೂಡಾ ಸ್ಪರ್ಧೆಯಲ್ಲಿದ್ದಾರೆ. ಇವರು, 2015ರಲ್ಲಿ ಲಿಬರಲ್ ಪಾರ್ಟಿ ಸರ್ಕಾರ ಇದ್ದಾಗ ವಿವಿಧ ಪ್ರಮುಖ ಸ್ಥಾನ ನಿಭಾಯಿಸಿದ್ದರು.


ಚುನಾವಣೆಯಲ್ಲಿ ಗೆಲ್ಲುವವರು ಟ್ರುಡೊ ಅವರ ಸ್ಥಾನದಲ್ಲಿ ಪ್ರಧಾನಿ ಆಗಿ ಅಧಿಕಾರ ಸ್ವೀಕರಿಸಲಿದ್ದು, ನಂತರ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸುವರು. ಪರಿಣತರ ಪ್ರಕಾರ, ಪ್ರತಿಪಕ್ಷ ಕನ್ಸರ್ವೇಟಿವ್ ಪಾರ್ಟಿ ಪರವಾಗಿ ಒಲವು ಹೆಚ್ಚಾಗಿದೆ.

ಚಂದ್ರಬಾಬು ನಾಯ್ಡು ಘೋಷಣೆ • ಹೆಚ್ಚು ಮಕ್ಕಳನ್ನು ಹೊಂದಲು ಮಹಿಳಾ ನೌಕರರಿಗೆ ಪ್ರೋತ್ಸಾಹ

ಆಂಧ್ರ: ಹೆರಿಗೆ ರಜೆ ಮಿತಿ ತೆರವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ದಕ್ಷಿಣ ರಾಜ್ಯಗಳಲ್ಲಿ ಜನನ ಪ್ರಮಾಣ ಕುಸಿತಕ್ಕೆ ಸಂಬಂಧಿಸಿದಂತೆ ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ, ಮಹಿಳಾ ನೌಕರರಿಗೆ ಹೆರಿಗೆ ರಜೆ ಮೇಲಿದ್ದ ನಿರ್ಬಂಧಗಳನ್ನು ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ತೆರವುಗೊಳಿಸಿದ್ದಾರೆ.


ಚಂದ್ರಬಾಬು ನಾಯ್ಡು

ಪ್ರಕಾಶಂ ಜಿಲ್ಲೆಯ ಮಾರ್ಕಾ-ಪುರಂದಲ್ಲಿ ಶನಿವಾರ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಎಲ್ಲ ಮಹಿಳಾ ನೌಕರರು ಎಷ್ಟೇ ಮಕ್ಕಳನ್ನು ಹೊಂದಿದರೂ ಹೆರಿಗೆ ರಜೆ ನೀಡಲಾಗುವುದು' ಎಂದು ಘೋಷಿಸಿದರು.

'ಈ ಮೂಲಕ ಮುಖ್ಯಮಂತ್ರಿ ಅವರು, ಎಲ್ಲ ಮಹಿಳೆಯರೂ ಸಾಧ್ಯವಾದಷ್ಟು ಹೆಚ್ಚು ಮಕ್ಕಳನ್ನು ಹೊಂದುವಂತೆ ಸಂದೇಶ ರವಾನಿಸಿದ್ದಾರೆ' ಎಂದು ಟಿಡಿಪಿ ನಾಯಕರೊಬ್ಬರು ಹೇಳಿದರು.

ಹೆರಿಗೆ ರಜೆಯ ಅರ್ಹತೆ ಕುರಿತ ಸಂದೇಹವನ್ನು ಕಾನ್‌ಸ್ಟೆಬಲ್ ಒಬ್ಬರು ಶುಕ್ರವಾರವಷ್ಟೇ ಗೃಹ ಸಚಿವರ ಬಳಿ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿ ಅವರ ನಿರ್ಧಾರದಿಂದ ಈ ಬಗ್ಗೆ ಸ್ಪಷ್ಟತೆ ದೊರೆತಂತಾಗಿದೆ ಎಂದು ಅವರು ತಿಳಿಸಿದರು.

ಇಲ್ಲಿಯವರೆಗೆ ಮಹಿಳಾ ನೌಕರರು ತಮ್ಮ ಮೊದಲ ಎರಡು ಹೆರಿಗೆಗಳಿಗೆ ತಲಾ ಆರು ತಿಂಗಳ ವೇತನ ಸಹಿತ ಹೆರಿಗೆ ರಜೆ ಪಡೆಯುತ್ತಿದ್ದರು. ಮುಖ್ಯಮಂತ್ರಿ ಅವರ ಹೊಸ ನೀತಿಯು ಈ ಮಿತಿಯನ್ನು ತೆಗೆದುಹಾಕುತ್ತದೆ.

ಆಗಸ್ಟ್ ನಿರ್ಧಾರದ ಬೆನ್ನಲ್ಲೇ ಕ್ರಮಗಳು: ಎರಡು ದಶಕಗಳಷ್ಟು ಹಳೆಯದಾದ ಎರಡು ಮಕ್ಕಳ ನೀತಿಯನ್ನು ರದ್ದುಗೊಳಿಸಲು ನಾಯ್ಡು ಸರ್ಕಾರ ಕಳೆದ ಆಗಸ್ಟ್‌ನಲ್ಲಿ ನಿರ್ಧಾರ ತೆಗೆದುಕೊಂಡಿತ್ತು. ಅದರ ಬೆನ್ನಲ್ಲೇ ಕೆಲ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ವ್ಯಕ್ತಿಗಳು ರಾಜ್ಯದ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಈ ಹಿಂದೆ ಅವಕಾಶ ಇರಲಿಲ್ಲ. ಅಂಥವರನ್ನು ಅನರ್ಹಗೊಳಿಸಲಾಗಿತ್ತು. ಆ ನಿರ್ಬಂಧವನ್ನು ತೆಗೆಯಲು ಆಂಧ್ರ ಸರ್ಕಾರವು 'ಎಪಿ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ– 1955', 'ಎಪಿ ಪುರಸಭೆಗಳ ಕಾಯ್ದೆ– 1965', ಮತ್ತು 'ಎಪಿ ಪಂಚಾಯತ್ ರಾಜ್ ಕಾಯ್ದೆ– 1994'ಕ್ಕೆ ತಿದ್ದುಪಡಿ ತಂದಿತ್ತು.

ಜನಸಂಖ್ಯಾ ಬಿಕ್ಕಟ್ಟಿನ ಕುರಿತು ನಾಯ್ಡು ಅವರು ಪದೇ ಪದೇ ಕಳವಳ ವ್ಯಕ್ತಪಡಿಸಿದ್ದಾರೆ. ಜನನ ಪ್ರಮಾಣ ಕಡಿಮೆ ಆಗುವುದು ಮತ್ತು ಹಿರಿಯ ನಾಗರಿಕರ ಸಂಖ್ಯೆ ಹೆಚ್ಚಾಗಿ ಎದುರಾಗುವ ಸವಾಲುಗಳ ಬಗ್ಗೆ ಅವರು ಹಲವು ಬಾರಿ ಪ್ರಸ್ತಾಪಿಸಿದ್ದಾರೆ.

ಕ್ಷೇತ್ರ ಪುನರ್ ವಿಂಗಡಣೆಯ ಆತಂಕ: ಕೆಲ ವರ್ಷಗಳಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಗಳು ಆರಂಭವಾಗುವ ಸಾಧ್ಯತೆಯದೆ. ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿರುವ ದಕ್ಷಿಣ ರಾಜ್ಯಗಳಲ್ಲಿ ಲೋಕಸಭಾ ಸ್ಥಾನಗಳು ಕಡಿಮೆಯಾಗುವ ಸಾಧ್ಯತೆಯಿದೆ ಎಂಬ ಆತಂಕ ಮತ್ತು ಅನುಮಾನಗಳು ವ್ಯಕ್ತವಾಗುತ್ತಿವೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ ಪ್ರಕಾರ, ಆಂಧ್ರ ಪ್ರದೇಶದ ಒಟ್ಟು ಫಲವತ್ತತೆ ದರ (ಟಿಎಫ್‌ಆರ್) 1.70ರಷ್ಟಿದೆ. ಇದು ರಾಷ್ಟ್ರೀಯ ಸರಾಸರಿ 1.91ಕ್ಕಿಂತ ಕಡಿಮೆ.

ಹೀಗಾಗಿ ಕೆಲ ಕ್ರಮಗಳನ್ನು ತೆಗೆದುಕೊಳ್ಳಲು ಆಂಧ್ರ ಸರ್ಕಾರ ಯೋಜನೆಗಳನ್ನು ರೂಪಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ದಕ್ಷಿಣದ ಇತರ ರಾಜ್ಯಗಳಲ್ಲೂ ಟಿಎಫ್‌ಆರ್ ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿದೆ. ತೆಲಂಗಾಣದಲ್ಲಿ 1.82, ಕರ್ನಾಟಕದಲ್ಲಿ 1.70, ಕೇರಳದಲ್ಲಿ 1.80 ಮತ್ತು ತಮಿಳುನಾಡಿನಲ್ಲಿ 1.80ರಷ್ಟಿದೆ.

3ನೇ ಮಗು ಹೆತ್ತರೆ ಪ್ರೋತ್ಸಾಹಧನ

ಮೂರನೇ ಮಕ್ಕಳನ್ನು ಹೊಂದುವ ಮಹಿಳೆಯರಿಗೆ ಪ್ರೋತ್ಸಾಹಧನ ನೀಡುವುದಾಗಿ ಆಂಧ್ರ ಪ್ರದೇಶದ ವಿಜಯನಗರಂನ ಸಂಸದ ಕಲಿಶೆಟ್ಟಿ ಅಪ್ಪಲನಾಯ್ಡು ಘೋಷಿಸಿದರು.

ವಿಜಯನಗರಂನಲ್ಲಿ ಶನಿವಾರ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅಪ್ಪಲನಾಯ್ಡು ಅವರು, 'ಮೂರನೇ ಮಗು ಹೊಂದುವ ಮಹಿಳೆಗೆ ನನ್ನ ವೇತನದಿಂದ ಆರ್ಥಿಕ ನೆರವು ನೀಡುತ್ತೇನೆ. ಮೂರನೇ ಮಗು ಹೆಣ್ಣಾದರೆ ₹ 50,000 ಹಾಗೂ ಗಂಡಾದರೆ ಒಂದು ಹಸು ನೀಡುತ್ತೇನೆ' ಎಂದು ಪ್ರಕಟಿಸಿದರು.


ಶಿವಲಿಂಗ

ಹಿಮಾಚಲ ಪ್ರದೇಶದ ಲಾಹೌಲ್–ಸ್ಪೀತಿ ಜಿಲ್ಲೆಯಲ್ಲಿ ಭಾನುವಾರ ನಡೆದ ಯೂರ್ ಹಬ್ಬದ ಆಚರಣೆ ಸಂದರ್ಭದಲ್ಲಿ 12 ಅಡಿ ಎತ್ತರದ ಹಿಮದ ಶಿವಲಿಂಗಕ್ಕೆ ಪೂಜೆ ಸಲ್ಲಿಸಿದರು –ಪಿಟಿಐ ಚಿತ್ರ

ಮಹಾರಾಷ್ಟ್ರ: ಭಾರತ ವಿರೋಧಿ ಘೋಷಣೆ ಪ್ರಕರಣ

ಬಾಲಕನಿಗೆ ಕ್ರಿಕೆಟ್ ವೀಕ್ಷಣೆಯಲ್ಲಿ ಆಸಕ್ತಿ ಇಲ್ಲ: ಕುಟುಂಬದ ಹೇಳಿಕೆ

ಮುಂಬೈ (ಪಿಟಿಐ): ಕ್ರಿಕೆಟ್ ಪಂದ್ಯವೊಂದರ ಸಂದರ್ಭದಲ್ಲಿ ಭಾರತ ವಿರೋಧಿ ಘೋಷಣೆ ಕೂಗಿದ ಎಂಬ ಆರೋಪದ ಅಡಿ 15 ವರ್ಷ ವಯಸ್ಸಿನ ಬಾಲಕ ಮತ್ತು ಆತನ ಕುಟುಂಬದ ಮೇಲೆ ಪ್ರಕರಣ ದಾಖಲಿಸಿದ ವಾರದ ನಂತರ, ಬಾಲಕನಿಗೆ ಪಂದ್ಯ ವೀಕ್ಷಣೆಯಲ್ಲಾಗಲಿ, ಆಟದಲ್ಲಾಗಲಿ ಯಾವುದೇ ಆಸಕ್ತಿಯೇ ಇರಲಿಲ್ಲ ಎಂದು ಕುಟುಂಬದ ಸದಸ್ಯರು ಹೇಳಿದ್ದಾರೆ.

ಈ ಬಾಲಕ ಶಿಕ್ಷಣಕ್ಕಾಗಿ ಮದರಸಕ್ಕೆ ಹೋಗುತ್ತಿದ್ದ ಎಂದು ಅವರು ಹೇಳಿದ್ದಾರೆ. ಮಹಾರಾಷ್ಟ್ರದ ಮಾಲ್ವಣ್ ಪಟ್ಟಣದ ಬಾಲಕ, ಆತನ ತಂದೆ ಮತ್ತು ತಾಯಿಯ ವಿರುದ್ಧ ಫೆಬ್ರುವರಿ 23ರಂದು ದೂರು ದಾಖಲಾಗಿದೆ. ಭಾರತ–ಪಾಕಿಸ್ತಾನ ಕ್ರಿಕೆಟ್ ಪಂದ್ಯದ ಸಂದರ್ಭದಲ್ಲಿ ಬಾಲಕನು ಭಾರತ ವಿರೋಧಿ ಘೋಷಣೆ ಕೂಗಿದ್ದಾನೆ ಎಂದು ಆರೋಪಿಸಲಾಗಿದೆ.

ಬಾಲಕನ ತಂದೆ ಮತ್ತು ತಾಯಿಯನ್ನು ಬಂಧಿಸಲಾಗಿತ್ತು. ಬಾಲಕನನ್ನು ಬಾಲ ನ್ಯಾಯ ಮಂಡಳಿ ಮುಂದೆ ಹಾಜರುಪಡಿಸಲಾಗಿದೆ. ಇದಾದ ನಂತರದಲ್ಲಿ ಆತನ ಕುಟುಂಬಕ್ಕೆ ಸೇರಿದ ಅಂಗಡಿ ಮತ್ತು ಮನೆಯು ಅಕ್ರಮವಾಗಿ ನಿರ್ಮಿಸಿದ್ದು ಎಂಬ ಕಾರಣ ನೀಡಿ ಅವುಗಳನ್ನು ಅಧಿಕಾರಿಗಳು ಧ್ವಂಸಗೊಳಿಸಿದ್ದಾರೆ. ತಂದೆ–ತಾಯಿಗೆ ಈಗ ಜಾಮೀನು ದೊರೆತಿದೆ.

ಬಾಲಕನ ತಂದೆ ಗುಜರಿ ವ್ಯಾಪಾರಿ. ಅವರ ಸಹೋದರನಿಗೆ ಸೇರಿದ ಗೋದಾಮನ್ನು ಕೂಡ ಧ್ವಂಸಗೊಳಿಸಲಾಗಿದೆ. ನಿರ್ದಿಷ್ಟ ಪದಗಳನ್ನು ಬಳಸಿ, ಮಗನ ಜೊತೆ ಮಾತಿಗೆ ಇಳಿದು ಅವನನ್ನು ಸಿಲುಕಿಸಲು ಕೆಲವರು ಪಿತೂರಿ ನಡೆಸಿದ್ದಾರೆ ಎಂದು ಕುಟುಂಬ ದೂರಿದೆ.

ಪ್ರಕರಣದ ಕುರಿತಾಗಿ ತನಿಖೆ ನಡೆದಿದೆ. ಆದರೆ ಭಾರತ ವಿರೋಧಿ ಘೋಷಣೆ ಕೂಗಲಾಗಿದೆ ಎಂದು ಹೇಳುವ ಯಾವುದೇ ಆಡಿಯೊ ಅಥವಾ ವಿಡಿಯೊ ತುಣುಕು ತಮ್ಮ ಬಳಿ ಇಲ್ಲ ಎಂದು ಸಿಂಧುದುರ್ಗದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮಗನಿಗೆ ಕ್ರಿಕೆಟ್‌ನಲ್ಲಿ ಆಸಕ್ತಿ ಇಲ್ಲ, ಆತ ಪಂದ್ಯಗಳನ್ನು ವೀಕ್ಷಿಸುವುದೂ ಇಲ್ಲ ಎಂದು ತಂದೆ ಹೇಳಿದ್ದಾರೆ. ತಮಗೆ ತೊಂದರೆ ಕೊಡುವ ಉದ್ದೇಶದಿಂದ ಎಲ್ಲವೂ ಪೂರ್ವ ಯೋಜಿತವಾಗಿ ನಡೆದಿದೆ ಎಂದು ಅವರು ದೂರಿದ್ದಾರೆ.

ಬಾಲಕ ಹೇಳಿದ್ದು ಹೀಗಿದೆ...

'ಮಸೀದಿಯಲ್ಲಿ ರಾತ್ರಿಯ ಪ್ರಾರ್ಥನೆ ಮುಗಿಸಿ ಮನೆಗೆ ಬರುತ್ತಿದ್ದಾಗ ವ್ಯಕ್ತಿಯೊಬ್ಬ ನನ್ನನ್ನು ನಿಲ್ಲಿಸಿದ. ಆತ ನನ್ನ ಹೆಸರು ಕೇಳಿದ. ಆರಂಭದಲ್ಲಿ ನನಗೆ ಭಯವಾಗಿತ್ತು, ಆತನಿಗೆ ಸುಳ್ಳು ಹೆಸರು ಹೇಳಿದೆ. ಆದರೆ ಆತ ನನ್ನನ್ನು ತಡೆದು ಪಂದ್ಯ ವೀಕ್ಷಿಸಿದ್ದೀಯಾ ಎಂದು ಕೇಳಿದ. ಕ್ರಿಕೆಟ್ ವೀಕ್ಷಿಸುವುದಿಲ್ಲ ಎಂದೆ' ಎಂದು ಬಾಲಕನು ಸುದ್ದಿಸಂಸ್ಥೆಗೆ ವಿವರಿಸಿದ್ದಾನೆ.

'ಭಾರತ–ಪಾಕಿಸ್ತಾನ ನಡುವಿನ ಪಂದ್ಯದಲ್ಲಿ ಯಾರ ಪರ ವಹಿಸುತ್ತೀಯಾ' ಎಂದು ಆ ವ್ಯಕ್ತಿ ಪ್ರಶ್ನಿಸಿದ್ದಾನೆ. ಇದಕ್ಕೆ ಆ ಬಾಲಕ ಭಾರತದ ಹೆಸರು ಹೇಳಿದ್ದಾನೆ. 'ಆ ವ್ಯಕ್ತಿ ಇನ್ನೊಬ್ಬನನ್ನು ಕರೆದು ನಾನು ಭಾರತ ವಿರೋಧಿ ಘೋಷಣೆ ಕೂಗಿದ್ದಾಗಿ ಹೇಳಿದ. ಅವರು ನನಗೆ ಎರಡು ಬಾರಿ ಹೊಡೆದರು' ಎಂದು ಬಾಲಕ ಹೇಳಿದ್ದಾನೆ.

ನಂತರ ಅವರು ಬಾಲಕನನ್ನು ಆತನ ಮನೆಗೆ ಕರೆದೊಯ್ದರು. ಆಗ ಆತನ ತಂದೆ ಮನೆಯಲ್ಲಿ ಇರಲಿಲ್ಲ, ಜನರು ಆತನ ಮನೆಯ ಮುಂದೆ ಜಮಾಯಿಸಿದರು. ಆರಂಭದಲ್ಲಿ ತನ್ನ ಜೊತೆ ವಾದಕ್ಕೆ ಇಳಿದಿದ್ದ ವ್ಯಕ್ತಿ ಆಗ ನಗುತ್ತಿದ್ದ ಎಂದು ಬಾಲಕ ಹೇಳಿದ್ದಾನೆ.

ಕುಕಿ ಪ್ರತಿಭಟನೆ, ಜನಜೀವನ ಅಸ್ತವ್ಯಸ್ತ

ಮುಕ್ತ ಸಂಚಾರ ಕುರಿತ ಅಮಿತ್ ಶಾ ಆದೇಶಕ್ಕೆ ಆಕ್ರೋಶ • ಮಣಿಪುರ ಉದ್ವಿಗ್ನ

ಇಂಫಾಲ್ (ಪಿಟಿಐ): ಭದ್ರತಾ ಸಿಬ್ಬಂದಿ ಹೇರಿರುವ ನಿರ್ಬಂಧವನ್ನು ವಿರೋಧಿಸಿ ಕುಕಿ–ಜೊ ಬುಡಕಟ್ಟು ಸಮುದಾಯ ನೀಡಿದ್ದ 'ಅನಿರ್ದಿಷ್ಟಾವಧಿ ಬಂದ್' ಕರೆಯಿಂದಾಗಿ ಮಣಿಪುರದಲ್ಲಿ ಕುಕಿ ಸಮುದಾಯದ ಪ್ರಾಬಲ್ಯವುಳ್ಳ ಪ್ರದೇಶಗಳಲ್ಲಿ ಜನಜೀವನ ಭಾನುವಾರ ಅಸ್ತವ್ಯಸ್ತಗೊಂಡಿತು.

ಶನಿವಾರ, ಕುಕಿ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ನಡುವಿನ ಘರ್ಷಣೆಯಲ್ಲಿ ಒಬ್ಬರು ಮೃತಪಟ್ಟಿದ್ದರಿಂದ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಪರಿಸ್ಥಿತಿ ಬಿಗುವಿನಿಂದ ಕೂಡಿತ್ತು.

ಚುರಾಚಾಂದ್‌ಪುರ ಮತ್ತು ಟೆಂಗ್‌ನೌಪಾಲ್ ಜಿಲ್ಲೆಯಲ್ಲಿ ಪ್ರತಿಭಟನಕಾರರು ರಸ್ತೆಗೆ ಅಡ್ಡಲಾಗಿ ಕಲ್ಲುಗಳನ್ನು ಇಟ್ಟು, ಟೈರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಭದ್ರತಾ ಸಿಬ್ಬಂದಿ ಕಲ್ಲುಗಳನ್ನು ತೆರವುಗೊಳಿಸಿದರು. ಯಾವುದೇ ಅಹಿತಕರ ಘಟನೆ ಭಾನುವಾರ ವರದಿಯಾಗಿಲ್ಲ.

ಆದರೆ, ಕುಕಿ ಪ್ರಾಬಲ್ಯವುಳ್ಳ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ಪೂರ್ಣ ಸ್ತಬ್ಧವಾಗಿತ್ತು. ರಸ್ತೆಗಳಲ್ಲಿ ಬೆರಳೆಣಿಕೆಯಷ್ಟು ವಾಹನಗಳಿದ್ದವು. ಜನರು ರಸ್ತೆಗೆ ಬಾರದಂತೆ ಪ್ರತಿಭಟನಕಾರರು ಮನವಿ ಮಾಡುತ್ತಿದ್ದುದು ಕಂಡುಬಂದಿತು.


ಮಣಿಪುರದಲ್ಲಿ ಕುಕಿ ಪ್ರಾಬಲ್ಯವುಳ್ಳ ಪ್ರದೇಶಗಳಲ್ಲಿ ಭಾನುವಾರ ಪ್ರತಿಭಟನೆ ನಡೆದಿದ್ದು, ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿತ್ತು –ಪಿಟಿಐ ಚಿತ್ರ

ಗಮ್‌ಘಿಫೈ ಮತ್ತು ಇತರೆ ಪ್ರದೇಶಗಳು ಹಾಗೂ ಇಂಫಾಲ್–ದಿಮಾಪುರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿತ್ತು. ಕಾನೂನು ಸುವ್ಯವಸ್ಥೆ ಕಾಪಾಡುವ ಕ್ರಮವಾಗಿ ಹೆದ್ದಾರಿ ಗಸ್ತು ಚುರುಕುಗೊಳಿಸಲಾಗಿತ್ತು.

ರಾಜ್ಯವ್ಯಾಪ್ತಿ ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸುವ ಕೇಂದ್ರ ಗೃಹ ಸಚಿವರ ಆದೇಶ ವಿರೋಧಿಸಿ ಶನಿವಾರ ಪ್ರತಿಭಟನೆ ನಡೆದಿದ್ದು, ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಘರ್ಷಣೆ ನಡೆದು ಒಬ್ಬರು ಮೃತಪಟ್ಟಿದ್ದರು.

ಭದ್ರತಾ ಸಿಬ್ಬಂದಿಯ ಕ್ರಮವನ್ನು ಖಂಡಿಸಿ ಕುಕಿ–ಜೊ ಮಂಡಳಿ ಅನಿರ್ದಿಷ್ಟಾವಧಿ ವಾಣಿಜ್ಯ ಚಟುವಟಿಕೆ ಬಂದ್‌ಗೆ ಕರೆ ನೀಡಿದ್ದು, ದೇಶಿ ಬುಡಕಟ್ಟು ನಾಯಕರ ವೇದಿಕೆ (ಐಟಿಎಲ್‌ಎಫ್) ಬೆಂಬಲಿಸಿದೆ. ಐಟಿಎಲ್‌ಎಫ್ ಮುಖಂಡರು, 'ಮೈತೇಯಿ ಜನರಿಗೆ ಕುಕಿ–ಜೊ ಜನರಿರುವ ಪ್ರದೇಶಗಳಲ್ಲಿ ಸಂಚರಿಸಲು ಅವಕಾಶ ನೀಡಿದ್ದು ಪ್ರತಿಭಟನೆಗೆ ಕಾರಣವಾಗಿದೆ. ಪ್ರತಿಭಟನೆ ಹತ್ತಿಕ್ಕಲು ಹೆಚ್ಚುವರಿ ಭದ್ರತಾ ಸಿಬ್ಬಂದಿ ಬಳಸಲಾಗಿದೆ' ಎಂದು ಆರೋಪಿಸಿದ್ದಾರೆ.

ಮಣಿಪುರದಾದ್ಯಂತ ಮುಕ್ತ ಸಂಚಾರಕ್ಕೆ ಮಾರ್ಚ್ 8ರಿಂದ ಅವಕಾಶ ಕಲ್ಪಿಸಬೇಕು. ಪ್ರತಿಭಟನೆ ನಡೆಸಿದವರ ವಿರುದ್ಧ ಕ್ರಮಜರುಗಿಸಿ ಎಂದು ಕೇಂದ್ರ ಗೃಹ ಸಚಿವರು ತಾಕೀತು ಮಾಡಿದ್ದರು.

ಮಣಿಪುರದಲ್ಲಿ ಮೇ 2023ರಿಂದ ಕುಕಿ ಮತ್ತು ಮೈತೇಯಿ ಸಮುದಾಯದವರ ನಡುವೆ ಜನಾಂಗೀಯ ಘರ್ಷಣೆ ನಡೆದಿದ್ದು, ಈವರೆಗೆ ಸುಮಾರು 250 ಜನರು ಮೃತಪಟ್ಟಿದ್ದಾರೆ. ಹಲವಾರು ಕುಟುಂಬಗಳು ಅತಂತ್ರವಾಗಿವೆ. ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರ ರಾಜೀನಾಮೆ ಬಳಿಕ ಫೆ. 13ರಿಂದ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದೆ.

ಸುರಂಗ ಕುಸಿತ: ಒಂದು ಶವ ಪತ್ತೆ

ನಾಗರಕರ್ನೂಲ್ (ತೆಲಂಗಾಣ) (ಪಿಟಿಐ): ಭಾಗಶಃ ಕುಸಿದಿರುವ ಶ್ರೀಶೈಲಂ ಎಡದಂಡೆ ಕಾಲುವೆಯ (ಎಸ್‌ಎಲ್‌ಬಿಸಿ) ಸುರಂಗದಡಿ ಸಿಲುಕಿರುವ ಎಂಟು ಮಂದಿಯಲ್ಲಿ ಒಬ್ಬರ ಶವ ಭಾನುವಾರ ಪತ್ತೆಯಾಗಿದೆ.

ಘಟನೆ ನಡೆದು 15 ದಿನಗಳ ಬಳಿಕ ಒಬ್ಬರ ಶವ ಪತ್ತೆಯಾಗಿದ್ದು, ಕಾರ್ಯಾಚರಣೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದ್ದಾರೆ.

ಕಾರ್ಮಿಕರ ಪತ್ತೆಗಾಗಿ ವಿಶೇಷ ತಳಿಯ ಶ್ವಾನದಳವನ್ನು ಭಾನುವಾರ ಬಳಸಲಾಯಿತು. ಕೇವಲ ವಾಸನೆಯ ಆಧಾರದಲ್ಲಿ ವ್ಯಕ್ತಿಯ ಇರುವಿಕೆ ಅಥವಾ ಶವಗಳನ್ನು ಗುರುತಿಸುವಂತೆ ಈ ತಳಿಯ ಶ್ವಾನಗಳಿಗೆ ತರಬೇತಿ ನೀಡಲಾಗಿದೆ. ಈ ಶ್ವಾನಗಳನ್ನು ಸುರಂಗದೊಳಗೆ ಭಾನುವಾರ ಕರೆದೊಯ್ಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕೇರಳ ಪೊಲೀಸ್ ಇಲಾಖೆಯಲ್ಲಿನ ಬೆಲ್ಜಿಯನ್ ಮಲಿನೋಸ್ ಜಾತಿಯ ಈ ಶ್ವಾನಗಳು ಸುಮಾರು 15 ಅಡಿ ಆಳದಲ್ಲಿನ ವಾಸನೆಯನ್ನು ಗ್ರಹಿಸುವ ಸಾಮರ್ಥ್ಯವನ್ನು ಹೊಂದಿವೆ. ಅವುಗಳು ಗುರುತಿಸುವ ಸ್ಥಳಗಳಲ್ಲಿ ಗುಂಡಿ ತೋಡಲಾಗುತ್ತದೆ.

ಸಂಕ್ಷಿಪ್ತ ಸುದ್ದಿ

ಉಪರಾಷ್ಟ್ರಪತಿ ಧನಕರ್ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರಿಗೆ ಎದೆನೋವು ಮತ್ತು ಅಸ್ವಸ್ಥತೆ ಉಂಟಾದ ಕಾರಣ ಭಾನುವಾರ ಮುಂಜಾನೆ ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.


ಜಗದೀಪ್ ಧನಕರ್

ಧನಕರ್ (73) ಅವರಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಮತ್ತು ಅವರ ಆರೋಗ್ಯ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರು ಏಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಧನಕರ್ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದರು.

ನೀರಿನ ತೊಟ್ಟಿ ಸ್ವಚ್ಛಗೊಳಿಸುತ್ತಿದ್ದ ನಾಲ್ವರು ಸಾವು

ಮುಂಬೈ (ಪಿಟಿಐ): ಉತ್ತರ ಮುಂಬೈನಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡವೊಂದರ ನೀರಿನ ತೊಟ್ಟಿಯನ್ನು ಭಾನುವಾರ ಸ್ವಚ್ಛಗೊಳಿಸುತ್ತಿದ್ದ ನಾಲ್ವರುಕಾರ್ಮಿಕರು ಉಸಿರುಗಟ್ಟಿ ಮೃತಪಟ್ಟಿದ್ದಾರೆ.

ದಿಮ್ಮಿಮ್‌ಕರ್ ರಸ್ತೆಯಲ್ಲಿನ ಬಿಸ್ಮಿಲ್ಲಾ ಸ್ಪೇಸ್ ಕಟ್ಟಡದಲ್ಲಿ ಮಧ್ಯಾಹ್ನ 12:30 ಗಂಟೆಗೆ ಅವಘಡ ಸಂಭವಿಸಿದೆ.

ಸ್ಥಳದಲ್ಲಿದ್ದ ಇತರ ಕಾರ್ಮಿಕರು ಅವಘಡದ ಬಗ್ಗೆ ಅಗ್ನಿಶಾಮಕ ಇಲಾಖೆಗೆ ಮಾಹಿತಿ ನೀಡಿದ್ದರು. ಐವರನ್ನು ತೊಟ್ಟಿಯಿಂದ ಮೇಲೆತ್ತಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ನಾಲ್ವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ.

ಲಖನೌ: ಗುಂಡಿಕ್ಕಿ ಪತ್ರಕರ್ತನ ಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಸೀತಾಪುರ ಜಿಲ್ಲೆಯ ಲಖನೌ–ದೆಹಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಪತ್ರಕರ್ತರೊಬ್ಬರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಮೃತ ವ್ಯಕ್ತಿಯನ್ನು ರಾಘವೇಂದ್ರ ಬಾಜಪೈ ಎಂದು ಗುರುತಿಸಲಾಗಿದೆ. ಶನಿವಾರ ಸಂಜೆ ಬಾಜಪೈ ಅವರು ಬೈಕ್‌ ನಲ್ಲಿ ಮನೆಗೆ ಮರಳುತ್ತಿದ್ದ ಸಂದರ್ಭದಲ್ಲಿ, ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಗುಂಡು ಹಾರಿಸಿ ಕೊಲೆಗೈದಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿನ್ನ ಕಳ್ಳಸಾಗಣೆ: ಸಚಿವರಿಬ್ಬರ 'ಕೈ'

ಒಂದನೇ ಪುಟದಿಂದ...

'ಬೆಂಗಳೂರು, ಮುಂಬೈ ಮತ್ತು ದೆಹಲಿ ವಿಮಾನ ನಿಲ್ದಾಣಗಳ ಮೂಲಕ ಒಂದೇ ತಂಡವು ನಿರಂತರವಾಗಿ ಚಿನ್ನ ಕಳ್ಳಸಾಗಣೆ ಮಾಡಿರುವ ಮಾಹಿತಿ ಡಿಆರ್‌ಐ ತನಿಖೆ ವೇಳೆ ಲಭಿಸಿದೆ. ಇತ್ತೀಚೆಗೆ ಈ ಮೂರೂ ವಿಮಾನ ನಿಲ್ದಾಣಗಳಲ್ಲಿ ಚಿನ್ನ ವಶಕ್ಕೆ ಪಡೆದಿರುವ ಪ್ರಕರಣಗಳಲ್ಲೂ ಹಲವು ಸಾಮ್ಯತೆಗಳಿವೆ. ಪ್ರಕರಣದಲ್ಲಿ ರನ್ಯಾ ರಾವ್ ಅವರೊಂದಿಗೆ ಕಸ್ಟಮ್ಸ್, ಡಿಆರ್‌ಐ ಮತ್ತು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳೂ ಶಾಮೀಲಾಗಿರುವ ಅನುಮಾನವಿದೆ. ಈ ಕಾರಣದಿಂದ 'ರನ್ಯಾ ರಾವ್ ಮತ್ತು ಶಂಕಿತ ಇತರರ ವಿರುದ್ಧ' ಎಫ್‌ಐಆರ್ ದಾಖಲಿಸಿ, ಸಿಬಿಐ ತನಿಖೆ ಆರಂಭಿಸಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ವಿದೇಶಗಳಿಂದ ಕಳ್ಳಸಾಗಣೆ ಮಾಡಿಕೊಂಡು ತಂದ ಚಿನ್ನವನ್ನು ಬೆಂಗಳೂರಿನ ಆಭರಣ ತಯಾರಕರಿಗೆ ಮಾರಾಟ ಮಾಡಲಾಗುತ್ತಿತ್ತು ಎಂಬ ಮಾಹಿತಿ ಡಿಆರ್‌ಐ ತನಿಖೆಯಲ್ಲಿ ಲಭಿಸಿದೆ. ದುಬೈನಲ್ಲಿ ಚಿನ್ನ ಪೂರೈಕೆಗೆ ವ್ಯವಸ್ಥೆ ಮಾಡುತ್ತಿದ್ದವರು ಯಾರು? ಅಲ್ಲಿ ಹಣ ಪಾವತಿ ಯಾವ ವಿಧಾನದಲ್ಲಿ ನಡೆಯುತ್ತಿತ್ತು? ಬೆಂಗಳೂರಿನಲ್ಲಿ ಚಿನ್ನದ ವಿಲೇವಾರಿ ಹೇಗೆ ನಡೆಯುತ್ತಿತ್ತು? ಚಿನ್ನ ಮಾರಾಟದಲ್ಲಿ ಯಾರೆಲ್ಲ ಭಾಗಿಯಾಗಿದ್ದರು? ಎಂಬ ಅಂಶಗಳನ್ನು ಮುಂದಿಟ್ಟುಕೊಂಡು ತನಿಖೆ ಮುಂದುವರಿದಿದೆ. ಇದೇ ಆಯಾಮಗಳಲ್ಲಿ ಸಿಬಿಐ ಕೂಡ ತನಿಖೆಗಿಳಿದಿದೆ ಎಂದು ಮೂಲಗಳು ಹೇಳಿವೆ.



'ಪ್ರಭಾವ'ವೇ ಪ್ರಧಾನ ಅಸ್ತ್ರ: ರನ್ಯಾ ರಾವ್ ಚಿನ್ನ ಕಳ್ಳಸಾಗಣೆಗೆ ವಿದೇಶಗಳಿಗೆ ಹೋಗಿ, ಬರುವಾಗ ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ನಡೆಸುತ್ತಿರಲಿಲ್ಲ ಎಂಬುದು ಡಿಆರ್‌ಐ ಕಾರ್ಯಾಚರಣೆ ಬಳಿಕ ದೃಢಪಟ್ಟಿದೆ. ಪೊಲೀಸರ ಬೆಂಗಾವಲಿನಲ್ಲೇ ಆರೋಪಿಯು ನಿರಾಯಾಸವಾಗಿ ಚಿನ್ನದೊಂದಿಗೆ ವಿಮಾನ ನಿಲ್ದಾಣದಿಂದ ಹೊರ ಬರುತ್ತಿದ್ದರು. ರನ್ಯಾ ರಾವ್ ಅವರು ಹತ್ತಾರು ಕೆ.ಜಿ. ತೂಕದ ಚಿನ್ನದ ಬಿಸ್ಕತ್‌ಗಳನ್ನು ಹೊತ್ತು ವಿಮಾನ ಏರಲು ದುಬೈ ವಿಮಾನ ನಿಲ್ದಾಣದಲ್ಲೂ 'ಸಹಕಾರ' ದೊರೆಯುತ್ತಿತ್ತು ಎಂಬುದೂ ತನಿಖೆಯಲ್ಲಿ ಪತ್ತೆಯಾಗಿದೆ.

'ದೇಶದೊಳಗಿನ ವಿಮಾನ ನಿಲ್ದಾಣಗಳಲ್ಲಿ ಪೊಲೀಸರ ಮೇಲೆ ಪ್ರಭಾವ ಬೀರಿ ಹೊರ ಬಂದಿರಬಹುದು. ಆದರೆ, ದುಬೈ ವಿಮಾನ ನಿಲ್ದಾಣದಲ್ಲಿ ಒಂದು ಚಿಕ್ಕ ಪೆನ್ ಕೂಡ ಅಕ್ರಮವಾಗಿ ತರುವುದು ಸುಲಭವಲ್ಲ. ಅಲ್ಲಿಂದ ಹತ್ತಾರು ಕೆ.ಜಿ. ಚಿನ್ನವನ್ನು ಅನಾಯಾಸವಾಗಿ ತರಬೇಕೆಂದರೆ ಅಲ್ಲಿಯೂ 'ಪ್ರಭಾವ' ಹೊಂದಿರುವವರ ಪಾತ್ರವೂ ಇರುವ ಸಾಧ್ಯತೆ ಇದೆ. ಈ ಅನುಮಾನಗಳೂ ತನಿಖೆಯ ವ್ಯಾಪ್ತಿಯಲ್ಲಿವೆ' ಎಂದು ಮೂಲಗಳು ತಿಳಿಸಿವೆ.

ರನ್ಯಾ ರಾವ್ ವಿದೇಶ ಪ್ರವಾಸದ ವಿವರವನ್ನು ಡಿಆರ್‌ಐ ಮತ್ತು ಸಿಬಿಐ ಕಲೆಹಾಕಿವೆ. ಆರೋಪಿಯು ವಿದೇಶಗಳಿಗೆ ಹೋಗಿ ವಾಪಸ್ ಬಂದ ದಿನಗಳಲ್ಲಿ ಸಂಬಂಧಿಸಿದ ವಿಮಾನ ನಿಲ್ದಾಣಗಳಲ್ಲಿ ಕರ್ತವ್ಯದಲ್ಲಿದ್ದ ಕಸ್ಟಮ್ಸ್, ಡಿಆರ್‌ಐ ಸೇರಿದಂತೆ ತಪಾಸಣಾ ಅಧಿಕಾರಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಆರೋಪಿಯ ಮೊಬೈಲ್ ಕರೆಗಳ ಆಧಾರದಲ್ಲಿ ಅವರ ಜೊತೆ ನಂಟು ಹೊಂದಿರುವವರನ್ನೂ ಪತ್ತೆ ಮಾಡಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಕೆಐಎಡಿಬಿ ಜಮೀನು ಹಂಚಿಕೆ

ರನ್ಯಾ ರಾವ್ ಅವರು ನಿರ್ದೇಶಕಿ ಆಗಿರುವ ಕ್ಸಿರೋಡಾ ಇಂಡಿಯಾ ಪ್ರೈವೇಟ್ ಲಿ. ಕಂಪನಿಗೆ ತುಮಕೂರು ಜಿಲ್ಲೆಯ ಶಿರಾದಲ್ಲಿ ಕೆಐಎಡಿಬಿ ವತಿಯಿಂದ 2023ರ ಜನವರಿಯಲ್ಲಿ 12 ಎಕರೆ ಜಮೀನು ಮಂಜೂರು ಮಾಡಲಾಗಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇತ್ತು. ಈ ಕಂಪನಿಗೆ ನಟಿಯ ಸಹೋದರ ಸಹ ನಿರ್ದೇಶಕರಾಗಿದ್ದಾರೆ. ಕೆಐಎಡಿಬಿಯಿಂದ ಜಮೀನು ಮಂಜೂರಾತಿ ಮಾಡಿಸಿಕೊಂಡಿರುವ ದಾಖಲೆಗಳು ಜಾಲತಾಣದಲ್ಲಿ ಹರಿದಾಡುತ್ತಿವೆ.

ಶ್ವೇತ ಭವನ: ಶಸ್ತ್ರಧಾರಿಗೆ ಗುಂಡೇಟು

ವಾಷಿಂಗ್ಟನ್ (ರಾಯಿಟರ್ಸ್): ಶ್ವೇತ ಭವನದ ಹೊರಗಡೆ ಶಸ್ತ್ರಧಾರಿ ವ್ಯಕ್ತಿಯೊಬ್ಬನ ಮೇಲೆ ಅಮೆರಿಕದ ಕಾನೂನು ಜಾರಿ ಏಜೆನ್ಸಿ 'ಸೀಕ್ರೆಟ್ ಸರ್ವಿಸ್'ನ ಸಿಬ್ಬಂದಿ ಗುಂಡು ಹಾರಿಸಿದ್ದಾರೆ. ಆ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.



ವ್ಯಕ್ತಿಯ ಮೇಲೆ ಗುಂಡು ಹಾರಿಸಿದ ಹೊತ್ತಿನಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶ್ವೇತ ಭವನದಲ್ಲಿ ಇರಲಿಲ್ಲ. ಅವರು ಫ್ಲೋರಿಡಾದ ತಮ್ಮ ಮನೆಗೆ ತೆರಳಿದ್ದರು.

ತೀರಾ ಖಿನ್ನತೆಗೆ ಒಳಗಾಗಿರುವ ವ್ಯಕ್ತಿಯೊಬ್ಬ ಇಂಡಿಯಾನಾದಿಂದ ವಾಷಿಂಗ್ಟನ್‌ಗೆ ತೆರಳುತ್ತಿರಬಹುದು ಎಂದು ಸೀಕ್ರೆಟ್ ಸರ್ವಿಸ್‌ನ ಸಿಬ್ಬಂದಿಗೆ ಸ್ಥಳೀಯ ಅಧಿಕಾರಿಗಳಿಂದ ಶನಿವಾರ ಸುಳಿವೊಂದು ಸಿಕ್ಕಿತ್ತು.

ಸೀಕ್ರೆಟ್ ಸರ್ವಿಸ್‌ನ ಸಿಬ್ಬಂದಿ ಆತನ ಸನಿಹಕ್ಕೆ ತೆರಳಿದಾಗ ಆತ ಅಧಿಕಾರಿಗಳ ಶಸ್ತ್ರಾಸ್ತ್ರ ತೋರಿಸಿದ. ಆಗ ಆತನ ಮೇಲೆ ಗುಂಡು ಹಾರಿಸಲಾಯಿತು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮೂವರ ಹತ್ಯೆ: ತನಿಖೆಗೆ ತಂಡ ರಚನೆ

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಕಠುವಾ ಜಿಲ್ಲೆಯ ಬಿಲ್ಲಾವರ್ ಪ್ರದೇಶದಲ್ಲಿ ಮೂವರು ನಾಗರಿಕರ ಹತ್ಯೆಯಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ತಂಡ ರಚಿಸಲಾಗಿದೆ ಎಂದು ಜಮ್ಮು ಹಾಗೂ ಕಥುವಾ ಸಂಭಾ ವಲಯದ ಡಿಐಜಿ ಶಿವಕುಮಾರ್ ತಿಳಿಸಿದ್ದಾರೆ.

ವರುಣ್ ಸಿಂಗ್ (15), ಯೋಗೇಶ್ ಸಿಂಗ್ (32) ಮತ್ತು ದರ್ಶನ್ ಸಿಂಗ್ (40) ಎಂಬವರ ಮೃತದೇಹಗಳು ಇಶುನಲ್ಲಾದಲ್ಲಿ ಶನಿವಾರ ಪತ್ತೆಯಾಗಿತ್ತು. ಘಟನೆಯ ಬಳಿಕ ಈ ಪ್ರದೇಶದಲ್ಲಿ ತೀವ್ರ ಪ್ರತಿಭಟನೆ ನಡೆಯುತ್ತಿದೆ.

'ಈ ಘಟನೆಯು ಆತಂಕಕಾರಿಯಾಗಿದ್ದು, ಕೃತ್ಯದ ಹಿಂದೆ ಭಯೋತ್ಪಾದಕರ ಕೈವಾಡವಿದೆ' ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಭಾನುವಾರ ಹೇಳಿದ್ದಾರೆ.

ಮೃತರ ಕುಟುಂಬಸ್ಥರನ್ನು ಭೇಟಿ ಮಾಡಲು ಶನಿವಾರ ತೆರಳಿದ್ದ ಬಾನಿ ಶಾಸಕ ರಾಮೇಶ್ವರ ಸಿಂಗ್ ಅವರ ಮೇಲೆ ಪ್ರತಿಭಟನಾಕಾರರು ಹಲ್ಲೆ ನಡೆಸಿದರು.

'ಪುಣ್ಯಕ್ಷೇತ್ರದ ಬಳಿ ಸೋಪು, ಶ್ಯಾಂಪೂ ಮಾರಾಟ ನಿಷೇಧಿಸಿ'

ಒಂದನೇ ಪುಟದಿಂದ...

ಅಲ್ಲದೇ 'ಅಗ್ಗದ ಬೆಲೆಯಲ್ಲಿ ಶ್ಯಾಂಪೂ ಮತ್ತು ಸೋಪಿನ ಪ್ಯಾಕೆಟ್ ಸಿಗುವುದರಿಂದ, ಉಳಿದ ಸೋಪು–ಶ್ಯಾಂಪೂವನ್ನು ಜನರು ಅಲ್ಲೇ ಎಸೆದು ಹೋಗುತ್ತಾರೆ. ಹೀಗಾಗಿ ಇವು ಸುಲಭವಾಗಿ ಸಿಗದಂತೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ಪುಣ್ಯಕ್ಷೇತ್ರಗಳ ಜಲಮೂಲಗಳಿಂದ 500 ಮೀಟರ್ ವ್ಯಾಪ್ತಿಯಲ್ಲಿ ಇವುಗಳ ಮಾರಾಟವನ್ನು ನಿಷೇಧಿಸಬೇಕು' ಎಂದು ಸೂಚಿಸಿದ್ದಾರೆ.

'ಹಲವು ಭಕ್ತರು ಮೂಢನಂಬಿಕೆಗಳ ಕಾರಣದಿಂದ, ಸ್ನಾನದ ನಂತರ ಒದ್ದೆ ಬಟ್ಟೆಗಳನ್ನು ನೀರಿನಲ್ಲೇ ಹರಿಬಿಟ್ಟು ಹೋಗುತ್ತಿದ್ದಾರೆ. ಕೆಲವು ತೀರ್ಥಕ್ಷೇತ್ರಗಳಲ್ಲಂತೂ ರಾಶಿರಾಶಿ ವಸ್ತ್ರಗಳು ಬಿದ್ದಿವೆ. ಇದರಿಂದಲೂ ಸ್ವಚ್ಛತೆ ಹಾಳಾಗುತ್ತಿದೆ ಮತ್ತು ಪುಣ್ಯಕ್ಷೇತ್ರಗಳ ಜಲಮೂಲಗಳು ಕಲುಷಿತವಾಗುತ್ತಿವೆ. ಈ ಕ್ರಿಯೆಯನ್ನೂ ನಿರ್ಬಂಧಿಸುವ ಕೆಲಸ ಮಾಡಿ' ಎಂದು ಸಚಿವರು ಸೂಚಿಸಿದ್ದಾರೆ.

'ಸಂಬಂಧಿತ ಇತರ ಇಲಾಖೆಗಳ ನೆರವು ಮತ್ತು ಸಹಕಾರ ಪಡೆದು ಈ ಸೂಚನೆಗಳನ್ನು ಜಾರಿಗೆ ತರಬೇಕು. ಆಗ ಮಾತ್ರ ರಾಜ್ಯದ ನದಿ–ಕೊಳ, ಸರೋವರಗಳನ್ನು ಸ್ವಚ್ಛವಾಗಿ ಇರಿಸಿಕೊಳ್ಳಲು ಸಾಧ್ಯ' ಎಂದಿದ್ದಾರೆ.

ರೆಸಾರ್ಟ್ ಮಾಲೀಕರಿಗೆ ಕಟ್ಟೆಚ್ಚರ

ಒಂದನೇ ಪುಟದಿಂದ...

ಕೊಪ್ಪಳದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ 'ಸಾಣಾಪುರ ಘಟನೆಯ ಮೂರೂ ಜನ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.



ಸ್ಥಳ ಮಹಜರು: ಘಟನಾ ಸ್ಥಳಕ್ಕೆ ಭಾನುವಾರ ಇಬ್ಬರು ಆರೋಪಿಗಳನ್ನು ಕರೆ ತಂದ ಪೊಲೀಸರು ಮಹಜರು ಮಾಡಿದರು. ಗಂಗಾವತಿ ಗ್ರಾಮೀಣ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಸೋಮಶೇಖರ ಜುಟ್ಟಲ್ ನೇತೃತ್ವದಲ್ಲಿ ಸಿಬ್ಬಂದಿ ಆರೋಪಿಗಳನ್ನು ಕರೆ ತರಲಾಯಿತು.

ಹೆಚ್ಚಿದ ಗಸ್ತು: ಘಟನೆ ಬಳಿಕ ಸಾಣಾಪುರ ಹಾಗೂ ಸುತ್ತಲಿನ ಜನರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿರುವ ಕಾರಣ ಪೊಲೀಸರು ಗಸ್ತು ಹೆಚ್ಚಿಸಿದ್ದಾರೆ. ಡಿಎಆರ್ ಪೊಲೀಸರು ಸ್ಥಳದಲ್ಲಿಯೇ ಮೊಕ್ಕಾಂ ಹೂಡಿದ್ದು, ಸ್ಥಳದತ್ತ ಮತ್ತು ಇತರೆ ಪ್ರವಾಸಿ ತಾಣಗಳತ್ತ ಜನ ತೆರಳದಂತೆ ಸೂಚಿಸಿದರು.

'ಡ್ರಗ್ ಮಾಫಿಯಾ ಹಿಂದೆ ರಾಜಕಾರಣಿಗಳು, ಅಧಿಕಾರಿಗಳು'

ಒಂದನೇ ಪುಟದಿಂದ..

ಭಾನುವಾರ ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಅಕ್ರಮ ಡ್ರಗ್ ಮಾಫಿಯಾದಿಂದ ಹಂಪಿ ಸುತ್ತಮುತ್ತಲಿನ ಪ್ರವಾಸಿ ತಾಣಗಳ ಹೆಸರಿಗೆ ಕಳಂಕ ಬರುತ್ತಿದೆ. ಈ ಭಾಗದ ಅಕ್ರಮ ಹೋಂಸ್ಟೇಗಳನ್ನು ಬಂದ್ ಮಾಡಿಸಬೇಕಿದೆ' ಎಂದರು.

'ಹಂಪಿ ಮತ್ತು ಸುತ್ತಮುತ್ತಲ ಪ್ರವಾಸಿ ತಾಣಗಳಿಗೆ ಪ್ರತಿಷ್ಠಿತ ವಿದೇಶಿಯರು ಪ್ರವಾಸ ಬರುವುದು ಕಡಿಮೆ. ಹೀಗೆ ಬರುವ ಕೆಲವು ಕಡಿಮೆ ಆದಾಯದ ವಿದೇಶಿ ಪ್ರಜೆಗಳು ಡ್ರಗ್ ಮಾಫಿಯಾವನ್ನು ದಂಧೆಯಾಗಿ ಮಾಡಿಕೊಂಡಿದ್ದಾರೆ. ಈ ಹಿಂದಿನಿಂದಲೂ ಈ ಜಾಲ ಕೆಲಸ ಮಾಡುತ್ತಿದೆ. ನಾನು ಈ ಹಿಂದೆ ವಿಧಾನಸೌಧದಲ್ಲೇ ಪ್ರಸ್ತಾಪ ಮಾಡಿದಾಗ ನನ್ನ ವಿರುದ್ಧವೇ ಕೆಲವರು ಮಾತನಾಡಿದರು. ಹೋಂಸ್ಟೇ ಅಕ್ರಮಗಳಿಗೆ ತಕ್ಷಣ ಕಡಿವಾಣ ಹಾಕಬೇಕಿದ್ದು, ನಾನು ಇದರ ಬಗ್ಗೆ ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಬಳಿ ಮಾತನಾಡುವೆ' ಎಂದು ಹೇಳಿದರು.

> **ಪ್ರವಾಸಿಗರಿಗೆ ಹೆಚ್ಚಿನ ಸುರಕ್ಷತೆ ನೀಡಲು ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ**
>
> **ಜಿ. ಪರಮೇಶ್ವರ,** ಗೃಹ ಸಚಿವ

ಬಿಎಸ್‌ವೈ ಬ್ಲ್ಯಾಕ್‌ಮೇಲ್ ರಾಜಕಾರಣಿ: ಬಿ.ಪಿ.ಹರೀಶ್

ಪ್ರಜಾವಾಣಿ ವಾರ್ತೆ



ದಾವಣಗೆರೆ: 'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಷ್ಟ್ರೀಯ ನಾಯಕರನ್ನು ಬ್ಲ್ಯಾಕ್‌ಮೇಲ್ ಮಾಡಿ ಕೊಂಡು ಬಂದಿದ್ದಾರೆ. ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವ ವೇಳೆ ಮಠಾಧೀಶರನ್ನು ಮುಂದಿಟ್ಟುಕೊಂಡು ಆಟವಾಡಿದರು. ಪುತ್ರನ ವಿಚಾರದಲ್ಲಿ ಮತ್ತೆ ಹಳೆಯ ಆಟ ಮುಂದುವರಿಸಿದ್ದಾರೆ' ಎಂದು ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಕಿಡಿಕಾರಿದರು.

'ವೀರಶೈವ ಲಿಂಗಾಯತ ನಾಯಕರ ಸಮಾವೇಶ ಮಾಡುವುದರಲ್ಲಿ ಅರ್ಥವಿಲ್ಲ. ರಾಷ್ಟ್ರೀಯ ನಾಯಕರು ತಮ್ಮ ಜೊತೆಗಿಲ್ಲ ಎಂಬ ಭಾವನೆ ಇರುವವರು ಇಂತಹ ಸಮಾವೇಶ ಸಂಘಟಿಸುತ್ತಿರಬಹುದು. ಈ ಭಯ ನಮಗಿಲ್ಲ. ಪಕ್ಷಕ್ಕೆ ದ್ರೋಹ ಎಸಗಿದವರು, ಭ್ರಷ್ಟರು, ಹೊಂದಾಣಿಕೆ ರಾಜಕಾರಣ ಮಾಡಿದವರನ್ನು ಪಕ್ಷದಿಂದ ತೊಲಗಿಸುವ ಹೋರಾಟ ಮುಂದುವರಿಯಲಿದೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಿಜೆಪಿಯಲ್ಲಿನ ಆಂತರಿಕ ಕಿತ್ತಾಟದಿಂದ ರಾಜ್ಯದ ಜನ ಬೇಸತ್ತಿದ್ದಾರೆ. ಇದನ್ನು ಬಗೆಹರಿಸಲು ರಾಷ್ಟ್ರೀಯ ನಾಯಕರು ಇನ್ನೂ ಗಮನ ಹರಿಸಿದಂತೆ ಕಾಣುತ್ತಿಲ್ಲ. ನಾವು ಇನ್ನೂ ಆಶಾದಾಯಕರಾಗಿದ್ದೇವೆ. ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರೊಂದಿಗೆ ಗೃಹ ಸಚಿವ ಅಮಿತ್ ಶಾ ಚರ್ಚೆ ನಡೆಸಿದ್ದಾರೆ. ಮುಂಬರುವ ದಿನಗಳಲ್ಲಿ ಪಕ್ಷದ ವರಿಷ್ಠರು ಕೈಗೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ' ಎಂದರು.

ಪ್ರಯಾಗರಾಜ್ ಕುಂಭಮೇಳ: ಎನ್‌ಜಿಟಿಗೆ ವಿಶ್ಲೇಷಣಾತ್ಮಕ ವರದಿ ಸಲ್ಲಿಕೆ

'ಸಂಗಮ ನೀರು ಸ್ನಾನಕ್ಕೆ ಯೋಗ್ಯವಾಗಿತ್ತು'

ನವದೆಹಲಿ (ಪಿಟಿಐ): ಪ್ರಯಾಗರಾಜ್‌ನಲ್ಲಿ ನಡೆದ ಮಹಾಕುಂಭ ಮೇಳದ ಸಮಯದಲ್ಲಿ ನೀರಿನ ಗುಣಮಟ್ಟವು ಸ್ನಾನಕ್ಕೆ ಯೋಗ್ಯವಾಗಿತ್ತು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿಪಿಸಿಬಿ) ಹೊಸ ವರದಿ ಹೇಳಿದೆ.

ಈ ಕುರಿತು ಸಿದ್ಧಪಡಿಸಿರುವ ಅಂಕಿ ಅಂಶಗಳಿಂದ ಕೂಡಿದ ವಿಶ್ಲೇಷಣಾತ್ಮಕ ವರದಿಯನ್ನು ಮಂಡಳಿಯು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ಸಲ್ಲಿಸಿದೆ.

ನಿರ್ದಿಷ್ಟ ಸ್ಥಳಗಳಲ್ಲಿ ವಿಭಿನ್ನ ದಿನಗಳಂದು ಹಾಗೂ ಬೇರೆ ಬೇರೆ ಸ್ಥಳಗಳಲ್ಲಿ ನಿರ್ದಿಷ್ಟ ದಿನಗಳಂದು ಸಂಗ್ರಹಿಸಲಾದ ನೀರಿನ ಮಾದರಿಯ ದತ್ತಾಂಶ ವಿಶ್ಲೇಷಿಸಲಾಗಿದೆ ಎಂದು ಹೇಳಿರುವ ಮಂಡಳಿಯು, ಇದು ಒಟ್ಟಾರೆ ನದಿ ನೀರಿನ ಗುಣಮಟ್ಟವನ್ನು ಪ್ರತಿಬಿಂಬಿಸುವುದಿಲ್ಲ ಎಂದೂ ತಿಳಿಸಿದೆ.

ಮಂಡಳಿಯು ಈ ವರದಿಯನ್ನು ಫೆಬ್ರುವರಿ 28ರಂದು ಸಿದ್ಧಪಡಿಸಿದ್ದು, ಮಾರ್ಚ್ 7ರಂದು ಎನ್‌ಜಿಟಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಸಿಪಿಸಿಬಿ ಜನವರಿ 12ರಿಂದ ಗಂಗಾನದಿಯ ಐದು ಮತ್ತು ಯಮುನಾ ನದಿಯ ಎರಡು ಸ್ಥಳಗಳಲ್ಲಿ ವಾರಕ್ಕೆ ಎರಡು ಬಾರಿ ನೀರಿನ ಗುಣಮಟ್ಟದ ಪರೀಕ್ಷೆ ನಡೆಸಿರುವುದಾಗಿ ಹೇಳಿದೆ.

ನಿರ್ದಿಷ್ಟ ಸ್ಥಳಗಳಿಂದ ಬೇರೆ ಬೇರೆ ದಿನಗಳಂದು ಸಂಗ್ರಹಿಸಿದ ಮಾದರಿಗಳಲ್ಲಿ ಕರಗಿದ ಆಮ್ಲಜನಕ



(ಡಿಒ) ಪ್ರಮಾಣ, ಜೀವರಾಸಾಯನಿಕ ಆಮ್ಲಜನಕ ಬೇಡಿಕೆ (ಬಿಒಡಿ) ಮತ್ತು ಫೀಕಲ್ ಕೋಲಿಫಾರ್ಮ್ ಪ್ರಮಾಣದಲ್ಲಿ (ಎಫ್‌ಸಿ) ಗಮನಾರ್ಹ ವ್ಯತ್ಯಾಸ ಕಂಡು ಬಂದಿದೆ. ಅದೇ ರೀತಿ ನಿರ್ದಿಷ್ಟ ದಿನದಂದು ಬೇರೆ ಬೇರೆ ಸ್ಥಳಗಳಲ್ಲಿ ತೆಗೆದುಕೊಂಡ ಮಾದರಿಗಳಲ್ಲೂ ವ್ಯತ್ಯಾಸಗಳು ಕಂಡು ಬಂದಿವೆ ಎಂದು ಮಂಡಳಿ ತಿಳಿಸಿದೆ.

ನೀರಿನಲ್ಲಿರುವ ಆಮ್ಲಜನಕದ ಪ್ರಮಾಣದ ಕುರಿತು 'ಡಿಒ' ಹೇಳಿದರೆ, ಜಲಕಾಯಗಳಲ್ಲಿರುವ ಸಾವಯವ ಪದಾರ್ಥಗಳನ್ನು ವಿಭಜಿಸಲು ಸೂಕ್ಷ್ಮಾಣು ಜೀವಿಗಳಿಗೆ ಅಗತ್ಯವಿರುವ ಆಮ್ಲಜನಕ ಪ್ರಮಾಣ ಕುರಿತು 'ಬಿಒಡಿ' ತಿಳಿಸುತ್ತದೆ. ಒಳಚರಂಡಿ ನೀರಿನ ಸೇರ್ಪಡೆಯಿಂದ ಆಗಿರುವ ಮಾಲಿನ್ಯದ ಪ್ರಮಾಣವನ್ನು 'ಎಫ್‌ಸಿ' ತಿಳಿಸುತ್ತದೆ.

ನಿರ್ದಿಷ್ಟ ಮಿತಿಯಲ್ಲಿವೆ: ಜನವರಿ 12ರಿಂದ ಫೆಬ್ರುವರಿ 22ರವರೆಗೆ ಸಾಮೂಹಿಕ ಸ್ನಾನದ 10 ಸ್ಥಳಗಳಲ್ಲಿ ನೀರಿನ ಗುಣಮಟ್ಟದ ವಿಶ್ಲೇಷಣೆ ನಡೆಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ದತ್ತಾಂಶಗಳ ವಿಶ್ಲೇಷಣೆ ಪ್ರಕಾರ, 'ಡಿಒ', 'ಬಿಒಡಿ' ಮತ್ತು 'ಎಫ್‌ಸಿ'ಗಳ ಸರಾಸರಿ ಮೌಲ್ಯವು ಅನುಮತಿಸಬಹುದಾದ ಮಿತಿಗಳಲ್ಲಿದ್ದವು ಎಂದು ವರದಿಯಲ್ಲಿ ಮಂಡಳಿ ತಿಳಿಸಿದೆ.

ಎಫ್‌ಸಿ ಮೌಲ್ಯವು 1,400 ಯೂನಿಟ್ (100 ಎಂ.ಎಲ್ ನೀರಿನಲ್ಲಿ 2,500 ಯೂನಿಟ್‌ಗಳವರೆಗೆ ಇರಬಹುದು), ಡಿಒ 8.7 ಮಿಲಿಗ್ರಾಂ (1 ಲೀಟರ್‌ನಲ್ಲಿ 5 ಮಿಲಿಗ್ರಾಂಗಿಂತ ಹೆಚ್ಚಿರಬೇಕು) ಮತ್ತು ಬಿಒಡಿ ಪ್ರಮಾಣವು 2.5 ಮಿ.ಗ್ರಾಂನಷ್ಟಿತ್ತು (ಪ್ರತಿ ಲೀಟರ್‌ಗೆ 3 ಮಿ.ಗ್ರಾಂ ಅಥವಾ ಅದಕ್ಕಿಂತ ಕಡಿಮೆ ಇರಬೇಕು) ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಪ್ರಯಾಗರಾಜ್‌ನಲ್ಲಿ ವಿವಿಧ ಸ್ಥಳಗಳಲ್ಲಿ ನೀರು ಸ್ನಾನ ಮಾಡಲು ಯೋಗ್ಯವಾಗಿಲ್ಲ' ಎಂದು ಮಂಡಳಿ ಫೆ.17ರಂದು ನ್ಯಾಯಮಂಡಳಿಗೆ ವರದಿ ಸಲ್ಲಿಸಿತ್ತು. ಎನ್‌ಜಿಟಿಯು ಈ ವಿಷಯ ಕುರಿತು ವಿಚಾರಣೆಯನ್ನು ಏಪ್ರಿಲ್ 7ರಂದು ನಡೆಸಲಿದೆ.

ಪುಣ್ಯಸ್ನಾನ: ವ್ಯಂಗ್ಯವಾಡಿದ ರಾಜ್ ಠಾಕ್ರೆ

ಮುಂಬೈ: ಪ್ರಯಾಗರಾಜ್‌ನಲ್ಲಿ ನಡೆದ ಮಹಾಕುಂಭಮೇಳ ದಲ್ಲಿ ಜನರು ಗಂಗಾನದಿಯಲ್ಲಿ ಪುಣ್ಯಸ್ನಾನ ಮಾಡಿದ್ದನ್ನು ಮಹಾರಾಷ್ಟ್ರ ನವನಿರ್ಮಾಣ ಸೇನಾ ಅಧ್ಯಕ್ಷ ರಾಜ್ ಠಾಕ್ರೆ ವ್ಯಂಗ್ಯವಾಡಿದ್ದಾರೆ.

ಪುಣೆಯ ಪಿಂಪ್ರಿ– ಚಿಂಚವಾಡ್‌ನಲ್ಲಿ ಏರ್ಪಡಿಸಿದ್ದ ಪಕ್ಷದ 19ನೇ ವರ್ಷಾಚರಣೆಯಲ್ಲಿ ಮಾತನಾಡಿದ ಅವರು, 'ಪಕ್ಷದ ನಾಯಕ ಬಾಲ ನಂದಗಾಂವ್ಕರ್ ಗಂಗಾಜಲವನ್ನು ತಂದುಕೊಟ್ಟಿದ್ದರು. ಅದನ್ನು ನಾನು ಮುಟ್ಟಿಯೂ ನೋಡಲಿಲ್ಲ. ಜನರು ಮೂಢನಂಬಿಕೆ ಬಗ್ಗೆ ಎಚ್ಚರದಿಂದ ಇರಬೇಕು. ನಂಬಿಕೆ ಹಾಗೂ ಮೂಢನಂಬಿಕೆಯ ವ್ಯತ್ಯಾಸವನ್ನು ತಿಳಿದಿರಬೇಕು' ಎಂದು ಕರೆ ನೀಡಿದರು.

'ಗಂಗಾ ಜಲ ತಂದುಕೊಟ್ಟು ಕುಡಿಯಲು ಹೇಳಿದರು. ಆಗುವುದಿಲ್ಲ ಎಂದು ತಿಳಿಸಿದೆ. ಜನರು ಅದೇ ನದಿಯಲ್ಲಿ ಸ್ನಾನ ಮಾಡುತ್ತಿದ್ದರು. ಆ ನೀರನ್ನು ಯಾರು ಕುಡಿಯುತ್ತಾರೆ' ಎಂದು ಪ್ರಶ್ನಿಸಿದರು.

ಈ ಹೇಳಿಕೆಗೆ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಹಾಗೂ ಬಿಜೆಪಿ ನಾಯಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9 (ಪಾಕಿಸ್ತಾನ-ದುಬೈ)

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್: 7ಕ್ಕೆ 251 (50 ಓವರ್‌ಗಳಲ್ಲಿ)
ಯಂಗ್ ಎಲ್‌ಬಿಡಬ್ಲ್ಯು ಬಿ ವರುಣ್ 15 (23ಎ, 4x2)
ರಚಿನ್ ಬಿ ಕುಲದೀಪ್ 37 (29ಎ, 4x4, 6x1)
ವಿಲಿಯಮ್ಸನ್ ಸಿ ಮತ್ತು ಬಿ ಕುಲದೀಪ್ 11 (14ಎ, 4x1)
ಡ್ಯಾರಿಲ್ ಸಿ ಶರ್ಮಾ ಬಿ ಶಮಿ 63 (101ಎ, 4x3)
ಲೇಥಮ್ ಎಲ್‌ಬಿಡಬ್ಲ್ಯು ಬಿ ಜಡೇಜ 14 (30ಎ)
ಫಿಲಿಪ್ಸ್ ಬಿ ವರುಣ್ 34 (52ಎ, 4x2, 6x1)
ಮೈಕಲ್ ಬ್ರೇಸ್‌ವೆಲ್ ಔಟಾಗದೇ 53 (40ಎ, 4x3, 6x2)
ಸ್ಯಾಂಟನರ್ ರನೌಟ್ (ಕೊಹ್ಲಿ/ರಾಹುಲ್) 8 (10ಎ)
ನೇಥನ್ ಸ್ಮಿತ್ ಔಟಾಗದೇ 0 (1ಎ)
ಇತರೆ: 16 (ಲೆಗ್‌ಬೈ 3, ವೈಡ್ 13)
ವಿಕೆಟ್ ಪತನ: 1-57 (ವಿಲ್ ಯಂಗ್, 7.5), 2-69 (ರಚಿನ್ ರವೀಂದ್ರ, 10.1), 3-75 (ಕೇನ್ ವಿಲಿಯಮ್ಸನ್, 12.2), 4-108 (ಟಾಮ್ ಲೇಥಮ್, 23.2), 5-165 (ಗ್ಲೆನ್ ಫಿಲಿಪ್ಸ್, 37.5), 6-211 (ಡ್ಯಾರಿಲ್ ಮಿಚೆಲ್, 45.4), 7-239 (ಮಿಚೆಲ್ ಸ್ಯಾಂಟನರ್, 48.6)
ಬೌಲಿಂಗ್: ಮೊಹಮ್ಮದ್ ಶಮಿ 9–0–74–1, ಹಾರ್ದಿಕ್ ಪಾಂಡ್ಯ 3–0–30–0, ವರುಣ್ ಚಕ್ರವರ್ತಿ 10–0–45–2, ಕುಲದೀಪ್ ಯಾದವ್ 10–0–40–2, ಅಕ್ಷರ್ ಪಟೇಲ್ 8–0–29–0, ರವೀಂದ್ರ ಜಡೇಜ 10–0–30–1
ಭಾರತ 6ಕ್ಕೆ 254 (49 ಓವರ್‌ಗಳಲ್ಲಿ)
ರೋಹಿತ್ ಸ್ಟಂಪ್ಡ್ ಲೇಥಮ್ ಬಿ ರಚಿನ್ 76 (83ಎ, 4x7,6x3)
ಶುಭಮನ್ ಸಿ ಫಿಲಿಪ್ಸ್ ಬಿ ಸ್ಯಾಂಟನರ್ 31 (50ಎ, 6x1)
ಕೊಹ್ಲಿ ಎಲ್‌ಬಿಡಬ್ಲ್ಯು ಬಿ ಬ್ರೇಸ್‌ವೆಲ್ 1 (2ಎ)
ಶ್ರೇಯಸ್ ಸಿ ರಚಿನ್ ಬಿ ಸ್ಯಾಂಟನರ್ 48 (62ಎ, 4x2, 6x2)
ಅಕ್ಷರ್ ಸಿ ಒ ರೂರ್ಕಿ ಬಿ ಬ್ರೇಸ್‌ವೆಲ್ 29 (40ಎ, 4x1, 6x1)
ಕೆ.ಎಲ್.ರಾಹುಲ್ ಔಟಾಗದೇ 34 (33ಎ, 4x1, 6x1)
ಹಾರ್ದಿಕ್ ಸಿ ಮತ್ತು ಬಿ ಜೆಮಿಸನ್ 18 (18ಎ, 4x1, 6x1)
ರವೀಂದ್ರ ಜಡೇಜ ಔಟಾಗದೇ 9 (6ಎ, 4x1)
ಇತರೆ: 8 (ವೈಡ್ 8)
ವಿಕೆಟ್ ಪತನ: 1–105 (ಶುಭಮನ್ ಗಿಲ್, 18.4), 2–106 (ವಿರಾಟ್ ಕೊಹ್ಲಿ, 19.1), 3–122 (ರೋಹಿತ್ ಶರ್ಮಾ, 26.1), 4–183 (ಶ್ರೇಯಸ್ ಅಯ್ಯರ್, 38.4), 5–203 (ಅಕ್ಷರ್ ಪಟೇಲ್, 41.3), 6–241 (ಹಾರ್ದಿಕ್ ಪಾಂಡ್ಯ, 47.3)
ಬೌಲಿಂಗ್: ಕೈಲ್ ಜೆಮಿಸನ್ 5–0–24–1, ವಿಲ್ ಒ ರೂರ್ಕಿ 7–0–56–0, ನೇಥನ್ ಸ್ಮಿತ್ 2–0–22–0, ಮಿಚೆಲ್ ಸ್ಯಾಂಟನರ್ 10–0–46–2, ರಚಿನ್ ರವೀಂದ್ರ 10–1–47–1, ಮೈಕಲ್ ಬ್ರೇಸ್‌ವೆಲ್ 10–1–28–2, ಗ್ಲೆನ್ ಫಿಲಿಪ್ಸ್ 5–0–31–0
ಪಂದ್ಯದ ಆಟಗಾರ: ರೋಹಿತ್ ಶರ್ಮಾ
ಸರಣಿಯ ಆಟಗಾರ: ರಚಿನ್ ರವೀಂದ್ರ

ಭಾರತಕ್ಕೆ 4 ವಿಕೆಟ್‌ಗಳ ಜಯ



ಅರ್ಧಶತಕ ಗಳಿಸಿದ ಸಂಭ್ರಮದಲ್ಲಿ ರೋಹಿತ್ ಶರ್ಮಾ

ಮರಳುಗಾಡಿನಲ್ಲಿ ರೋಹಿತ್ ಬಳಗಕ್ಕೆ ಕಿರೀಟ

ವರುಣ್, ಕುಲದೀಪ್ ಸ್ಪಿನ್ ಮೋಡಿ • ರಾಹುಲ್, ಶ್ರೇಯಸ್ ಅಯ್ಯರ್, ಅಕ್ಷರ್ ಪಟೇಲ್ ಉಪಯುಕ್ತ ಕಾಣಿಕೆ • ನ್ಯೂಜಿಲೆಂಡ್ ತಂಡಕ್ಕೆ ನಿರಾಸೆ

ದುಬೈ(ಪಿಟಿಐ): ಭಾನುವಾರ ದುಬೈ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾರತದ ಸ್ಪಿನ್ನರ್‌ಗಳ ಮೋಡಿ, ರೋಹಿತ್ ಶರ್ಮಾ–ಶುಭಮನ್ ಗಿಲ್ ಜೋಡಿಯ ಅಂದದ ಬ್ಯಾಟಿಂಗ್, ಶ್ರೇಯಸ್ ಅಯ್ಯರ್–ಅಕ್ಷರ್ ಪಟೇಲ್ ಜವಾಬ್ದಾರಿಯುತ ಜೊತೆಯಾಟಗಳನ್ನು ವ್ಯರ್ಥವಾಗಲು ಬಿಡಲಿಲ್ಲ ಕನ್ನಡಿಗ ಕೆ.ಎಲ್. ರಾಹುಲ್.

12 ವರ್ಷಗಳ ನಂತರ ಭಾರತಕ್ಕೆ ಚಾಂಪಿಯನ್ಸ್ ಟ್ರೋಫಿ ಒಲಿಯಲು ಭಾರತದ ಆಟಗಾರರ ಸಂಘಟಿತ ಆಟವೇ ಕಾರಣವಾಯಿತು. ಮರಳುನಾಡಿನ ಅಂಗಳದಲ್ಲಿ ಕಠಿಣ ಪೈಪೋಟಿಯೊಡ್ಡಿದ ಮಿಚೆಲ್ ಸ್ಯಾಂಟನರ್ ನಾಯಕತ್ವದ ನ್ಯೂಜಿಲೆಂಡ್ ತಂಡವನ್ನು 4 ವಿಕೆಟ್‌ಗಳಿಂದ ಸೋಲಿಸುವಲ್ಲಿ ರಾಹುಲ್ ಆಟ ಮತ್ತೊಮ್ಮೆ ಪ್ರಮುಖವಾಯಿತು. ರವೀಂದ್ರ ಜಡೇಜ ವಿಜಯದ ಬೌಂಡರಿ ಹೊಡೆಯುವ ಮುನ್ನ ತಂಡವನ್ನು ಏರಿಳಿತಗಳ ಹಾದಿಯಲ್ಲಿ ಸುರಕ್ಷಿತವಾಗಿ ಗೆಲುವಿನ ದಡ ಮುಟ್ಟಿಸುವಲ್ಲಿ ರಾಹುಲ್ ಪಾತ್ರ ಮಹತ್ವದ್ದಾಯಿತು. ಅದಕ್ಕಾಗಿಯೇ ಜಡೇಜ ಓಡಿ ಬಂದು ರಾಹುಲ್ ಅವರನ್ನು ಬಿಗಿದಪ್ಪಿ ಸಂಭ್ರಮಿಸಿದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕಿವೀಸ್ ಬಳಗವು ಡ್ಯಾರಿಲ್ ಮಿಚೆಲ್ ಮತ್ತು ಮಿಚೆಲ್ ಬ್ರೇಸ್‌ವೆಲ್ ಅವರ ಅರ್ಧಶತಕಗಳ ಬಲದಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 251 ರನ್ ಗಳಿಸಿತು.

ಭಾರತದ ಸ್ಪಿನ್ನರ್ ವರುಣ್ ಚಕ್ರವರ್ತಿ (45ಕ್ಕೆ2) ಮತ್ತು ಕುಲದೀಪ್ ಯಾದವ್ (40ಕ್ಕೆ2) ಅವರ ಮೋಡಿಯಿಂದಾಗಿ ಕಿವೀಸ್ ಬಳಗಕ್ಕೆ ಬೃಹತ್ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಗೆಲುವು ಅತ್ಯಂತ ಸುಲಭವಾಗಿ ಒಲಿಯುವಂತೆ ಭಾಸವಾಗಲು ರೋಹಿತ್ ಮತ್ತು ಶುಭಮನ್ ಗಿಲ್ ಬ್ಯಾಟಿಂಗ್ ಕಾರಣವಾಯಿತು. ಅದರಲ್ಲೂ ರೋಹಿತ್ ಅವರ ಆಟಕ್ಕೆ ಬೌಲರ್‌ಗಳು ನಿರುತ್ತರರಾದರು. ಇನಿಂಗ್ಸ್‌ನ ಎರಡನೇ ಎಸೆತವನ್ನೇ ಸಿಕ್ಸರ್‌ಗೆ ಎತ್ತುವ ಮೂಲಕ ತಮ್ಮ ಹಾಗೂ ತಂಡದ ಖಾತೆ ತೆರೆದ ರೋಹಿತ್ ಅವರನ್ನು ತಡೆಯುವುದು ಅಸಾಧ್ಯವಾಯಿತು.

ಗಿಲ್ ಕೂಡ ತಮ್ಮ ನಾಯಕನ ಆಟಕ್ಕೆ ಪ್ರೇಕ್ಷಕನಾದರು. ತಮಗೆ ಸಿಕ್ಕ ಅವಕಾಶಗಳಲ್ಲಿ ದೊಡ್ಡ ಹೊಡೆತ ಆಡಲಿಲ್ಲ. ಒಂದು, ಎರಡು ರನ್ ಹೊಡೆದು ಆಡಿದರು. ಒಂದು ಬಾರಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ಗಿಲ್ ಜೀವದಾನ ಪಡೆದರು. ಆದರೆ ರೋಹಿತ್ ಅವರ ಪುಲ್, ಫ್ಲಿಕ್, ಫ್ರಂಟ್‌ಫುಟ್ ಶಾಟ್‌ಗಳು ಮತ್ತು ಬೌಲರ್‌ಗಳು ಚೆಂಡನ್ನು ರಿಲೀಸ್ ಮಾಡುವ ಮುನ್ನವೇ ಕ್ರೀಸ್‌ನಲ್ಲಿ ತೋರಿದ ಪಾದಚಲನೆಯು ಗಮನ ಸೆಳೆಯುವಂತಿತ್ತು. 41 ಎಸೆತಗಳಲ್ಲಿ ಅರ್ಧಶತಕ ಹೊಡೆದರು. ಅದರಲ್ಲಿ 3 ಸಿಕ್ಸರ್‌ಗಳು, 5 ಬೌಂಡರಿಗಳು ಇದ್ದವು. ರನ್ ರೇಟ್ ಕೂಡ ಕುದುರೆಯಂತೆ ವೇಗವಾಗಿ ಓಡುತ್ತಿತ್ತು. ಆದರೆ 19ನೇ ಓವರ್‌ನಲ್ಲಿ ಗಿಲ್ ವಿಕೆಟ್ ಪಡೆದ ಮಿಚೆಲ್ ಸ್ಯಾಂಟನರ್ ಜೊತೆಯಾಟ ಮುರಿದರು.

ನಂತರದ ಓವರ್‌ನಲ್ಲಿ ಚೇಸಿಂಗ್ ಮಾಸ್ಟರ್ ವಿರಾಟ್ ಕೊಹ್ಲಿ 1 ರನ್ ಗಳಿಸಿದ್ದರು. ಆದರೆ ಮೈಕೆಲ್ ಬ್ರೇಸ್‌ವೆಲ್ ಅವರ ಕೆಳಮಟ್ಟದ ಸ್ಪಿನ್ ಎಸೆತವನ್ನು ಸ್ವೀಪ್ ಮಾಡುವ ಪ್ರಯತ್ನದಲ್ಲಿ ಕೊಹ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇದರಿಂದ ಕಿವೀಸ್ ಬಳಗದ ಆತ್ಮವಿಶ್ವಾಸ ಇಮ್ಮಡಿಸಿತು.

ರೋಹಿತ್ ಅಬ್ಬರವೂ ತಗ್ಗತೊಡಗಿತು. 27ನೇ ಓವರ್‌ನಲ್ಲಿ ರಚಿನ್ ರವೀಂದ್ರ ಎಸೆತವನ್ನು ಎರಡು ಹೆಜ್ಜೆ ಮುಂದೆ ಜಿಗಿದು ಆಡಲು ಯತ್ನಿಸಿದ ರೋಹಿತ್ ಅವರನ್ನು ವಿಕೆಟ್‌ಕೀಪರ್ ಟಾಮ್ ಲೇಥಮ್ ಸ್ಟಂಪಿಂಗ್ ಮಾಡಿದರು. ಇಲ್ಲಿಂದ ಇನಿಂಗ್ಸ್ ಮೇಲೆ ಹಿಡಿತ ಸಾಧಿಸಲು ಕಿವೀಸ್ ಪಡೆ ಯತ್ನಿಸಿತು. ಕೊನೆಯ ಓವರ್‌ನವರೆಗೂ ಹಗ್ಗಜಗ್ಗಾಟ ಸಾಗಿತು. ಇದರಿಂದಾಗಿ ರೋಚಕತೆ ಮೂಡಿಸಿತು.

ಶ್ರೇಯಸ್ ಅಯ್ಯರ್ (48 ರನ್) ಮತ್ತೊಂದು ಉಪಯುಕ್ತ ಇನಿಂಗ್ಸ್ ಆಡಿದರು. ಅವರಿಗೆ ಅಕ್ಷರ್ (29) ಜೊತೆ ನೀಡಿದರು. ಅವರಿಬ್ಬರನ್ನೂ ಕಟ್ಟಿ ಹಾಕುವಲ್ಲಿ ಕಿವೀಸ್ ಸ್ಪಿನ್ನರ್‌ಗಳು ಯಶಸ್ವಿಯಾದರು.

ಆಗ ಮತ್ತೆ ಆಸರೆಯಾದವರು ಆರನೇ ಕ್ರಮಾಂಕದ ರಾಹುಲ್. ಯೋಜನಾ ಬದ್ಧವಾಗಿ ಆಡಿದ ಅವರಿಗೆ ಹಾರ್ದಿಕ್ ಕೂಡ ಜೊತೆಗೂಡಿದರು. ಆದರೆ ಎಂದಿನಂತೆ ಕೊನೆಯ ಹಂತದಲ್ಲಿ ಹಾರ್ದಿಕ್ ಅವಸರಕ್ಕೆ ಈಡಾಗಿ ವಿಕೆಟ್ ಕೊಟ್ಟರು. ಜಡೇಜ (ಅಜೇಯ 9) ಮಾತ್ರ ತಾಳ್ಮೆಯಿಂದ ರಾಹುಲ್ ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಡ್ಯಾರಿಲ್, ಮಿಚೆಲ್ ಬ್ಯಾಟಿಂಗ್: ನ್ಯೂಜಿಲೆಂಡ್ ತಂಡದ ಆರಂಭಿಕ ಜೋಡಿ ರಚಿನ್ ರವೀಂದ್ರ ಮತ್ತು ವಿಲ್ ಯಂಗ್ ಅವರುಮೊದಲ ವಿಕೆಟ್ ಜೊತೆಯಾಟದಲ್ಲಿ 57 ರನ್ ಸೇರಿಸಿದರು. ವೇಗಿ ಮೊಹಮ್ಮದ್ ಶಮಿ ಎಸೆತಗಳನ್ನು ರವೀಂದ್ರ ಲೀಲಾಜಾಲವಾಗಿ ಆಡಿದರು. ಅವರ ಒಂದೇ ಓವರ್‌ನಲ್ಲಿ 3 ಬೌಂಡರಿ ಹೊಡೆದರು.

ಆದರೆ ಭಾರತದ ಸ್ಪಿನ್ನರ್‌ಗಳು ದಾಳಿಗಿಳಿದ ನಂತರ 21 ರನ್‌ಗಳ ಅಂತರದಲ್ಲಿ ಕಿವೀಸ್ ಬಳಗದ 3 ವಿಕೆಟ್‌ಗಳು ಪತನವಾದವು. ಈ ಸಂದರ್ಭದಲ್ಲಿ ಡ್ಯಾರಿಲ್ ಮಿಚೆಲ್ (63; 101ಎ) ಮತ್ತು ಕೊನೆಯ ಹಂತದಲ್ಲಿ ಮಿಚೆಲ್ ಬ್ರೇಸ್ ವೆಲ್ (53; 40ಎ) ಅವರು ಮಿಂಚಿದರು. ಅರ್ಧಶತಕ ದಾಖಲಿಸಿದರು. ಅದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಲು ಸಾಧ್ಯವಾಯಿತು.



ವಿಕೆಟ್ ಪಡೆದ ಕುಲದೀಪ್ ಯಾದವ್ ಅವರನ್ನು ಅಭಿನಂದಿಸಿದ ಕೊಹ್ಲಿ —ಎಎಫ್‌ಪಿ/ಪಿಟಿಐ ಚಿತ್ರಗಳು

ಭಾರತ ಗೆದ್ದಿರುವ ಐಸಿಸಿ ಟೂರ್ನಿ

ವರ್ಷ	ಟೂರ್ನಿ	ಸ್ಥಳ
1983	ಏಕದಿನ ವಿಶ್ವಕಪ್	ಲಾರ್ಡ್ಸ್
2002	ಚಾಂಪಿಯನ್ಸ್ ಟ್ರೋಫಿ	ಶ್ರೀಲಂಕಾ
2007	ಟಿ20 ವಿಶ್ವಕಪ್	ದಕ್ಷಿಣ ಆಫ್ರಿಕಾ
2011	ಏಕದಿನ ವಿಶ್ವಕಪ್	ಭಾರತ
2013	ಚಾಂಪಿಯನ್ಸ್ ಟ್ರೋಫಿ	ಇಂಗ್ಲೆಂಡ್
2024	ಟಿ20 ವಿಶ್ವಕಪ್	ವೆಸ್ಟ್ಇಂಡೀಸ್
2025	ಚಾಂಪಿಯನ್ಸ್ ಟ್ರೋಫಿ	ದುಬೈ

ಬೀದರ್ ಮೂಲದ ವರುಣ್ ಕೈಚಳಕ



ವಿಕೆಟ್ ಪಡೆದ ಸಂಭ್ರಮದಲ್ಲಿ ವರುಣ್ ಚಕ್ರವರ್ತಿ

ಬೆಂಗಳೂರು: ಕರ್ನಾಟಕದ ಬೀದರ್‌ನಲ್ಲಿ ಜನಿಸಿರುವ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಸರಿಯಾಗಿ ಒಂದು ತಿಂಗಳ ಹಿಂದಷ್ಟೇ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಮಾದರಿಗೆ ಪದಾರ್ಪಣೆ ಮಾಡಿದರು. ಇದೀಗ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಫೆಬ್ರುವರಿ 9ರಂದು ಕಟಕ್‌ನಲ್ಲಿ ಇಂಗ್ಲೆಂಡ್ ಎದುರಿನ ಏಕದಿನ ಪಂದ್ಯದಲ್ಲಿ ಅವರು ಮೊದಲ ಬಾರಿಗೆ ಆಡಿದ್ದರು. ಅದಕ್ಕೂ ಮುನ್ನ ಟಿ20 ಮತ್ತು ಐಪಿಎಲ್‌ನಲ್ಲಿ ಗಮನ ಸೆಳೆದಿದ್ದರು. ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಅವರನ್ನು ಭಾರತ ತಂಡಕ್ಕೆ ಕೊನೆಯ ಕ್ಷಣದಲ್ಲಿ ಸೇರ್ಪಡೆ ಮಾಡಲಾಗಿತ್ತು. ಅವರಿಗಾಗಿ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನು ಬಿಡಲಾಗಿತ್ತು. ಆಗ ಸಾಮಾಜಿಕ ಜಾಲತಾಣ ಗಳಲ್ಲಿ ಹಲವರಿಂದ ಟೀಕೆಗಳು ವ್ಯಕ್ತವಾಗಿದ್ದವು. ವರುಣ್ ಸೇರಿದಂತೆ ಐವರು ಸ್ಪಿನ್ನರ್‌ಗಳನ್ನು ತಂಡದಲ್ಲಿ ಇರುವುದರ ಬಗ್ಗೆಯೂ ಆಕ್ಷೇಪಗಳು ವ್ಯಕ್ತವಾಗಿದ್ದರು.

33 ವರ್ಷದ ವರುಣ್ ಅವರು ಗುಂಪು ಹಂತದ ಪಂದ್ಯದಲ್ಲಿ ಇದೇ ನ್ಯೂಜಿಲೆಂಡ್ ಎದುರು 5 ವಿಕೆಟ್ ಗೊಂಚಲು ಗಳಿಸಿದ್ದರು. ಸೆಮಿಫೈನಲ್‌ನಲ್ಲಿ 2 ಮತ್ತು ಫೈನಲ್‌ನಲ್ಲಿ 2 ವಿಕೆಟ್‌ಗಳನ್ನು ಗಳಿಸಿದರು. ಅವರು ಸ್ಪಿನ್ ಎಸೆತಗಳನ್ನು ಹದವಾದ ವೇಗದಲ್ಲಿ ಹಾಕುತ್ತಾರೆ. ಇದರಿಂದಾಗಿ ಬ್ಯಾಟರ್‌ಗಳು ವಿಚಲಿತರಾಗಿ ಔಟಾಗುತ್ತಾರೆ. ಒಟ್ಟಾರೆ ಆಯ್ಕೆ ಸಮಿತಿ ಮತ್ತು ತಂಡದ ಕೋಚ್ ಗೌತಮ್ ಗಂಭೀರ್ ಅವರ ವಿಶ್ವಾಸವನ್ನು ಉಳಿಸಿಕೊಂಡಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಅನುಪಸ್ಥಿತಿಯಲ್ಲಿ ತಂಡಕ್ಕೆ ಆಸರೆಯಾದರು.

‘ಲೈನ್ ಮತ್ತು ಲೆಂಗ್ತ್ ಅನ್ನು ನಿರಂತರವಾಗಿ ನಿರ್ವಹಿಸುವತ್ತಲೇ ನನ್ನ ಗಮನ’ ಎಂದು ಹೇಳುವ ಚಕ್ರವರ್ತಿ ದೇಶಿ ಕ್ರಿಕೆಟ್‌ನಲ್ಲಿ ತಮಿಳುನಾಡು ತಂಡವನ್ನು ಪ್ರತಿನಿಧಿಸುತ್ತಾರೆ.

ವರುಣ್ ಅವರ ತಂದೆ ವಿನೋದ್ ಚಕ್ರವರ್ತಿಯವರು ಐಟಿಎಸ್ ಅಧಿಕಾರಿಯಾಗಿ ಚೆನ್ನೈನಲ್ಲಿ ಕಾರ್ಯನಿರ್ವಹಿಸುತ್ತಾರೆ. ತಾಯಿ ಮಾಲಿನಿ ಅವರು ಕರ್ನಾಟಕದವರು. ಆದರೆ ವರುಣ್ ಅವರು ಬೆಳೆದಿದ್ದು ಚೆನ್ನೈನಲ್ಲಿ.

ನೃತ್ಯ, ಸಂಗೀತ ಹಾಗೂ ಬಿಳಿ ಕೋಟು..

ಹೋದ ವರ್ಷ ಅಮೆರಿಕ–ವೆಸ್ಟ್ ಇಂಡೀಸ್ ಜಂಟಿಯಾಗಿ ಆಯೋಜಿಸಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಚಾಂಪಿಯನ್ ಆಗಿತ್ತು. ಆಗ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಬ್ಬರೂ ಭಾವುಕರಾಗಿ ಪರಸ್ಪರ ಆಲಂಗಿಸಿಕೊಂಡಿದ್ದು ಕ್ರಿಕೆಟ್ ಅಭಿಮಾನಿಗಳ ಮನಗೆದ್ದಿತ್ತು. ಅವರಿಬ್ಬರ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂಬ ಸಂದೇಶವನ್ನೂ ಆ ಗೆಲುವು ನೀಡಿತು.

ಇದೀಗ ದುಬೈ ಅಂಗಳದಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿದ ನಂತರ ಅವರಿಬ್ಬರ ಸ್ನೇಹದ ಮತ್ತೊಂದು ಸುಮಧುರ ಕ್ಷಣ ದಾಖಲಾಯಿತು. ಗೆಲುವು ಒಲಿದ ಕೂಡಲೇ ಮೈದಾನಕ್ಕೆ ಧುಮುಕಿದ ಇಬ್ಬರೂ ಸ್ಟಂಪ್‌ಗಳನ್ನು ತೆಗೆದುಕೊಂಡು ದಾಂಡಿಯಾ (ಕೋಲಾಟ) ನೃತ್ಯ ಮಾಡುತ್ತ ಸಂಭ್ರಮಿಸಿದರು. ಅರ್ಷದೀಪ್ ಸಿಂಗ್ ಭಲ್ಲೆ ಭಲ್ಲೆ ಎಂದು ಬಾಂಗ್ರಾನೃತ್ಯ ಮಾಡಿದರೆ, ಶ್ರೇಯಸ್ ಅಯ್ಯರ್, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ ಅವರ ನೃತ್ಯವೂ ರಂಗೇರಿತು. ಅಷ್ಟೇ ಅಲ್ಲ. ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ ಕೂಡ ಕುಣಿದು ಕುಪ್ಪಳಿಸಿದರು.

ರೋಹಿತ್ ಶರ್ಮಾ ಅವರು ಗಣ್ಯರ ಗ್ಯಾಲರಿಯಲ್ಲಿದ್ದ ತಮ್ಮ ಪತ್ನಿ ರಿತಿಕಾ ಸಜ್ದೆ ಮತ್ತು ಮಗಳನ್ನೂ ಸೇರಿಕೊಂಡರು. ವಿರಾಟ್ ಕೊಹ್ಲಿ ಅವರನ್ನು ಪತ್ನಿ, ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಕೂಡ ಬಂದು ಸೇರಿಸಿಕೊಂಡರು. ಹಬ್ಬದ ವಾತಾವರಣ ಗರಿಗೆದರಿತು. ಕ್ರೀಡಾಂಗಣ ದಲ್ಲಿ ಸಿಡಿಮದ್ದಿನ ಬೆಳಕು ಪ್ರಜ್ವಲಿಸಿತು.

ಐಸಿಸಿ ಮುಖ್ಯಸ್ಥ ಜಯ್ ಶಾ ಮತ್ತು ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ಚಾಂಪಿಯನ್ಸ್ ಟ್ರೋಫಿ ಜಯಿಸಿದ ಭಾರತ ತಂಡದ ಪ್ರತಿಯೊಬ್ಬ ಆಟಗಾರನಿಗೂ ಸಾಂಪ್ರದಾಯಿಕ ಬಿಳಿ ಕೋಟು ತೊಡಿಸಿ ಅಭಿನಂದಿಸಿದರು.

ಕೈಚೆಲ್ಲಿದ 7 ಕ್ಯಾಚ್

ಫೈನಲ್ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ತಂಡದ ಆಟಗಾರರು ಒಟ್ಟು 7 ಕ್ಯಾಚ್‌ಗಳನ್ನು ಕೈಚೆಲ್ಲಿದರು. ಭಾರತ ತಂಡ 4 ಕ್ಯಾಚ್‌ಗಳನ್ನು ಕೈಚೆಲ್ಲಿದರೆ, ನ್ಯೂಜಿಲೆಂಡ್ ಆಟಗಾರರು 3 ಕ್ಯಾಚ್ ಬಿಟ್ಟರು.

ಸತತ ಟಾಸ್ ಸೋತ ನಾಯಕರು (ಏಕದಿನ ಕ್ರಿಕೆಟ್)

ಟಾಸ್ 12 **ರೋಹಿತ್ ಶರ್ಮಾ** (ಭಾರತ) ನವೆಂಬರ್ 2023- ಮಾರ್ಚ್ 2025

ಟಾಸ್ 12 **ಬ್ರಯನ್ ಲಾರಾ** (ವೆಸ್ಟ್ ಇಂಡೀಸ್) ಆಕ್ಟೋಬರ್ 1998- ಮೇ 1999

ಟಾಸ್ 11 **ಪೀಟರ್ ಬೊರೆನ್** (ನೆದರ್ಲೆಂಡ್ಸ್) ಮಾರ್ಚ್ 2011- ಆಗಸ್ಟ್ 2013

15 ಭಾರತ ತಂಡವು ಸತತ ಟಾಸ್ ಸೋತ ಏಕದಿನ ಪಂದ್ಯಗಳು.

> ಅಸಾಧಾರಣ ಪಂದ್ಯ, ಅಸಾಧಾರಣ ಫಲಿತಾಂಶ. ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ತವರಿಗೆ ಮರಳಿ ತರುತ್ತಿರುವ ನಮ್ಮ ತಂಡದ ಬಗ್ಗೆ ಹೆಮ್ಮೆ ಎನಿಸುತ್ತದೆ. ಆಲ್‌ರೌಂಡ್ ಪ್ರದರ್ಶನ ತೋರಿದ ಭಾರತ ತಂಡಕ್ಕೆ ಅಭಿನಂದನೆಗಳು.
> **ನರೇಂದ್ರ ಮೋದಿ,** ಪ್ರಧಾನಿ



ಕೆ.ಎಲ್. ರಾಹುಲ್ ಸಂಭ್ರಮ



ಅಭಿಮಾನಿಯೊಬ್ಬರ ಸಂಭ್ರಮ

ಐಸಿಸಿ ಚಾಂಪಿಯನ್ಸ್ ಟ್ರೋಫಿ ವಿಜೇತರು

ವರ್ಷ	ಆತಿಥ್ಯ	ಒಟ್ಟು ತಂಡ	ವಿಜೇತರು	ರನ್ನರ್ ಅಪ್	ಭಾರತದ ಸಾಧನೆ
1998	ಬಾಂಗ್ಲಾದೇಶ	9	ದಕ್ಷಿಣ ಆಫ್ರಿಕಾ	ವೆಸ್ಟ್ ಇಂಡೀಸ್	ಸೆಮಿಫೈನಲ್
2000	ಕೆನ್ಯಾ	11	ನ್ಯೂಜಿಲೆಂಡ್	ಭಾರತ	ರನ್ನರ್ ಅಪ್
2002	ಶ್ರೀಲಂಕಾ	12	ಭಾರತ ಮತ್ತು ಶ್ರೀಲಂಕಾಗಳಿಗೆ ಜಂಟಿ ಪ್ರಶಸ್ತಿ		ಚಾಂಪಿಯನ್
2004	ಇಂಗ್ಲೆಂಡ್	12	ವೆಸ್ಟ್ ಇಂಡೀಸ್	ಇಂಗ್ಲೆಂಡ್	ಗುಂಪು ಹಂತ
2006	ಭಾರತ	10	ಆಸ್ಟ್ರೇಲಿಯಾ	ವೆಸ್ಟ್ ಇಂಡೀಸ್	ಗುಂಪು ಹಂತ
2009	ದಕ್ಷಿಣ ಆಫ್ರಿಕಾ	8	ಆಸ್ಟ್ರೇಲಿಯಾ	ನ್ಯೂಜಿಲೆಂಡ್	ಗುಂಪು ಹಂತ
2013	ಇಂಗ್ಲೆಂಡ್	8	ಭಾರತ	ಇಂಗ್ಲೆಂಡ್	ಚಾಂಪಿಯನ್
2017	ಇಂಗ್ಲೆಂಡ್	8	ಪಾಕಿಸ್ತಾನ	ಭಾರತ	ರನ್ನರ್ ಅಪ್
2025	ಪಾಕಿಸ್ತಾನ	8	ಭಾರತ	ನ್ಯೂಜಿಲೆಂಡ್	ಚಾಂಪಿಯನ್

> ಇದೊಂದು ಉತ್ತಮ ಟೂರ್ನಿಯಾಗಿದೆ. ನಾವು ಇವತ್ತು ಒಂದು ಶ್ರೇಷ್ಠ ತಂಡದ ಎದುರು ಪರಾಭವಗೊಂಡಿದ್ದೇವೆ. ಈ ಪಯಣದಲ್ಲಿ ಹಲವು ಸವಾಲುಗಳನ್ನು ಎದುರಿಸುತ್ತ ಒಂದು ತಂಡವಾಗಿ ರೂಪುಗೊಂಡಿದ್ದೇವೆ.
> **ಮಿಚೆಲ್ ಸ್ಯಾಂಟನರ್,** ನ್ಯೂಜಿಲೆಂಡ್ ನಾಯಕ

> ಐಸಿಸಿ ಚಾಂಪಿಯನ್ಸ್ ಟ್ರೋಫಿ ಗೆದ್ದ ನಿಮಗೆ ಅಭಿನಂದನೆಗಳು. ನೀವು ಕ್ರೀಡಾಂಗಣದಲ್ಲಿ ತೋರಿದ ಪ್ರಾಬಲ್ಯ ದೇಶವನ್ನು ಹೆಮ್ಮೆಪಡುವಂತೆ ಮಾಡಿದ್ದೀರಿ.
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ಚಾಂಪಿಯನ್ಸ್‌ಗೆ ಅಭಿನಂದನೆಗಳು. ಕೋಟಿ ಕೋಟಿ ಹೃದಯಗಳನ್ನು ಹೆಮ್ಮೆಪಡುವಂತೆ ಮಾಡಿದ್ದೀರಿ. ಟೂರ್ನಿಯ ಪ್ರದರ್ಶನ ಸ್ಫೂರ್ತಿದಾಯಕವಾಗಿತ್ತು.
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

> ಪ್ರತಿ ಪಂದ್ಯದಲ್ಲೂ ರನ್ ಗಳಿಸುತ್ತಾ, ತಂಡವನ್ನು ಗೆಲುವಿನ ದಡ ಸೇರಿಸುತ್ತಿರುವ ನಾಡಿನ ಮನೆಮಗ ಕೆ.ಎಲ್.ರಾಹುಲ್ ಆಟ ಹೆಚ್ಚು ಖುಷಿಕೊಟ್ಟಿದೆ. ಭಾರತ ಗೆದ್ದಿದೆ.. ಈ ಸಲ ಕಪ್ ನಮ್ದೆ..
> **ಸಿದ್ದರಾಮಯ್ಯ,** ಸಿ.ಎಂ, ಕರ್ನಾಟಕ

> ಭಾರತ ತಂಡ ಅಮೋಘ ಪ್ರದರ್ಶನ ನೀಡಿ ಚಾಂಪಿಯನ್ಸ್ ಟ್ರೋಫಿ ಗೆದ್ದುಕೊಂಡಿದೆ. ಕಳೆದ ವರ್ಷ ಟಿ20 ವಿಶ್ವಕಪ್ ಗೆಲುವಿನ ನಂತರ ಸತತವಾಗಿ ಐಸಿಸಿ ಟೂರ್ನಿ ಗೆದ್ದಿದ್ದಕ್ಕೆ ಅಭಿನಂದನೆಗಳು.
> **ಜಯ್ ಶಾ,** ಐಸಿಸಿ ಮುಖ್ಯಸ್ಥ

ಅಗ್ರಸ್ಥಾನದತ್ತ ಹರ್ಮನ್ ಬಳಗದ ಕಣ್ಣು



ಹರ್ಮನ್‌ಪ್ರೀತ್



ಆ್ಯಷ್ಲೆ ಗಾರ್ಡನರ್

ಮಹಿಳಾ ಪ್ರೀಮಿಯರ್ ಲೀಗ್

ಮುಂಬೈ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ಈಗಾಗಲೇ ನಾಕೌಟ್ ಹಂತ ತಲುಪಿರುವ ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಜೈಂಟ್ಸ್ ತಂಡಗಳು ಸೋಮವಾರ ಇಲ್ಲಿ ಮುಖಾಮುಖಿಯಾಗಲಿವೆ.

ಲಖನೌನಲ್ಲಿ ಶನಿವಾರ ನಡೆದಿದ್ದ ಪಂದ್ಯದಲ್ಲಿ ಯು.ಪಿ. ವಾರಿಯರ್ಸ್ ತಂಡವು ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 12 ರನ್‌ಗಳಿಂದ ಸೋಲಿಸಿತ್ತು. ಅದರೊಂದಿಗೆ ಆರ್‌ಸಿಬಿಯು ಆಡಿರುವ 7 ಪಂದ್ಯಗಳಲ್ಲಿ 5ರಲ್ಲಿ ಸೋತು ನಾಕೌಟ್ ಪ್ರವೇಶದ ಅವಕಾಶವನ್ನು ಕಳೆದುಕೊಂಡಿತು. ವಾರಿಯರ್ಸ್ ತಂಡವು ಈ ಮುಂಚೆಯೇ ನಾಕೌಟ್ ಪ್ರವೇಶದಿಂದ ಹೊರಬಿತ್ತು.

ಇನ್ನುಳಿದಿರುವ ಮುಂಬೈ, ಗುಜರಾತ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ನಾಕೌಟ್ ಪ್ರವೇಶ ಖಚಿತಪಡಿಸಿಕೊಂಡಿವೆ. ಆದರೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದು ನೇರ ಫೈನಲ್ ಪ್ರವೇಶಿಸಲು ಪೈಪೋಟಿ ನಡೆಸುತ್ತಿವೆ. 10 ಅಂಕ ಗಳಿಸಿರುವ ಡೆಲ್ಲಿ ಅಗ್ರಸ್ಥಾನದಲ್ಲಿದೆ. ತನ್ನ ಎಲ್ಲ 8 ಪಂದ್ಯಗಳನ್ನೂ ಆಡಿದೆ.

ತಲಾ 8 ಅಂಕ ಗಳಿಸಿರುವ ಗುಜರಾತ್ ಮತ್ತು ಮುಂಬೈ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಗುಜರಾತ್ ಇನ್ನೊಂದು ಮತ್ತು ಮುಂಬೈ ಇನ್ನೆರಡು ಪಂದ್ಯಗಳನ್ನು ಆಡಬೇಕಿದೆ. ಒಂದೊಮ್ಮೆ ಮುಂಬೈ ಎರಡೂ ಪಂದ್ಯಗಳಲ್ಲಿ ಗೆದ್ದರೆ ಅಗ್ರಸ್ಥಾನಕ್ಕೇರುವುದು ಖಚಿತ.

ಆದ್ದರಿಂದ ಗುಜರಾತ್ ಎದುರು ಜಯಿಸುವತ್ತ ಕಣ್ಣಿಟ್ಟಿದೆ. ತನ್ನ ಕೊನೆಯ ಪಂದ್ಯವನ್ನು ಆರ್‌ಸಿಬಿ ಎದುರು ಆಡಲಿದೆ. ಮುಂಬೈ ತಂಡದ ಹೆಲಿ ಮ್ಯಾಥ್ಯೂಸ್, ಆಲ್‌ರೌಂಡರ್ ನ್ಯಾಟ್ ಶಿವರ್ ಬ್ರಂಟ್ ಅವರು ಅಮೋಘ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಐದು ವಿಕೆಟ್ ಗಳಿಸಿದ್ದ ಅಮೆಲಿಯಾ ಕೆರ್ ಬೌಲಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ. ಮಧ್ಯಮವೇಗಿ ಶಬ್ನಿಮ್ ಇಸ್ಮಾಯಿಲ್ ಅವರು ಕಳೆದ ಪಂದ್ಯದಲ್ಲಿ ಹೆಚ್ಚು ರನ್‌ಗಳನ್ನು ನೀಡಿದ್ದರು. ಅವರು ತಮ್ಮ ಲಯಕ್ಕೆ ಮರಳಿದರೆ ಮುಂಬೈ ಬೌಲಿಂಗ್ ಮತ್ತಷ್ಟು ಬಲಿಷ್ಠವಾಗಲಿದೆ.

ಆ್ಯಷ್ಲೆ ಗಾರ್ಡನರ್ ನಾಯಕತ್ವದ ಗುಜರಾತ್ ತಂಡವು ವಡೋದರಾದಲ್ಲಿ ಮೊದಲ ಹಂತದ ಪಂದ್ಯಗಳು ಮುಗಿದಾಗ ಪಾಯಿಂಟ್ ಪಟ್ಟಿಯಲ್ಲಿ ಕೊನೆ ಸ್ಥಾನದಲ್ಲಿತ್ತು. ನಂತರದ ಪಂದ್ಯಗಳಲ್ಲಿ ಅಮೋಘ ಆಟವಾಡಿ ನಾಕೌಟ್ ಹಂತಕ್ಕೆ ಪ್ರವೇಶ ಗಿಟ್ಟಿಸಿದೆ. ತಂಡದ ಬೆತ್ ಮೂನಿ, ಹರ್ಲಿನ್ ಡಿಯೋಲ್, ಗಾರ್ಡನರ್, ದಿಯಾಂದ್ರ ಡಾಟಿನ್ ಅವರು ಉತ್ತಮ ಲಯದಲ್ಲಿದ್ದಾರೆ. ಮೊದಲ ಸುತ್ತಿನ ಪಂದ್ಯದಲ್ಲಿ ಮುಂಬೈ ತಂಡದ ಎದುರು ಗುಜರಾತ್ ಸೋತಿತ್ತು. ಇದೀಗ ಮುಯ್ಯಿ ತೀರಿಸಿಕೊಳ್ಳುವ ಅವಕಾಶ ಒದಗಿಬಂದಿದೆ.

ಪಂದ್ಯ ಆರಂಭ : ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಕೆಎಸ್‌ಸಿಎ ಸಭಾಭವನದಲ್ಲಿ ಕರ್ನಾಟಕ ಅಂಪೈರಿಂಗ್ ಪರಂಪರೆಯ ಮೆಲುಕು

ಅಂತರರಾಷ್ಟ್ರೀಯ ಅಂಪೈರಿಂಗ್‌ನಲ್ಲಿ ಬೆಳಗಿದವರಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ಕರ್ನಾಟಕ ಕ್ರಿಕೆಟ್ ಅಂಪೈರಿಂಗ್ ಪರಂಪರೆ ಅನಾವರಣಗೊಂಡಿತು. ಕ್ರಿಕೆಟ್‌ನ ಮಹತ್ವದ ವಿಶ್ವ ದಾಖಲೆಗಳಿಗೆ ಸಾಕ್ಷಿಯಾದ ‘ದಿಗ್ಗಜ ಅಂಪೈರ್’ಗಳು ಅಲ್ಲಿ ಸೇರಿದ್ದರು.

‘ಅಂಪೈರ್ ನಿರ್ಣಯವೇ ಅಂತಿಮ’ ಎಂಬ ಕಾಲಘಟ್ಟದಲ್ಲಿ ಕಠಿಣ ತೀರ್ಪುಗಳನ್ನು ನೀಡಿ ಸೈ ಎನಿಸಿಕೊಂಡವರು, ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ (ಯುಡಿಆರ್‌ಎಸ್) ಕಾಲದಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದವರೂ ಅಲ್ಲಿದ್ದರು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮತ್ತು ಕರ್ನಾಟಕ ಕ್ರಿಕೆಟ್ ಅಂಪೈರ್ಸ್ ಸಂಸ್ಥೆ (ಎಸಿಯುಕೆ) ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಟೆಸ್ಟ್ ಮತ್ತು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ನಲ್ಲಿ ಕಾರ್ಯನಿರ್ವಹಿಸಿದ ಮಾಜಿ ಅಂಪೈರ್‌ಗಳನ್ನು ಗೌರವಿಸಲಾಯಿತು.



ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮತ್ತು ಕರ್ನಾಟಕ ಕ್ರಿಕೆಟ್ ಅಂಪೈರ್ಸ್ ಸಂಸ್ಥೆಯ ಆಶ್ರಯದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಟೆಸ್ಟ್ ಮತ್ತು ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್‌ನ ಮಾಜಿ ಅಂಪೈರ್‌ಗಳನ್ನು ಗೌರವಿಸಲಾಯಿತು (ಎಡದಿಂದ), ಕುಳಿತವರು ವಿನಾಯಕ್ ಎನ್ ಕುಲಕರ್ಣಿ, ಬಿ ಆರ್ ಕೇಶವಮೂರ್ತಿ, ವಿ. ವಿಕ್ರಂ ರಾಜು, ಎ.ಎಲ್. ನರಸಿಂಹನ್, ಎ. ವಿ. ಜಯಪ್ರಕಾಶ್, ನಂದನ್, ಶಾವೀರ್ ಕೆ ತಾರಾಪುರ್ ಅವರನ್ನು ಸನ್ಮಾನಿಸಲಾಯಿತು. ನಿಂತವರು; ವಿಜಯಪ್ರಕಾಶ್, ಬಿ.ಎಸ್ ವಿಶ್ವನಾಥ್, ಬಿ ಎಸ್ ರಘೋತ್ತಮ್, ಜೆ ನಾಗರಾಜ್, ಕೆಎಸ್‌ಸಿಎ ಖಜಾಂಜಿ ಜಯರಾಮ್ , ಕೆಎಸ್‌ಸಿಎ ಕಾರ್ಯದರ್ಶಿ ಶಂಕರ್, ಎಸಿಯುಕೆ ಅಧ್ಯಕ್ಷ ಪ್ರದಾನ್ ಕುಮಾರ್ ಅರಸ್, ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ , ಮಾಜಿ ಕೆಎಸ್‌ಸಿಎ ಜಂಟಿ ಕಾರ್ಯದರ್ಶಿ ಸುಧಾಕರ್, ರಘುನಾಥ್ ಬಿರಾಲ, ಪ್ರಸನ್ನ ನರಸಿಂಹ ರಾವ್, ಭಾರತ ತಂಡದ ಮಾಜಿ ಆಟಗಾರ ದೊಡ್ಡ ಗಣೇಶ್ ಹಾಜರಿದ್ದರು ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಚೆನ್ನೈನಲ್ಲಿ (ಆಗಿನ ಮದ್ರಾಸ್) ನಡೆದಿದ್ದ ಭಾರತ ಮತ್ತು ಆಸ್ಟ್ರೇಲಿಯಾ ಟೆಸ್ಟ್ ಪಂದ್ಯವು ಟೈ ಆದ ಐತಿಹಾಸಿಕ ಸಂದರ್ಭದಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದ ವಿಕ್ರಂ ರಾಜು, ದೆಹಲಿಯ ಫಿರೋಜ್ ಶಾ ಕೋಟ್ಲಾ ಅಂಗಳದಲ್ಲಿ ಪಾಕಿಸ್ತಾನ ಎದುರಿನ ಟೆಸ್ಟ್‌ನಲ್ಲಿ ಒಂದೇ ಇನಿಂಗ್ಸ್‌ನಲ್ಲಿ ಅನಿಲ್ ಕುಂಬ್ಳೆ 10 ವಿಕೆಟ್ ಗಳಿಸಿದಾಗ ಅಂಪೈರಿಂಗ್ ಮಾಡಿದ್ದ ಎ.ವಿ. ಜಯಪ್ರಕಾಶ್, ಗ್ವಾಲಿಯರ್‌ನಲ್ಲಿ ಸಚಿನ್ ತೆಂಡೂಲ್ಕರ್ ದ್ವಿಶತಕ ಗಳಿಸಿದ್ದಾಗ ಕಾರ್ಯನಿರ್ವಹಿಸಿದ್ದ ಶಾವೀರ್ ತಾರಾಪುರೆ, ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಅನುಮೋದಿಸಿದ ಕ್ರಿಕೆಟ್ ನಿಯಮಗಳನ್ನು ಕನ್ನಡದಲ್ಲಿ ಪ್ರಕಟಿಸಿದ ಮೊದಲ ಲೇಖಕ, ಅಂಪೈರ್ ವಿನಾಯಕ ಕುಲಕರ್ಣಿ, ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಅಂಪೈರ್‌ಗಳಾದ ಬಿ.ಆರ್. ಕೇಶವಮೂರ್ತಿ, ಎ.ಎಲ್. ನರಸಿಂಹನ್ ಹಾಗೂ ಸಿ.ಕೆ. ನಂದನ್ ಅವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಕಾರ್ಯದರ್ಶಿ ಶಂಕರ್, ಖಜಾಂಚಿ ಜಯರಾಮ್, ಎಸಿಯುಕೆ ಅಧ್ಯಕ್ಷ ಪ್ರಧಾನ್ ಕುಮಾರ್ ಅರಸ್, ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರರಾದ ಸುಧಾಕರ್ ರಾವ್, ದೊಡ್ಡಗಣೇಶ್, ಕರ್ನಾಟಕ ರಣಜಿ ತಂಡದ ಮಾಜಿ ಆಟಗಾರಾದ ವಿಜಯಪ್ರಕಾಶ್, ರಘುನಾಥ್ ಬಿರಾಲಾ, ಬಿ.ಎಸ್. ವಿಶ್ವನಾಥ್ ಮತ್ತಿತರರು ಹಾಜರಿದ್ದರು.